ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 11 ಮಂಗಳವಾರ 2023

ಸಂಪುಟ: 43 | ಸಂಚಿಕೆ: 351 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಸಿದ್ಧವಾಗಿದೆ; ಒಂದೆರಡು ದಿನದಲ್ಲಿ ಬಿಡುಗಡೆ

ಮುಳಬಾಗಿಲು (ಕೋಲಾರ): ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಸಿದ್ಧ ಮಾಡಿಟ್ಟಿದ್ದೇನೆ. ನಾನು ಬಳ್ಳಾರಿಗೆ ತೆರಳುತ್ತಿದ್ದು, ಮೂರು ದಿನ ಬೆಂಗಳೂರಿನಲ್ಲಿ ಇರುವುದಿಲ್ಲ. ಒಂದೆರಡು ದಿನಗಳಲ್ಲಿ ಪಟ್ಟಿ ಬಿಡುಗಡೆ ಮಾಡಿಸುತ್ತೇನೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಸೋಮವಾರ ತಾಲೂಕಿನ ಶಿನಗೇನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಹಾಸನ ಕ್ಷೇತ್ರದ ಅಭ್ಯರ್ಥಿಯೂ ಅಂತಿಮವಾಗಿದೆ. ನಮ್ಮ ಪಂಚರತ್ನ ರಥಯಾತ್ರೆ ಯಶಸ್ಸು ಎದುರಾಳಿಗಳಲ್ಲಿ ನಡುಕ ಉಂಟು ಮಾಡಿದೆ ಎಂದರು.

ವರುಣಾ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಎದುರಿನ ಜೆಡಿಎಸ್ ಅಭ್ಯರ್ಥಿ ಕುರಿತು, ಅಭಿಷೇಕ್ ಎಂಬ ಅಭ್ಯರ್ಥಿ ನಿಲ್ಲಿಸಿದ್ದೆವು. ಕಳೆದ ಬಾರಿಯೂ ಟಿಕೆಟ್ ನೀಡಿದ್ದೆವು. ಈ ಬಾರಿ ಅವರು ಹಿಂದೆ ಸರಿದಿದ್ದಾರೆ ಎಂಬ ಮಾಹಿತಿ ಬಂದಿದೆ. ಇನ್ನೂ ಅವರನ್ನು ಸಂಪರ್ಕಿಸಿಲ್ಲ. ಸ್ಪರ್ಧೆ ಮಾಡಲ್ಲವೆಂದರೆ ಬೇರೆ ಅಭ್ಯರ್ಥಿ ಕಣಕ್ಕಿಳಿಸುತ್ತೇವೆ ಎಂದು ನುಡಿದರು.

ನಂಜನಗೂಡು ಕ್ಷೇತ್ರದಲ್ಲಿ ಪಕ್ಷದಿಂದ ಅಭ್ಯರ್ಥಿ ಕಣಕ್ಕಿಳಿಸಬೇಕೇ ಬೇಡವೇ ಎಂಬುದನ್ನು ಚರ್ಚಿಸಿ ತೀರ್ಮಾನಿಸುತ್ತೇವೆ. ಸ್ಥಳೀಯವಾಗಿ ಈಗಾಗಲೇ ಮಾತನಾಡಿಕೊಂಡಿದ್ದಾರೆ ಎಂದು ಹೇಳಿದರು. ●9ನೇ ಪುಟಕ್ಕೆ

ಬಿಜೆಪಿ ವರಿಷ್ಠರಿಗೆ ಕಬ್ಬಿಣದ ಕಡಲೆಯಾಗಿರುವ 40 ಕ್ಷೇತ್ರ

■ ಮೂರು ದಿನದಿಂದ ನಿರಂತರ ಸಭೆ ನಂತರ 160ರಿಂದ 175 ಕ್ಷೇತ್ರದ ಅಭ್ಯರ್ಥಿಗಳು ಅಂತಿಮ ■ ಬಹುತೇಕ ಸಂಘ ಪರಿವಾರದ ಶಿಫಾರಸ್ಸಿನಂತೆ ಅಭ್ಯರ್ಥಿಗಳ ಆಯ್ಕೆ ■ ಕೆಲ ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ಸಂಬಂಧ ಯಡಿಯೂರಪ್ಪ–ಸಂತೋಷ್ ನಡುವೆ ಅಸಮಾಧಾನ ■ ಯಡಿಯೂರಪ್ಪರ ಹೊರಗಿಟ್ಟು ಅಭ್ಯರ್ಥಿಗಳ ಆಯ್ಕೆ ಸರ್ಕಸ್




ಬೆಂಗಳೂರು, ಏ.10(ಕೆಎಂಶಿ)– ನಲವತ್ತು ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಬಿಜೆಪಿ ವರಿಷ್ಠರಿಗೆ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದೆ.

ರಾಜ್ಯ ವಿಧಾನಸಭೆಯ 224 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗೆ ಕಳೆದ ಮೂರು ದಿನಗಳಿಂದ ಸತತವಾಗಿ ಸಭೆಗಳನ್ನು ನಡೆಸಿ 160ರಿಂದ 175 ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಲಾಗಿದೆ. ಸಂಘ ಪರಿವಾರದ ಶಿಫಾರಸ್ಸನ್ನು ಕೇಂದ್ರ ಸಂಸದೀಯ ಮಂಡಳಿ ಹೆಚ್ಚು ಮಾನ್ಯ ಮಾಡಿದ್ದು, ಇದ

170ರಿಂದ 180 ಅಭ್ಯರ್ಥಿಗಳ ಆಯ್ಕೆ ಆಗಿದೆ

ಬೆಂಗಳೂರು, ಏ.10(ಕೆಎಂಶಿ)–ಕರ್ನಾಟಕ ವಿಧಾನಸಭೆ ಚುನಾವಣೆಗೆ ಬಹುತೇಕ ಹುರಿಯಾಳುಗಳನ್ನು ಅಂತಿಮಗೊಳಿಸಿದ್ದು, ಪಟ್ಟಿ ಯಾವುದೇ ಕ್ಷಣದಲ್ಲಿ ಹೊರ ಬೀಳಲಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ. ದೆಹಲಿಯಲ್ಲಿ ಇಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 170 ರಿಂದ 180 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಯಾಗಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಅಭ್ಯರ್ಥಿಗಳ ಪಟ್ಟಿ ಬಿಡುಗಡೆಗೊಳಿಸಲಿದ್ದಾರೆ ಎಂದರು. ಪ್ರತಿ ವಿಧಾನಸಭಾ ಕ್ಷೇತ್ರದ ವಿಷಯದಲ್ಲೂ ವಿವಿಧ ಹಂತಗಳಲ್ಲಿ ಸಭೆ ನಡೆಸಿ ಗೆಲ್ಲುವ ಸಾಮರ್ಥ್ಯವಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ. ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂಬ ಒಂದೇ ಮಾನದಂಡವನ್ನು ಇಟ್ಟುಕೊಂಡು ಅಭ್ಯರ್ಥಿಗಳ ಆಯ್ಕೆ ಮಾಡಿದ್ದು, ನಮ್ಮಲ್ಲಿ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು. ಮೂರು ದಿನಗಳಿಂದ ನಿರಂತರ ಸಭೆ ನಡೆಸಿದ್ದೇವೆ ಎಂದರೆ ನೀವೆ ಅರ್ಥ ಮಾಡಿಕೊಳ್ಳಿ ಯಾವ ಕ್ಷೇತ್ರದಲ್ಲೂ ಬೆರಳು ತೋರಿಸಬಾರದು. ಸಂಘಟನೆ ಮತ್ತು ಕಾರ್ಯಕರ್ತರ ಅಭಿಪ್ರಾಯಗಳಿಗೆ ಮನ್ನಣೆ ನೀಡುವ ರೀತಿಯಲ್ಲಿ ಪಟ್ಟಿ ಸಿದ್ಧವಾಗಿದೆ ಎಂದರು.



ಮಂಗಳವಾರ ಯಾವ ಘಳಿಗೆಯಲ್ಲಾದರೂ ಪಟ್ಟಿ ಬಿಡುಗಡೆ: ಪ್ರಹ್ಲಾದ್ ಜೋಷಿ

ಇಂದು ಇಲ್ಲವೇ ನಾಳೆ ಪಟ್ಟಿ ಬಿಡುಗಡೆ ಆಗಬಹುದು: ಮುಖ್ಯಮಂತ್ರಿ ಬೊಮ್ಮಾಯಿ

ರಿಂದ ಅಭ್ಯರ್ಥಿಗಳ ಪ್ರಕಟಣೆಯ ನಂತರ ಪಕ್ಷದಲ್ಲಿ ಬಂಡಾಯವೇಳುವ ಸುಳಿವು ವರಿಷ್ಠರಿಗೆ ದೊರೆತಿದೆ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಮ್ಯಾಜಿಕ್ ಸಂಖ್ಯೆಯ ಗುರಿಗಾಗಿ ಕೇಂದ್ರ ಗೃಹಸಚಿವ ಅಮಿತ್ ಶಾ ಇಂದು ಇಡೀ ದಿನ ರಾಜ್ಯ ಮತ್ತು ಕೇಂದ್ರ ನಾಯಕರೊಂದಿಗೆ ಸಮಾಲೋಚನೆ ಮಾಡಿದ್ದಾರೆ. ಪರಿವಾರ ಮತ್ತು ಸಂತೋಷ್ ಮಾಡಿರುವ ಶಿಫಾರಸ್ಸುಗಳಿಗೆ ಅಮಿತ್ ಶಾ ತಲೆದೂಗಿರುವುದರಿಂದ ಬಿಜೆಪಿ ರಾಜ್ಯ ಕೋರ್ ಕಮಿಟಿ ಮಾಡಿದ ಶಿಫಾರಸ್ಸುಗಳಿಗೆ ಅಂತಹ ●9ನೇ ಪುಟಕ್ಕೆ

ಕೆಎಂಎಫ್ ಮುಗಿಸಲು 15 ವರ್ಷದ ಹಿಂದೆಯೇ ಷಡ್ಯಂತರ ನಡೆದಿತ್ತು...

■ ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ ■ 2008ರಲ್ಲೇ ಬೆಂಗಳೂರು ವಿವಿ ಜ್ಞಾನಭಾರತಿ ಆವರಣದಲ್ಲಿ ಅಮುಲ್ ಘಟಕ ಸ್ಥಾಪನೆ ಯತ್ನ ನಡೆದಿತ್ತು ■ ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ ಮೆಚ್ಚಿಸಲು ಸ್ಥಳೀಯ ಬಿಜೆಪಿ ಸರ್ಕಾರ ಮುಂದಾಗಿತ್ತು ■ ಆಗ ಕೆಎಂಎಫ್ ಅಧ್ಯಕ್ಷರಾಗಿದ್ದ ಹೆಚ್.ಡಿ.ರೇವಣ್ಣ ಅವಕಾಶ ನೀಡಲಿಲ್ಲ



ಬೆಂಗಳೂರು, ಏ.10(ಕೆಎಂಶಿ)– ಕೆಎಂಎಫ್ ಆಪೋಶನಕ್ಕೆ ಕೇಂದ್ರ ಬಿಜೆಪಿ ಸರಕಾರ ಮೂರನೇ ಸಂಚು ರೂಪಿಸಿದೆ ಎಂದು ಗಂಭೀರ ಆರೋಪ ಮಾಡಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು, 2008ರಲ್ಲಿಯೇ ನಂದಿನಿಯನ್ನು ಮುಗಿಸಲು ಬಿಜೆಪಿ ಹೊರಟಿತ್ತು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, 2008ರಲ್ಲಿಯೇ ರಾಜ್ಯದ ಬಿಜೆಪಿ ಸರಕಾರ ರಾಜ್ಯದಲ್ಲಿ ಅಮುಲ್ ಮಾರುಕಟ್ಟೆ ವಿಸ್ತರಣೆಗೆ ಬೆಂಬಲ ನೀಡಿತ್ತು ಎಂದು ತಿಳಿಸಿದ್ದಾರೆ. ಸ್ವಯಂ ಘೋಷಿತ ದೇಶೋದ್ಧಾರಕ ಪಕ್ಷ ರಾಷ್ಟ್ರ ಬಿಜೆಪಿ ಹಾಗೂ ರಾಜ್ಯ ಬಿಜೆಪಿ ಪಕ್ಷಗಳ ರಾಜಕಾರಣವೇ ಅನುಮಾನಾಸ್ಪದ. ಒಂದೆಡೆ ಉದ್ಧರಿಸುವ ಮಾತು, ಇನ್ನೊಂದೆಡೆ ಕತ್ತರಿಸುವ ಕೆಲಸ. ಮಾತು ಒಂದು, ಕೃತಿ ಇನ್ನೊಂದು!! ಇದು ಬಿಜೆಪಿಯ (ಭರ)ವರಸೆ!! ಎಂದಿರುವ ಅವರು ಬಿಜೆಪಿಯೇ ಭರವಸೆ ಎನ್ನುವ ಆ ಪಕ್ಷದ



ಘೋಷ ವಾಕ್ಯವನ್ನು ಬಿಜೆಪಿಯ ವರಸೆ ಎಂದು ಮೂದಲಿಸಿ, ಅದನ್ನೇ ಹ್ಯಾಷ್ ಟ್ಯಾಗ್ ಹಾಕಿದ್ದಾರೆ.

ಒಂದು ಕಡೆ ಸಫಾರಿ! ಇನ್ನೊಂದು ಕಡೆ ಸುಪಾರಿ!! ಇದು ಬಿಜೆಪಿಯು ಆದಿಯಿಂದ ನಡೆದುಕೊಂಡು ಬಂದ ದಾರಿ. ಕೆಎಂಎಫ್ ಮತ್ತು ನಂದಿನಿ ವಿಷಯದಲ್ಲೂ ಆ ಪಕ್ಷದ್ದು ಅದೇ ವರಸೆ. ಸ್ಲೋಗನ್‌ನಲ್ಲಿ ಮಾತ್ರ 'ಬಿಜೆಪಿಯೇ ಭರವಸೆ', ಇದೇ ನೋಡಿ ಅದರ ಅಸಲಿ ವರಸೆ!! ಮೋದಿ ಅವರು ಚುನಾವಣೆ ಹೊತ್ತಿನಲ್ಲಿ ತಮ್ಮೆಲ್ಲ ಅಗಾಧ ಕಾರ್ಯಭಾರ ಬದಿಗಿಟ್ಟು ಸಫಾರಿ ಮಾಡಿಹೋಗಿದ್ದಾರೆ. ಸ್ಥಳಕ್ಕೊಂದು ●9ನೇ ಪುಟಕ್ಕೆ

ನಿವೃತ್ತ ಐಪಿಎಸ್ ಅಧಿಕಾರಿ ಪುತ್ರಿಗೆ ವರದಕ್ಷಿಣೆ ಕಿರುಕುಳ: ಕೊಲೆ ಬೆದರಿಕೆ ಆರೋಪ

ಕೊಡಗು ಜಿಪಂ ಸಿಇಓ ಆಕಾಶ್ ಶಂಕರ್ ಸೇರಿ ಅವರ ಕುಟುಂಬದ ವಿರುದ್ಧ ಕೇಸ್ ದಾಖಲು

ಮೈಸೂರು, ಏ. 10– ಕೊಡಗು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಕಾಶ್ ಶಂಕರ್ ಮತ್ತು ಅವರ ಕುಟುಂಬದವರ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಕೊಲೆ ಬೆದರಿಕೆ, ದೂರು ದಾಖಲಾಗಿದೆ. ಐಎಎಸ್ ಅಧಿಕಾರಿ ಆಕಾಶ್ ಶಂಕರ್(33), ಅವರ ತಂದೆ ರೈಲ್ವೆ ಇಲಾಖೆ ನಿವೃತ್ತ ಉದ್ಯೋಗಿ ಶಂಕರ್(63), ತಾಯಿ ಚಂದ್ರಿಕಾ(55), ಸಹೋದರ ವಿಕಾಶ್ ಶಂಕರ್(29) ಆರೋಪಕ್ಕೆ ಗುರಿಯಾದವರಾಗಿದ್ದು, ವೃತ್ತಿಯಲ್ಲಿ ವೈದ್ಯೆಯಾಗಿದ್ದು, ನಿವೃತ್ತ ಐಪಿಎಸ್ ಅಧಿಕಾರಿಯ ಪುತ್ರಿಯಾಗಿರುವ ಆಕಾಶ್ ಪತ್ನಿ ಡಾ. ಎಸ್. ವಂದನಾ ಅವರು ಬೆಂಗಳೂರಿನ ಪೂರ್ವ ವಲಯದ ಮಹಿಳಾ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವಿವರ: ಆಕಾಶ್ ಮತ್ತು ವಂದನಾ ಅವರ ನಿಶ್ಚಿತಾರ್ಥ 2022ರ ಮಾರ್ಚ್ 1ರಂದು ನಡೆದಿದ್ದು, ಅದೇ ವರ್ಷ ಜೂನ್ 10ರಂದು ವಿವಾಹ ನೆರವೇರಿತ್ತು. ನಿಶ್ಚಿತಾರ್ಥಕ್ಕೆ ದಿನಾಂಕ ನಿಗದಿಯಾದ ನಂತರ ಆಕಾಶ್ ಕುಟುಂಬದವರು ಟೊಯೊಟೋ ಫಾರ್ಚುನರ್ ಅಥವಾ ಲ್ಯಾಂಡ್ ರೋವರ್ ಡಿಸ್ಕವರಿ ಸ್ಪೋರ್ಟ್ಸ್ ಕಾರು ನೀಡಬೇಕೆಂದು ಒತ್ತಾಯಿಸಿದ್ದರು. ಆದರೆ, ತಮ್ಮ ತಂದೆ ಅವರಿಗೆ 1.05 ಕೋಟಿ ರೂ. ಮೌಲ್ಯದ ಆಡಿ ಕ್ಯೂ7 ಕಾರನ್ನು ಕೊಡಿಸಿದ್ದರು. ನಂತರ ಆಕಾಶ್ ಕುಟುಂಬದವರು ಡೈಮಂಡ್ ವಾಚ್ ಕೇಳಿದ್ದರಾದರೂ ನಾವು 1.29 ಲಕ್ಷ ರೂ. ಮೌಲ್ಯದ ರ‍್ಯಾಡೊ ವಾಚ್ ಕೊಡಿಸಿದ್ದೆವು. ಮದುವೆ ಸಂದರ್ಭದಲ್ಲಿ ಆಕಾಶ್‌ನ ಸೂಟ್‌ಗಾಗಿ 10 ಲಕ್ಷ ರೂ. ನೀಡಲಾಗಿತ್ತು. ಮದುವೆ ವೇಳೆ ತನಗೆ ಉಡುಗೊರೆಯಾಗಿ ಬಂದಿದ್ದ 200 ಗ್ರಾಂ ಚಿನ್ನಾಭರಣ, ಒಂದು ಕೆಜಿ ಬೆಳ್ಳಿ ಪದಾರ್ಥ ಮತ್ತು 5 ಲಕ್ಷ ರೂ. ನಗದನ್ನೂ ಕೂಡ ತಮಗೇ ಬೇಕು ಎಂದು ಆಕಾಶ್ ತಾಯಿ ಪಡೆದುಕೊಂಡರು ಎಂದು ಡಾ. ವಂದನಾ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಇಷ್ಟೆಲ್ಲಾ ವರದಕ್ಷಿಣೆಯನ್ನು ಬಲವಂತವಾಗಿ ಪಡೆದಿದ್ದರೂ ಕೂಡ ಆಕಾಶ್, ತಾನು ಐಎಎಸ್ ಅಧಿಕಾರಿಯಾಗಿದ್ದು, ಐಷಾರಾಮಿ ವಾಹನಗಳು, ಬೆಂಗಳೂರಿನಲ್ಲಿ ಆಸ್ತಿ ಸೇರಿದಂತೆ 100 ಕೋಟಿ ರೂ. ವರದಕ್ಷಿಣೆ ಪಡೆಯಬಹುದಾಗಿತ್ತು ಎಂದು ಹೇಳುತ್ತಾ ಹೀಯ್ಯಾಳಿಸುತ್ತಿದ್ದ. ಅಲ್ಲದೇ ತನ್ನ ಬ್ಯಾಚ್‌ಮೇಟ್ ಆಗಿರುವ ಮಹಿಳಾ ಐಎಎಸ್ ಅಧಿಕಾರಿಯೊಂದಿಗೆ ಸತತವಾಗಿ ವಿಡಿಯೋ ಹಾಗೂ ಆಡಿಯೋ ಕಾಲ್‌ಗಳ ಮೂಲಕ ಸಂಪರ್ಕದಲ್ಲಿದ್ದ. ಅದನ್ನು ಪ್ರಶ್ನಿಸಿದ್ದರಿಂದ ತನಗೆ ಇಡೀ ಕುಟುಂಬದವರು ಕಿರುಕುಳ ನೀಡಿದರು. ●9ನೇ ಪುಟಕ್ಕೆ

ಏಪ್ರಿಲ್ 1ಕ್ಕೆ 18 ವರ್ಷ ತುಂಬುವವರಿಗೂ ಮತದಾನದ ಹಕ್ಕು ಕಲ್ಪಿಸುವ ಮಹೋದ್ದೇಶದ ಫಲಶ್ರುತಿ

5000 ಯುವ ಮತದಾರರ ಸೇರ್ಪಡೆ

ಮೈಸೂರು, ಏ.10(ಆರ್‌ಕೆ)– ಭಾರತದ ಚುನಾವಣಾ ಆಯೋಗವು ಕಟ್ ಆಫ್ ಡೇಟ್ ಅನ್ನು 2023ರ ಜನವರಿ 1ರ ಬದಲಾಗಿ ಏ.1ಕ್ಕೆ ವಿಸ್ತರಣೆ ಮಾಡಿದ್ದರಿಂದ ಮೈಸೂರು ಜಿಲ್ಲೆಯಲ್ಲಿ 18 ವರ್ಷ ತುಂಬಿದ ಸುಮಾರು 5,000 ಯುವ ಮತದಾರರು ಈ ಬಾರಿಯ ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹತೆ ಗಳಿಸಿ ಕೊಂಡಿದ್ದಾರೆ.

2023ರ ಏ.1ಕ್ಕೆ 18 ವರ್ಷ ಪೂರೈಸಿದ ಯುವಕ–ಯುವತಿಯರು ಮತದಾರರ ಪಟ್ಟಿಗೆ ತಮ್ಮ ಹೆಸರು ಸೇರಿಸಿಕೊಳ್ಳಲು ನಾಳೆ (ಏ.11)ವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಈಗಾಗಲೇ ಮೈಸೂರು ಜಿಲ್ಲೆಯಲ್ಲಿ 4,670 ಮಂದಿ ಯುವಕ–ಯುವತಿಯರು ನಮೂನೆ 6 ಅನ್ನು ಭರ್ತಿ ಮಾಡಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಚುನಾವಣಾ ಶಾಖೆ ಹಾಗೂ ನಜರ್‌ಬಾದಿನ ತಹಸೀಲ್ದಾರ್ ಕಚೇರಿ ಚುನಾವಣಾ ಶಾಖೆಯಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯ ಹೊಸ ಮತದಾರರ ಅರ್ಜಿಗಳನ್ನು ಪರಿಶೀಲಿಸುತ್ತಿರುವ ಅಧಿಕಾರಿಗಳು ದಾಖಲಾತಿ ಸರಿ ಇದ್ದರೆ ಮತದಾರರ ಪಟ್ಟಿಗೆ ಯುವ ಮತದಾರರ ಹೆಸರು ಸೇರಿಸಿ, ಮತದಾರರ ಗುರುತಿನ ಚೀಟಿಯನ್ನು ಸಿದ್ಧಪಡಿಸುತ್ತಿದ್ದಾರೆ. ಅಂತಹ ಯುವ ಮತದಾರರು (ಮೊದಲ ಬಾರಿ ಮತ ಚಲಾಯಿಸುತ್ತಿರುವವರು)

ನೋಂದಣಿಗೆ ಇಂದು ಕಡೇ ದಿನ, ಹೊಸ ಮತದಾರರಿಗೆ ಆಕರ್ಷಕ ಸ್ಮಾರ್ಟ್ ಕಾರ್ಡ್ ರೀತಿಯ ಮತದಾರರ ಗುರುತಿನ ಚೀಟಿ ವಿತರಣೆ



ಮೈಸೂರಿನ ತಹಸೀಲ್ದಾರ್ ಕಚೇರಿ ಚುನಾವಣಾ ಶಾಖೆಯಲ್ಲಿ ಹೊಸ ಯುವ ಮತದಾರರಿಗೆ ಮತದಾರರ ಗುರುತಿನ ಚೀಟಿ ಸಿದ್ಧಪಡಿಸುವ ಪ್ರಕ್ರಿಯೆ ನಡೆಯುತ್ತಿದೆ.

ಮೇ 10 ರಂದು ನಡೆಯಲಿರುವ 2023ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹರಾಗುತ್ತಾರೆ. ಇದೀಗ ಹೊಸ ಮತದಾರರಿಗೆ ವಿನೂತನ ಮಾದರಿಯ ಅತ್ಯಾಕರ್ಷಕ ಬಣ್ಣ ಬಣ್ಣದ ಮತದಾರರ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ. ಅದೇ ರೀತಿ 80 ವರ್ಷ ಮೇಲ್ಪಟ್ಟ, ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ಹಿರಿಯ ನಾಗರಿಕರಿಗೆ ಮತ ಚಲಾಯಿಸಲು ಅವಕಾಶ ನೀಡುವ ಸಲುವಾಗಿ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮೈಸೂರು ಜಿಲ್ಲಾಡಳಿತವು 12–ಡಿ ನಮೂನೆಗಳನ್ನು ವಿತರಿಸುತ್ತಿದ್ದು, ಚುನಾವಣೆ ದಿನ ಅಂಚೆ ಮತದಾನ ಮಾಡಿಸಲು ಪ್ರಕ್ರಿಯೆ ಕೈಗೊಂಡಿದೆ. ಜಿಲ್ಲೆಯಲ್ಲಿ 84,967 ●6ನೇ ಪುಟಕ್ಕೆ

ಯುವ ಮತದಾರರಿಗೆ ಅತ್ಯಾಕರ್ಷಕ ವರ್ಣರಂಜಿತ ಮತದಾರರ ಗುರುತಿನ ಚೀಟಿ

ಐಟಿ ಉದ್ಯೋಗ ಗುರುತಿನ ಚೀಟಿ ಹೋಲುವ ಐಡಿ



ಮೈಸೂರು, ಏ.10(ಆರ್‌ಕೆ)– ಕಪ್ಪು–ಬಿಳಿ ಮತದಾರರ ಗುರುತಿನ ಚೀಟಿ ಬದಲಾಗಿ ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗುವ ಯುವ ಮತದಾರರಿಗೆ ಭಾರತ ಚುನಾವಣಾ ಆಯೋಗವು ಇದೀಗ ಅತ್ಯಾಕರ್ಷಕ ಸ್ಮಾರ್ಟ್ ಕಾರ್ಡ್ ಮಾದರಿಯ ವರ್ಣರಂಜಿತ ಮತದಾರರ ಚೀಟಿ (Electoral photo Identity card) ವಿತರಿಸುತ್ತಿದೆ ಪಾನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್ ಮತ್ತು ವಾಹನಗಳ ನೋಂದಣಿ ಕಾರ್ಡ್ ಹೋಲುವ ●9ನೇ ಪುಟಕ್ಕೆ

ಕೊರೊನಾ ವಿರುದ್ಧ ಸೆಣಸಲು ಸಜ್ಜಾಗಿದ್ದೇವೆ: ಮೈಸೂರು ಆಸ್ಪತ್ರೆಗಳಲ್ಲಿ ಅಣಕು ಪ್ರದರ್ಶನ

ಸಾಮಾನ್ಯ ಬೆಡ್, ಐಸಿಯು ಬೆಡ್, ಆಕ್ಸಿಜನ್ ಬೆಡ್, ಆಕ್ಸಿಜನ್ ಪೂರೈಕೆ ಯೂನಿಟ್‌ಗಳ ಕಾರ್ಯ ನಿರ್ವಹಣೆ ಖಾತರಿ ಪರಿಶೀಲನೆ; ಆತಂಕ ಬೇಡ, ಮುಂಜಾಗ್ರತಾ ಅಗತ್ಯ ಸುರಕ್ಷಾ ಕ್ರಮ ಅನುಸರಿಸಿ: ಜಿಲ್ಲಾ ಆರೋಗ್ಯಾಧಿಕಾರಿ ಸಲಹೆ–ಸೂಚನೆ

ಮೈಸೂರು, ಏ. 10(ಆರ್‌ಕೆ)–ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳು ದಿನೇ ದಿನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಎಚ್ಚೆತ್ತ ಮೈಸೂರು ಜಿಲ್ಲಾಡಳಿತ ಮುಂಜಾಗ್ರತಾ ಕ್ರಮಕ್ಕೆ ಮುಂದಾಗಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಅಣಕು ಪ್ರದರ್ಶನದ ಮೂಲಕ ಕೋವಿಡ್ ಸೋಂಕು ಪ್ರಕರಣಗಳ ಸಮರ್ಥ ನಿರ್ವಹಣೆಗಾಗಿ ಮಾಡಿಕೊಂಡಿರುವ ಸಿದ್ಧತೆಗಳನ್ನು ವೈದ್ಯರು ಹಾಗೂ ಸಿಬ್ಬಂದಿ ಇಂದು ಪರಿಶೀಲನೆ ನಡೆಸಿದರು. ಜಿಲ್ಲಾ ಸರ್ಜನ್ ಡಾ.ಟಿ.ಅಮರನಾಥ ನೇತೃತ್ವದಲ್ಲಿ ಆರೋಗ್ಯ ಇಲಾಖೆ ತಂಡ ಸೋಮವಾರ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ಸಾಮಾನ್ಯ ಬೆಡ್‌ಗಳು, ಐಸಿಯು ಬೆಡ್‌ಗಳು, ಆಕ್ಸಿಜನ್ ಬೆಡ್‌ಗಳು, ಆಕ್ಸಿಜನ್ ಪೂರೈಕೆ ಯೂನಿಟ್, ಆಕ್ಸಿಜನ್ ಉತ್ಪಾದನಾ ಘಟಕಗಳು ಸಮರ್ಪಕವಾಗಿರುವುದನ್ನು ಪರಿಶೀಲಿಸಿ ದೃಢಪಡಿಸಿಕೊಂಡಿತು.

ಮೈಸೂರು ಜಿಲ್ಲೆಯಲ್ಲಿ ಒಟ್ಟು 43 ಮಂದಿಗೆ ಕೊರೊನಾ ಸೋಂಕು ಪತ್ತೆಯಾಗಿದ್ದು, ಆ ಪೈಕಿ ಮೂವರು ಮಾತ್ರ ಕೆ.ಆರ್. ಆಸ್ಪತ್ರೆ ಕೋವಿಡ್ ವಾರ್ಡ್‌ನಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು 70 ವರ್ಷದ ಮೇಲ್ಪಟ್ಟವರಾಗಿದ್ದು, ಹಲವು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವರಾಗಿದ್ದಾರೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಒಂದು ವೇಳೆ ಮೈಸೂರಿನಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾದಲ್ಲಿ ಅವರಿಗೆ ಚಿಕಿತ್ಸೆ ನೀಡಲು ಎಲ್ಲಾ ಆಸ್ಪತ್ರೆಗಳಲ್ಲಿ ಹಾಸಿಗೆಗಳು, ಆಕ್ಸಿಜನ್ ಬೆಡ್‌ಗಳು, ಐಸಿಯು, ವೆಂಟಿಲೇಟರ್‌ಗಳ ಸಿದ್ಧತೆ ಮಾಡಿಕೊಳ್ಳಲಾಗಿದೆ. ದಾಖಲಾದ ಸೋಂಕಿತರಿಗೆ ಸೂಕ್ತ ಚಿಕಿತ್ಸೆ ನೀಡಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು.

ಏಪ್ರಿಲ್ 7 ರಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವಿಯಾ ಅವರು ರಾಜ್ಯ ಆರೋಗ್ಯ ಸಚಿವರು, ಇಲಾಖೆ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ ತಾವು ಆಸ್ಪತ್ರೆಗಳಿಗೆ ಭೇಟಿ ನೀಡಿ ಕೊರೊನಾ ಪ್ರಕರಣಗಳನ್ನು ನಿಭಾಯಿಸಲು ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಅಣಕು ಪ್ರದರ್ಶನ ನಡೆಸಿ, ಖಾತರಿಪಡಿಸಿಕೊಳ್ಳಿ ಎಂದು ಸೂಚನೆ ನೀಡಿದ್ದರು. ಜಿಲ್ಲಾ ಮತ್ತು ಇನ್ನಿತರೆ ಆಸ್ಪತ್ರೆಗಳಲ್ಲಿ ವಾರ್ಡ್‌ಗಳನ್ನು ಹಾಸಿಗೆ ಕಾಯ್ದಿರಿಸಿ, ಚಿಕಿತ್ಸೆಗೆ ಅಗತ್ಯವಿರುವ ಮೆಡಿಸಿನ್, ವೈದ್ಯಕೀಯ ಪರಿಕರ, ಪೂರಕ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಿ ಎಂಬ ಕೇಂದ್ರ ಸಚಿವರ ಸೂಚನೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರ ನಿರ್ದೇಶನದಂತೆ ಜಿಲ್ಲಾ ಆರೋಗ್ಯಾಧಿಕಾರಿಗಳು ಇಂದು ಅಣುಕು ಪ್ರದರ್ಶನಕ್ಕೆ ಸಲಹೆ ನೀಡಿದ್ದರು. ಮೈಸೂರಿನ ಕೆ.ಆರ್. ಆಸ್ಪತ್ರೆ, ಎಸ್‌ಎಂಟಿ, ಪಿಕೆಟಿಬಿ, ಸೂಪರ್ ಸ್ಪೆಷಾಲಿಟಿ, ಟ್ರಾಮಾಕೇರ್ ಸೆಂಟರ್, ಇಎಸ್‌ಐ, ಜಿಲ್ಲಾ ಆಸ್ಪತ್ರೆ, ಎಲ್ಲಾ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಇಂದು ವೈದ್ಯರು, ಸಿಬ್ಬಂದಿ ಮಾಕ್ ಡ್ರಿಲ್ ನಡೆಸಿ ಕೋವಿಡ್ ಪಾಸಿಟಿವ್ ಪ್ರಕರಣಗಳನ್ನು ನಿಭಾಯಿಸಲು ಜಿಲ್ಲಾಡಳಿತ, ಜಿಲ್ಲಾ ಆರೋಗ್ಯಾಧಿಕಾರಿಗಳು ಕೈಗೊಂಡಿರುವ ಪೂರ್ವ ಸಿದ್ಧತೆಗಳನ್ನು ಖಾತರಿಪಡಿಸಿಕೊಂಡರು.



ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಜಿಲ್ಲಾ ಸರ್ಜನ್ ಡಾ.ಟಿ.ಅಮರನಾಥ್ ನೇತೃತ್ವದ ತಂಡ ಸಿದ್ಧತೆಗಳ ಪರಿಶೀಲಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಆರ್‌ಟಿ–ಪಿಸಿಆರ್ ಟೆಸ್ಟ್: ಆಸ್ಪತ್ರೆಗಳಿಗೆ ಬರುವ ರೋಗಿಗಳ ಪೈಕಿ ಜ್ವರ, ನೆಗಡಿ, ಮೈಕೈ ನೋವು, ತಲೆನೋವು, ಉಸಿರಾಟದ ತೊಂದರೆ ಇರುವವರನ್ನು ಗುರುತಿಸಿ ಮೈಸೂರಿನ ಕೆ.ಆರ್. ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಆರ್‌ಟಿಪಿಸಿಆರ್ ಟೆಸ್ಟ್ ಮಾಡಲಾಗುತ್ತಿದೆ. ಆದರೆ ಸಾರ್ವಜನಿಕರಿಗೆ ಟೆಸ್ಟ್ ಮಾಡುತ್ತಿಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್. ಪ್ರಸಾದ್ ತಿಳಿಸಿದ್ದಾರೆ. ●6ನೇ ಪುಟಕ್ಕೆ

ಬಿಳಿಗಿರಿರಂಗನ ಬೆಟ್ಟದಲ್ಲಿ ಏ.25ರಿಂದ ಜೀವನೋತ್ಸಾಹ ಶಿಬಿರ

ಮೈಸೂರು, ಏ.10– ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 25ರಿಂದ 29ರವರೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಸಾರ್ವಜನಿಕರಿಗಾಗಿ ಜೀವನೋತ್ಸಾಹ ಶಿಬಿರವನ್ನು ಏರ್ಪಡಿಸಲಾಗಿದೆ. ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸಗಳು, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ.

ಈ ಜೀವನೋತ್ಸಾಹ ಶಿಬಿರದ ಸಂದರ್ಭದಲ್ಲಿ ಪರ್ಯಾಯವಾಗಿ ಯುವಕರು ಮತ್ತು ಮಕ್ಕಳಿಗೂ ಪ್ರತ್ಯೇಕ ಶಿಬಿರಗಳನ್ನು ನಡೆಸಲು ಉದ್ದೇಶಿಸಲಾಗಿದೆ. ವಯಸ್ಕರ ಶಿಬಿರಕ್ಕೆ ಕನಿಷ್ಠ 50 ಶಿಬಿರಾರ್ಥಿಗಳು, ಯುವಕರು ಮತ್ತು ಮಕ್ಕಳ ಶಿಬಿರಗಳಿಗೆ ಕನಿಷ್ಠ 30 ಶಿಬಿರಾರ್ಥಿಗಳು ನೋಂದಾಯಿಸಿದರೆ ಶಿಬಿರಗಳ ವ್ಯವಸ್ಥೆ ಮಾಡಲಾಗುವುದು. ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಿ.ರಾಜೇಶ್ ಅವರನ್ನು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದಲ್ಲಿ ನೇರವಾಗಿ ಅಥವಾ 0821–2548212, Extn. 223/224 ದೂರವಾಣಿಯಲ್ಲಿ ಅಥವಾ ಮೊ: 9964141560 ಮೂಲಕ ಹಾಗೂ ಶಿಬಿರದ ಸಂಚಾಲಕರುಗಳಾದ ಎಸ್.ಪುಟ್ಟರಾಜಪ್ಪ (9741033336), ಶ್ರೀಮತಿ ಪ್ರೇಮ ಸೋಮಸುಂದರಂ (9945210008), ಜಿ. ಮಲ್ಲೇಶ್ (9845324338) ಮತ್ತು ಹೆಚ್.ಎಂ. ನಾಗಭೂಷಣ್ (9449621305) ಅವರನ್ನು ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ. ಆಸಕ್ತರು www. jssonline.org ಯಿಂದ ವಿವರ ಪಡೆಯಬಹುದು. ಇ–ಮೇಲ್ (jsspublications @gmail.com) ಮೂಲಕವೂ ನೋಂದಾಯಿಸಿಕೊಳ್ಳಬಹುದಾಗಿದೆ.



ಶ್ರೀ ಜಗದ್ಗುರು ಶಂಕರಾಚಾರ್ಯ ಶೃಂಗೇರಿ ಪೀಠದ ಪ್ರಥಮ ಪೀಠಾಧಿಪತಿಗಳಾದ ಜಗದ್ಗುರು ಸುರೇಶ್ವರಾಚಾರ್ಯರ ಆಲಯ ನಿರ್ಮಾಣವನ್ನು ಕೋಲಾರದ ಬಂಗಾರಪೇಟೆ ರಸ್ತೆಯಲ್ಲಿ ಓಂಕಾರೇಶ್ವರ ಕ್ಷೇತ್ರದಲ್ಲಿ ನಿರ್ಮಿಸಲು ಭೂಮಿ ಪೂಜೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರ್ನಹಳ್ಳಿ ನೆರವೇರಿಸಿದರು. ಸಂಘದ ಉಪಾಧ್ಯಕ್ಷ ರಾಜೇಂದ್ರ ಪ್ರಸಾದ್, ಶುಕ್ಲ ಯಜುರ್ವೇದದ ಮಹಾಮಂಡಲದ ಅಧ್ಯಕ್ಷರಾದ ಸುಧಾಕರಬಾಬು, ಶುಕ್ಲ ಯಜುರ್ವೇದದ ಟ್ರಸ್ಟ್ ಅಧ್ಯಕ್ಷ ವೇಣುಗೋಪಾಲ್ ಹಾಗೂ ರಾಜ್ಯ ವಿಪ್ರ ಸಂಘಟನೆ ಮುಖಂಡರು ಉಪಸ್ಥಿತರಿದ್ದರು.

'ಬಾಲಂಗೋಚಿ' ಚಿಣ್ಣರ ಬೇಸಿಗೆ ಶಿಬಿರ; ಮಕ್ಕಳ ನಾಟಕ ಪ್ರದರ್ಶನ

ಮೈಸೂರು,ಏ.10–ಅದಮ್ಯ ರಂಗಶಾಲೆ ವತಿಯಿಂದ ಏ. 12ರಂದು ಸಂಜೆ 6 ಗಂಟೆಗೆ 'ಬಾಲಂಗೋಚಿ' ಚಿಣ್ಣರ ಬೇಸಿಗೆ ಶಿಬಿರ ಹಾಗೂ 'ಗುಡ್ಡದಿಲಿಗಳ ಕತೆ' ಮಕ್ಕಳ ನಾಟಕ ಪ್ರದರ್ಶನ ಸಮಾ ರಂಭವು ನಗರದ ಜಯಲಕ್ಷ್ಮಿಪುರಂನ ವಿವೇಕಾನಂದ ಪದವಿಪೂರ್ವ ಕಾಲೇಜು ಆವರಣದಲ್ಲಿನ ಶ್ರೀ ಕುವೆಂಪು ರಂಗಮಂದಿರದಲ್ಲಿ ನಡೆಯಲಿದೆ ಎಂದು ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ಕರ್ನಾಟಕ ಕಾವಲು ಪಡೆಯ ರಾಜ್ಯಾಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ ಶಿಬಿರ ಮತ್ತು ನಾಟಕ ಪ್ರದರ್ಶನ ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಹೆಚ್.ಕೆ.ರಾಮು ಅಧ್ಯಕ್ಷತೆ ವಹಿಸುವರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡುವರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿವೃತ್ತ ಉಪ ನಿರ್ದೇಶಕಿ ಮಂಜುಳಾ ಮಿರ್ಲೆ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು.

ನಂದಕುಮಾರ ಹೂವಿನ ಹಡಗಲಿ ರಚನೆಯ 'ಗುಡ್ಡದಿಲಿಗಳ ಕತೆ' ನಾಟಕವನ್ನು ಅದಮ್ಯ ರಂಗಶಾಲೆಯ ಚಿಣ್ಣರು ಅಭಿನಯಿಸಲಿದ್ದು, ಈ ನಾಟಕಕ್ಕೆ ಮಾಲಾಶ್ರೀ ಕೂಡ್ಲಿಗಿ ಅವರ ನಿರ್ದೇಶನವಿದೆ. ದಿಗ್ವಿಜಯ ಹೆಗ್ಗೋಡು ಅವರ ಸಂಗೀತವಿದೆ. ನಾಟಕದ ಪ್ರವೇಶ ಪ್ರೋತ್ಸಾಹ ಧನ 100 ರೂ.ಗಳು. ಹೆಚ್ಚಿನ ಮಾಹಿತಿಗಾಗಿ ಮೊ. ಸಂಖ್ಯೆ 8660103141 ಸಂಪರ್ಕಿಸಬಹುದು.




ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ಜಗನಮೋಹನ ಅರಮನೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಹಾಗೂ ಕವಿ ಜಯಪ್ಪ ಹೊನ್ನಾಳಿ ಅವರಿಗೆ ಡಾ.ರಾಜ್ ಕಲಾ ಸೇವಾ ರತ್ನ ಪ್ರಶಸ್ತಿಯನ್ನು ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಪ್ರಧಾನ ಮಾಡಿದರು. ಟ್ರಸ್ಟಿನ ಅಧ್ಯಕ್ಷ, ಗಾಯಕ ಬಿ.ಎಸ್. ಜಯರಾಮರಾಜು, ಮೇಲುಕೋಟೆ ವಂಗಿಮಠದ ಇಳೈ ಆಳ್ವಾರ್ ಸ್ವಾಮೀಜಿ ಚಿತ್ರದಲ್ಲಿದ್ದಾರೆ.

ರಾತ್ರಿ ವೇಳೆ ಮನೆಗೆ ನುಗ್ಗಿ ದಂಪತಿ ಸುಲಿಗೆ

ವೇಶ್ಯಾವಾಟಿಕೆ ನಡೆಸುತ್ತಿರುವುದಾಗಿ ಬೆದರಿಸಿ ನಗದು, ಚಿನ್ನಾಭರಣ ಕಳವು

ಮೈಸೂರು, ಏ. 10– ಮನೆಯೊಂದಕ್ಕೆ ಅತಿಕ್ರಮ ಪ್ರವೇಶ ಮಾಡಿದ ಖದೀಮರು ವೇಶ್ಯಾವಾಟಿಕೆ ನಡೆಸುದ್ದೀರಾ ಎಂದು ಬೆದರಿಸಿ ಚಿನ್ನಾಭರಣ ಹಾಗೂ ನಗದು ದೋಚಿದ ಘಟನೆ ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿ ವರದಿಯಾಗಿದೆ.

ಅಲ್ಲಿನ ನಿವಾಸಿ ಮಂಜುಳಾ(40) ಎಂಬುವರ ಮನೆಗೆ ಏಪ್ರಿಲ್ 6ರಂದು ರಾತ್ರಿ 11.30ರ ಸುಮಾರಿನಲ್ಲಿ ತೆರಳಿದ ನಾಲ್ವರು ಆಸಾಮಿಗಳು ತಮ್ಮನ್ನು ಪೊಲೀಸರು ಕಳುಹಿಸಿದ್ದಾರೆ. ಈ ಮನೆಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂದು ಮನೆಯನ್ನೆಲ್ಲಾ ಶೋಧನೆ ಮಾಡಿದ್ದಾರೆ. ಇಲ್ಲಿ ಅಂತಹ ಯಾವುದೇ ಕೃತ್ಯ ನಡೆಯುತ್ತಿಲ್ಲ ಎಂದು ಮಂಜುಳಾ ಹಾಗೂ ಅವರ ಪತಿ




ಮಂಜುನಾಥ್ ತಿಳಿಸಿದರೂ ತಮಗೆ ಹಣ ಕೊಡದಿದ್ದರೆ ಪೊಲೀಸರಿಗೆ ದೂರು ನೀಡುವುದರ ಜೊತೆಗೆ ಮನೆ ಮಾಲೀಕರಿಗೆ ಹೇಳಿ ಮನೆ ಖಾಲಿ ಮಾಡಿಸು ತ್ತೇವೆ ಎಂದು ಬೆದರಿಸಿ 8 ಸಾವಿರ ರೂ. ನಗದು 39 ಗ್ರಾಂ ತೂಕದ ಚಿನ್ನಾಭರಣ ಪಡೆದುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮೈಸೂರು,ಏ.10–ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ಮಂಡಿಮೊಹಲ್ಲಾ ಸರ್‌ಖಾಜಿ ರಸ್ತೆಯಿಂದ ವರದಿಯಾಗಿದೆ.ಅಲ್ಲಿನ ನಿವಾಸಿ ಡಿ.ಕೆ.ಕಮಲಮ್ಮ(72) ಎಂಬುವರು ಏ.8ರಂದು ರಾತ್ರಿ ತಮ್ಮ ಸಂಬಂಧಿಕರ ಮನೆಗೆ ಹೋಗಿದ್ದು, ಮರುದಿನ ಬೆಳಗ್ಗೆ ಹಿಂತಿರುಗಿದಾಗ ಅವರ ಮನೆ ಬೀಗ ಮುರಿದು 25 ಗ್ರಾಂ ತೂಕದ ಚಿನ್ನಾಭರಣ ಹಾಗೂ 2 ಸಾವಿರ ರೂ. ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ



ಜೆ. ವಿಲ್‌ಫ್ರೆಡ್ ಗ್ರೇಸ್

ಮೈಸೂರು, ಏ. 10– ಮೈಸೂರಿನ ಹೆಬ್ಬಾಳ್ ಮೂರನೇ ಹಂತದ ನಿವಾಸಿ ದಿವಂಗತ ದೇವದಾಸ್ ಸಾಲೋಮನ್ ಎಂಬುವರ ಪತ್ನಿ ಜೆ.ವಿಲ್‌ಫ್ರೆಡ್ ಗ್ರೇಸ್(82) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಏ.11) ಬೆಳಗ್ಗೆ 11 ಗಂಟೆಗೆ ಮಹದೇವಪುರ ರಸ್ತೆಯಲ್ಲಿರುವ ಸಿಎಸ್‌ಐ ಹೊಸ ಸೆಮಿಟ್ರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮುಲ್‌ನೊಂದಿಗೆ ಕೆಎಂಎಫ್ ವಿಲೀನದ ಪ್ರಶ್ನೆಯೇ ಇಲ್ಲ

● ಸಂಸದ ಪ್ರತಾಪ್ ಸಿಂಹ ಸ್ಪಷ್ಟನೆ ● ಈ ಸಂಬಂಧಿತ ವಿಪಕ್ಷಗಳ ಪ್ರಸ್ತಾಪಕ್ಕೆ ತಿರುಗೇಟು ● ಹೆಲಿಕಾಪ್ಟರ್ ಸದ್ದಿನಿಂದ ಹುಲಿ, ಚಿರತೆ ಬೆಚ್ಚಿ ಅಡಗಿದ್ದವು ● ಸಿದ್ದರಾಮಯ್ಯ ವರುಣಾದಲ್ಲಿ ಸ್ಪರ್ಧಿಸಿದರೂ ಅದರ ಪರಿಣಾಮ ಏನು ಇಲ್ಲ

ಮೈಸೂರು,ಏ.10(ಎಂಟಿವೈ)–ಅಮುಲ್‌ನೊಂದಿಗೆ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ವನ್ನು ವಿಲೀನ ಮಾಡುವುದಿಲ್ಲ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅನಾವಶ್ಯಕವಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಸ್ಪಷ್ಟಪಡಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದ ನಂದಿನಿ ಹಾಲಿನ ಸಂಸ್ಥೆ ಕೆಎಂಎಫ್ ಅನ್ನು ಅಮುಲ್‌ನೊಂದಿಗೆ ವಿಲೀನ ಮಾಡುವ ಆಲೋಚನೆ ಸರ್ಕಾರದ ಮುಂದೆ ಇಲ್ಲ. ಕಳೆದ ಒಂದು ವಾರದಿಂದ ವಿರೋಧ ಪಕ್ಷಗಳು ಅಪಪ್ರಚಾರ ಮಾಡುತ್ತಿವೆ. ರಾಜ್ಯದಲ್ಲಿ ನಂದಿನಿ ಸೇರಿ ಆರೋಕ್ಯ, ಹೆರಿಟೇಜ್, ಗುಡ್‌ಲೈಫ್, ದೊಡ್ಲಾದಂತಹ ಅನೇಕ ಹಾಲು ಕಂಪನಿಗಳೂ ಈ ಹಿಂದಿನಿಂದ ವಹಿವಾಟು ನಡೆಸುತ್ತಿವೆ. ಈ ಉತ್ಪನ್ನಗಳು ನಂದಿನಿ ಹಾಲಿನ ಅಕ್ಕ –ತಂಗಿಯರೇ? ಇವುಗಳ ಬಗ್ಗೆ ಮಾತನಾಡದೇ ಈಗ ಅಮುಲ್ ವಿರೋಧಿಸುತ್ತಿರುವುದೇಕೆ ಎಂದು ಪ್ರಶ್ನಿಸಿದರು.

ಒಂದು ಲೀಟರ್ ಅಮುಲ್ ಹಾಲಿನ ಬೆಲೆ 53 ರೂ., ನಂದಿನ ಹಾಲಿನ ಬೆಲೆ 34 ರೂ ಇದೆ. ಯಾರಾದರೂ ಹೆಚ್ಚು ಬೆಲೆ ಕೊಟ್ಟು ಅಮುಲ್ ಹಾಲು ಖರೀದಿ ಮಾಡುತ್ತಾರೆಯೇ?. ಮಂಡ್ಯ ಜಿಲ್ಲೆಯ ಗೆಜ್ಜಲಗೆರೆ ಗ್ರಾಮಕ್ಕೆ ಬಂದಿದ್ದ ಕೇಂದ್ರ ಸಹಕಾರಿ ಸಚಿವರೂ ಆದ ಗೃಹ ಸಚಿವ ಅಮಿತ್ ಷಾ ಅವರು ನಂದಿನಿಯನ್ನು ಅಮುಲ್‌ನಂತೆ ಮೆಗಾ ಡೈರಿ ಮಾಡುವ ಬಗ್ಗೆ ಪ್ರಸ್ತಾಪಿಸಿದ್ದರು. ಆದರೆ ಅಮುಲ್‌ನೊಂದಿಗೆ ವಿಲೀನ ಮಾಡುತ್ತೇವೆ ಎಂದು ಎಲ್ಲಿಯೂ ಹೇಳಿಲ್ಲ. ಗೋ ಹತ್ಯೆ ನಿಷೇಧ ಕಾಯ್ದೆ ಜಾರಿ ಮಾಡುವ ವೇಳೆ ಸಭಾ ತ್ಯಾಗ ಮಾಡಿ ಹೋದವರಿಗೆ ನಂದಿನಿ ಹಾಲಿನ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಇನ್ನೊಂದು ಬಾರಿ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಗೋ ರಕ್ಷಕರ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತದೆ. ಉಚಿತ ವಿದ್ಯುತ್‌ನಂತಹ ಪುಕ್ಕಟೆ ಯೋಜನೆಗಳನ್ನು ಬಿಟ್ಟರೆ ಸಿದ್ದ ರಾಮಯ್ಯರ ಬಳಿ ಏನೂ ಇಲ್ಲ ಎಂದು ಕಿಡಿಕಾರಿದರು.



ಪ್ರಭಾವ ಬೀರಲ್ಲ: ವರುಣಾಕ್ಕೆ ಸಿದ್ದರಾಮಯ್ಯ ಬಂದರೆ ಅಕ್ಕಪಕ್ಕದ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಸಹಕಾರಿಯಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಅವರು, ಸಿದ್ದರಾಮಯ್ಯ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿದ್ದಾರೆ. ಕಳೆದ ಬಾರಿ ತವರು ಜಿಲ್ಲೆಯ ಚಾಮುಂಡೇಶ್ವರಿಯಲ್ಲೇ ಸೋತಿದ್ದಾರೆ. ಇವರಿಗೆ ಸ್ಪರ್ಧಿಸಲು ಕ್ಷೇತ್ರವಿಲ್ಲ. ಇನ್ನೂ ಅಕ್ಕಪಕ್ಕದ ಕ್ಷೇತ್ರಗಳಲ್ಲಿ ಯಾವ ಪ್ರಭಾವ ಬೀರುತ್ತಾರೆ ಹೇಳಿ ಎಂದು ತಿರುಗೇಟು ನೀಡಿದರು. ಮೇಯರ್ ಶಿವಕುಮಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳ ಸೋಮಶೇಖರ್, ನಗರಾಧ್ಯಕ್ಷ ಶ್ರೀವತ್ಸ ಇದ್ದರು.


ಹೆಲಿಕಾಪ್ಟರ್ ಶಬ್ದಕ್ಕೆ ಹುಲಿ, ಚಿರತೆ ಅಡಗಿ ಕೂತವು

ಹುಲಿ ಸಂರಕ್ಷಿತ ಪ್ರದೇಶಗಳಿಗೆ 50 ವರ್ಷ ಸಂದ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಬಂಡೀಪುರಕ್ಕೆ ಭೇಟಿ ನೀಡಿದ್ದರು. ಅಲ್ಲಿ ಸಫಾರಿ ಕೂಡ ನಡೆಸಿದರು. ಆ ವೇಳೆ ಹುಲಿ, ಚಿರತೆ ಬಿಟ್ಟು ಉಳಿದೆಲ್ಲಾ ಪ್ರಾಣಿಗಳು ಕಾಣಿಸಿವೆ. ಏರ್‌ಫೋರ್ಸ್‌ನ 3 ಹೆಲಿಕಾಪ್ಟರ್‌ಗಳು ಬಂಡೀಪುರ ಬಳಿ ಲ್ಯಾಂಡ್ ಆಗಿದ್ದರಿಂದ ಅವುಗಳ ಶಬ್ದಕ್ಕೆ ಹುಲಿ, ಚಿರತೆ ಹೆದರಿ ದಟ್ಟಾರಣ್ಯದತ್ತ ಹೋಗಿವೆ. ಆದರೆ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಈ ವಿಚಾರದಲ್ಲಿ ಮಾಡಿರುವ ಟೀಕೆ ಸರಿಯಲ್ಲ. ಮೋದಿ ಅವರಿಗೆ ಪ್ರಾಣಿಗಳ ಬಗ್ಗೆ ಕಾಳಜಿ ಇರುವುದರಿಂದಲೇ ಬಂಡೀಪುರಕ್ಕೆ ಬಂದಿದ್ದಾರೆ. ಪ್ರತಿವಾರ ಮೈಸೂರಿಗೆ ಬರುವ ಸಿದ್ದರಾಮಯ್ಯ ಒಮ್ಮೆಯೂ ಬಂಡೀಪುರ ಹಾಗೂ ನಾಗರಹೊಳೆಗೆ ಭೇಟಿ ನೀಡಿಲ್ಲ. ಅವರು ಮೈಸೂರಿಗೆ ಬಂದು ಕುರಿ ಚರ್ಬಿ ತಿಂದು ವಾಪಸ್ಸಾಗುತ್ತಿದ್ದಾರೆ. ಈಗ ಅವರಿಗೆ ಚರ್ಬಿಯ ಕೊಬ್ಬು ಹೆಚ್ಚಾಗಿದೆ. ಗುಜರಾತಿನ ಸಿಂಹ ಕರ್ನಾಟಕಕ್ಕೆ ಬಂದಾಗಲೆಲ್ಲಾ ಯಾಕೆ ಕಾಂಗ್ರೆಸ್ಸಿಗರು ಭಯಪಡುತ್ತಾರೆ. ಈ ಭಯ ಮೇ 10ರಂದು ಇನ್ನಷ್ಟು ಗೋಚರಿಸಲಿದೆ ಎಂದು ವಾಗ್ದಾಳಿ ನಡೆಸಿದರು.

ಅಖಿಲ ಭಾರತ ಅಂತರ ವಿವಿ ಮಹಿಳಾ ಕ್ರಿಕೆಟ್ ಪಂದ್ಯಾವಳಿ

ಪಂಜಾಬ್‌ನ ಲವ್‌ಲೀ ಪ್ರೊಫೆಷನಲ್ ವಿವಿ, ಹರಿಯಾಣದ ಎಂಡಿ ವಿವಿ ಫೈನಲ್ ಪ್ರವೇಶ

ಮೈಸೂರು,ಏ.10(ಎಂಕೆ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್(ಎಸ್‌ಜೆಸಿಇ) ಕಾಲೇಜು ಹಾಗೂ ಕೆಎಸ್‌ಸಿಎ ಸಹಯೋಗದಲ್ಲಿ ನಡೆಯುತ್ತಿರುವ 'ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ–2023'ಯ ಫೈನಲ್‌ಗೆ ಪಂಜಾಬ್‌ನ ಲವ್‌ಲೀ ಪ್ರೊಫೆಷನಲ್ ವಿವಿ ಹಾಗೂ ಹರಿಯಾಣದ ಎಂಡಿ ವಿವಿ ಲಗ್ಗೆ ಇಟ್ಟಿವೆ.



ಏ.5ರಿಂದ ಆರಂಭಗೊಂಡ ಪಂದ್ಯಾವಳಿ ಅಂತಿಮ ಘಟ್ಟ ತಲುಪಿದ್ದು, ನಾಳೆ (ಏ.11) ಫೈನಲ್ ಪಂದ್ಯ ಕೆಎಸ್‌ಸಿಎ (ಜೆಎಸ್‌ಎಸ್ ಎಸ್‌ಟಿಯು) ಮೈದಾನದಲ್ಲಿ ನಡೆಯಲಿದೆ. ಸೋಮವಾರ ನಡೆದ ಸೆಮಿ ಫೈನಲ್ ಪಂದ್ಯಗಳಲ್ಲಿ ಪುಣೆಯ ಸಾವಿತ್ರಿ ಬಾಯ್ ಪುಲೆ ವಿವಿ ವಿರುದ್ಧ ಪಂಜಾಬ್‌ನ ಲವ್‌ಲೀ ಪ್ರೊಫೆಷನಲ್ ವಿವಿ 5 ವಿಕೆಟ್‌ಗಳಿಂದ ಜಯಗಳಿಸಿ ಫೈನಲ್ ಪ್ರವೇಶ ಪಡೆಯಿತು. ಅದರಂತೆ ಪಂಜಾಬ್‌ನ ಗುರುನಾನಕ್ ದೇವ್ ವಿವಿ ವಿರುದ್ಧ ಹರಿಯಾಣದ ಎಂಡಿ ವಿವಿ 44 ರನ್‌ಗಳ ರೋಚಕ ಜಯದೊಂದಿಗೆ ಫೈನಲ್‌ಗೆ ಲಗ್ಗೆ ಇಟ್ಟಿತು.


3ನೇ ಸ್ಥಾನಕ್ಕೆ ಪೈಪೋಟಿ: ಸೆಮಿ ಫೈನಲ್‌ನಲ್ಲಿ ಸೋಲು ಅನುಭವಿಸಿದ ಪುಣೆಯ ಸಾವಿತ್ರಿ ಬಾಯಿ ಪುಲೆ ವಿವಿ ಹಾಗೂ ಪಂಜಾಬ್‌ನ ಗುರುನಾನಕ್ ದೇವ್ ವಿವಿ ನಡುವೆ 3ನೇ ಸ್ಥಾನಕ್ಕಾಗಿ ಪೈಪೋಟಿ ನಡೆಯಲಿದೆ.


ಬಹುಮಾನ ವಿತರಣೆ: ನಾಳೆ(ಏ.11) ಮಧ್ಯಾಹ್ನ 3 ಗಂಟೆಗೆ ಶ್ರೀ ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಗೋಲ್ಡನ್ ಜೂಬಿಲಿ ಹಾಲ್‌ನಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಲಿದೆ. ಕೆಎಸ್‌ಸಿಎ ಮೈಸೂರು ವಿಭಾಗದ ಮುಖ್ಯಸ್ಥ ಬಾಲಚಂದರ್, ಸಂಯೋಜಕ ಹರಿಕೃಷ್ಣ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎ.ಎನ್.ಸಂತೋಷ್‌ಕುಮಾರ್, ಕುಲಸಚಿವ ಡಾ.ಎಸ್.ಎ.ಧನರಾಜ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಸಿ.ರೇವಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

ರಾಷ್ಟ್ರೀಯ ಪಕ್ಷದ ಸ್ಥಾನಮಾನ ಕಳೆದುಕೊಂಡ ಎನ್‌ಸಿಪಿ, ಟಿಎಂಸಿ, ಸಿಪಿಐ

ನವದೆಹಲಿ: ಭಾರತೀಯ ಚುನಾವಣಾ ಆಯೋಗ (ಇಸಿಐ) ಸೋಮವಾರ ತೃಣಮೂಲ ಕಾಂಗ್ರೆಸ್, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ) ಪಕ್ಷಗಳ ರಾಷ್ಟ್ರೀಯ ಪಕ್ಷ ಸ್ಥಾನಮಾನವನ್ನು ಹಿಂತೆಗೆದುಕೊಂಡಿದೆ.







ಚುನಾವಣಾ ಸಮಿತಿಯು ಮೂರು ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳಾದ ಎಐಟಿಸಿ, ಸಿಪಿಐ ಮತ್ತು ಎನ್‌ಸಿಪಿಗಳ ಸ್ಥಾನಮಾನವನ್ನು ಹಿಂತೆಗೆದುಕೊಳ್ಳುವುದಾಗಿ ಘೋಷಿಸಿದೆ. ಸೂಕ್ತ ಪ್ರಕ್ರಿಯೆಯನ್ನು ಅನುಸರಿಸಿ ಮತ್ತು ಎರಡು ಸಂಸತ್ತಿನ ಚುನಾವಣೆಗಳು ಮತ್ತು 21 ರಾಜ್ಯ ವಿಧಾನಸಭಾ ಚುನಾವಣೆಗಳಿಗೆ ಸಾಕಷ್ಟು ಅವಕಾಶವನ್ನು ಒದಗಿಸಿದ ನಂತರ ಆಯೋಗ ಈ ಕ್ರಮ ಕೈಗೊಂಡಿದೆ.

ಭಾರತದ ಚುನಾವಣಾ ಆಯೋಗವು ಆಮ್ ಆದ್ಮಿ ಪಕ್ಷವನ್ನು (ಎಎಪಿ) ರಾಷ್ಟ್ರೀಯ ಪಕ್ಷವೆಂದು ಗುರುತಿಸಿದೆ. ಪ್ಯಾರಾ 6 ಬಿ (iii) ಯ ಷರತ್ತನ್ನು ಪೂರೈಸಿದ ಆಮ್ ಆದ್ಮಿ ಪಕ್ಷ ರಾಷ್ಟ್ರೀಯ ಪಕ್ಷವಾಗಿ ಗುರುತಿಸಲ್ಪಟ್ಟಿದೆ, ಅದು ನಾಲ್ಕು ರಾಜ್ಯಗಳಲ್ಲಿ ರಾಜ್ಯ ಪಕ್ಷವಾಗಿ ಗುರುತಿಸಲ್ಪಟ್ಟಿದೆ, ಚುನಾವಣಾ ಕಾರ್ಯಕ್ಷಮತೆಯ ಆಧಾರದ ಮೇಲೆ ದೆಹಲಿ, ಗೋವಾ, ಪಂಜಾಬ್ ಮತ್ತು ಇತ್ತೀಚೆಗೆ ಗುಜರಾತ್ ನಲ್ಲಿ ತನ್ನ ಅಸ್ತಿತ್ವ ತೋರಿದೆ. ಉತ್ತರ ಪ್ರದೇಶದಲ್ಲಿ ಆರ್‌ಎಲ್‌ಡಿ, ಆಂಧ್ರಪ್ರದೇಶದಲ್ಲಿ ಬಿಆರ್‌ಎಸ್, ಮಣಿಪುರದಲ್ಲಿ ಪಿಡಿಎ, ಪುದುಚೇರಿಯಲ್ಲಿ ಪಿಎಂಕೆ, ಪಶ್ಚಿಮ ಬಂಗಾಳದಲ್ಲಿ ಆರ್‌ಎಸ್‌ಪಿ ಮತ್ತು ಮಿಜೋರಾಂನಲ್ಲಿ ಎಂಪಿಸಿಗೆ ನೀಡಲಾಗಿದ್ದ ರಾಜ್ಯ ಪಕ್ಷದ ಸ್ಥಾನಮಾನವನ್ನು ರದ್ದುಗೊಳಿಸಲಾಗಿದೆ. ಅವು ನೋಂದಾಯಿತ ಗುರುತಿಸಲ್ಪಡದ ರಾಜಕೀಯ ಪಕ್ಷಗಳಾಗಿ (RUPP) ಉಳಿಯುತ್ತವೆ.

ನಾಗಾಲ್ಯಾಂಡ್‌ನಲ್ಲಿ ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್), ಮೇಘಾಲಯದಲ್ಲಿ ವಾಯ್ಸ್ ಆಫ್ ಪೀಪಲ್ ಪಾರ್ಟಿ ಮತ್ತು ತ್ರಿಪುರಾದಲ್ಲಿ ತಿಪ್ರಾ ಮೋಥಾ ಮಾನ್ಯತೆ ಪಡೆದ ರಾಜ್ಯ ರಾಜಕೀಯ ಪಕ್ಷ ಸ್ಥಾನಮಾನವನ್ನು ನೀಡಿದೆ. ಬಿಜೆಪಿ, ಕಾಂಗ್ರೆಸ್, ಸಿಪಿಐ(ಎಂ), ಬಹುಜನ ಸಮಾಜ ಪಕ್ಷ (ಬಿಎಸ್‌ಪಿ), ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ಮತ್ತು ಎಎಪಿ ಈಗ ರಾಷ್ಟ್ರೀಯ ಪಕ್ಷಗಳಾಗಿವೆ.

ಏ.30ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು,ಏ.10– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಈ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ಏ.30, ಭಾನುವಾರ ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮವಿದ್ದು, 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿ, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, 9449030588 ಸಂಪರ್ಕಿಸಿ ಮಾಹಿತಿ ಪಡೆದು, ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ.

ಜೆಎಸ್‌ಎಸ್ ಬಾಲಜಗತ್ ಶಾಲೆಯಲ್ಲಿ ಚಿತ್ರಕಲಾ ಶಿಬಿರ ಆರಂಭ

ಮೈಸೂರು, ಏ.10(ಆರ್‌ಕೆ)– ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಆವರಣದಲ್ಲಿರುವ ಜೆಎಸ್‌ಎಸ್ ಬಾಲಜಗತ್ ಶಾಲೆಯಲ್ಲಿ ಚಿಣ್ಣರಿಗಾಗಿ ಚಿತ್ರಕಲಾ ಶಿಬಿರ ಆರಂಭವಾಗಿದೆ.


ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಶಿಬಿರವನ್ನು ಕಾವಾ ಕಾಲೇಜಿನ ಅಪ್ಲೈಡ್ ಆರ್ಟ್ ವಿಭಾಗದ ಮುಖ್ಯಸ್ಥ ಬಿಂದು ರಾಯ ಆರ್. ಬಿರಾದಾರ್ ಪೇಂಟಿಂಗ್ ಮಾಡುವ ಮೂಲಕ ಉದ್ಘಾಟಿಸಿದರು.

ಶಿಬಿರಾರ್ಥಿ ಮಕ್ಕಳನ್ನುದ್ದೇಶಿಸಿ ಮಾತನಾಡಿದ ಅವರು, ವಿದ್ಯಾಭ್ಯಾಸದ ಜೊತೆಗೆ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳನ್ನು ಗುರ್ತಿಸಿ, ಹೊರತರಲು ಶಾಲಾ ಹಂತದಲ್ಲೇ ಈ ರೀತಿಯ ಕಲಾ ಶಿಬಿರಗಳನ್ನು ಏರ್ಪಡಿಸುವುದು ಔಚಿತ್ಯಪೂರ್ಣವಾಗಿದ್ದು, ಪೋಷಕರೂ ಪ್ರೋತ್ಸಾಹ ನೀಡಬೇಕೆಂದು ಕರೆ ನೀಡಿದರು.



ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದ ಹಾಗೂ ಛಾಯಾಗ್ರಾಹಕ ಎಸ್.ಎಂ. ಜಂಬುಕೇಶ್ವರ್, ಶಾಲಾ ಮುಖ್ಯೋಪಾಧ್ಯಾಯರಾದ ಮಂಜುಳಾ ಭಾಗವಹಿಸಿದ್ದರು. ಮೈಸೂರು ನಗರದ ವಿವಿಧ ಭಾಗಗಳಿಂದ 38 ಮಕ್ಕಳು ಚಿತ್ರಕಲಾ ಶಿಬಿರದಲ್ಲಿ ಪಾಲ್ಗೊಂಡಿದ್ದು, 22 ದಿನಗಳ ಕಾಲ ನಡೆಯಲಿರುವ ತರಬೇತಿಯಲ್ಲಿ ಜೆಎಸ್‌ಎಸ್ ವಿದ್ಯಾ ಸಂಸ್ಥೆಗಳ ಡ್ರಾಯಿಂಗ್ ಟೀಚರ್‌ಗಳು ಮಕ್ಕಳಿಗೆ ಪೇಂಟಿಂಗ್ ಕಲೆಯನ್ನು ಹೇಳಿಕೊಡುವರು. ಪ್ರತೀ ದಿನ ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ಶಿಬಿರ ನಡೆಯಲಿದ್ದು, ವಿಜೇತ ಮಕ್ಕಳಿಗೆ ಬಹುಮಾನ ಹಾಗೂ ಪಾಲ್ಗೊಂಡ ಎಲ್ಲಾ ಮಕ್ಕಳಿಗೂ ಪ್ರಮಾಣ ಪತ್ರ ನೀಡಲಾಗುವುದು ಎಂದು ಶಿಬಿರದ ಸಂಚಾಲಕ ಎಸ್.ಎಂ.ಜಂಬುಕೇಶ್ವರ್ ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.4.2023 ಮಂಗಳವಾರ, ಮಳೆ ನಕ್ಷತ್ರ: ರೇವತಿ, 31.03.2023ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ,
ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಖಗೋಳ ವಿಜ್ಞಾನ ಅಂದು–ಇಂದು ಕುರಿತು ಜವಹರಲಾಲ್ ನೆಹರು ತಾರಾಲಯ ನಿವೃತ್ತ ನಿರ್ದೇಶಕರಾದ ಡಾ. ಬಿ.ಎಸ್. ಶೈಲಜಾ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಸ್ಥಳ: ಬಿ.ಎಂ. ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನದ ಅಂಗವಾಗಿ ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗವದ್ಗೀತೆ ಪ್ರವಚನ – ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗ ವದ್ಗೀತೆ ಪ್ರವಚನ–ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ಹನುಮಂತೋತ್ಸವ, ಸಂಜೆ 6.30ಕ್ಕೆ ರಾಜಬೀದಿಗಳಲ್ಲಿ ಮೆರವಣಿಗೆ ನಾದಸ್ವರ ವಾದನ, ವಿದ್ವಾನ್ ಪಾರ್ಥಸಾರಥಿ ಮತ್ತು ವೃಂದದವರಿಂದ, ರಾತ್ರಿ 8 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮ ಮಂದಿರ, ಶ್ರೀರಾಮ ಪೇಟೆ.



■ **ಶ್ರೀರಾಮ ಮಂದಿರ:** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ಸುಬ್ರಹ್ಮಣ್ಯ ಹೋಮ, ಸಂಜೆ 6.30ಕ್ಕೆ ವಿದುಷಿ ಶ್ರೀಮತಿ ಕಾಂಚನಾಶ್ರೀ ಅವರಿಂದ ಭರತನಾಟ್ಯ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

ಕೆ.ಆರ್.ನಗರದಲ್ಲಿಂದು

■ **ಕೆ.ಆರ್.ಲಕ್ಕೇಗೌಡರ ಶಿಷ್ಯವೃಂದ ಹಾಗೂ ಹಿತೈಷಿ ಬಳಗ:** ಕೆ.ಆರ್.ಲಕ್ಕೇಗೌಡ ಅವರ ಜೀವನ ಕಥನ 'ವನಸುಮ' ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ: ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಶಾಸಕ ಸಾ.ರಾ.ಮಹೇಶ್, ಕೃತಿ ಕುರಿತು ಮಾತನಾಡುವವರು: ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್, ವಿಶೇಷ ಆಹ್ವಾನಿತರು : ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಅಭಿನಂದನಾ ನುಡಿ : ಚಾಮರಾಜನಗರ ಧೀನಬಂಧು ಟ್ರಸ್ಟ್ ಅಧ್ಯಕ್ಷ ಪ್ರೊ. ಜಿ.ಎಸ್. ಜಯದೇವ, ಉಪಸ್ಥಿತರು : ವಿಶ್ರಾಂತ ಕನ್ನಡ ಉಪನ್ಯಾಸಕ ಕೆ.ಆರ್. ಲಕ್ಕೇಗೌಡ, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್, ಕೃತಿಯ ಸಂಪಾದಕ ಡಾ. ದೀಪು, ಪ್ರಕಾಶಕ ಸೃಷ್ಟಿ ನಾಗೇಶ್, ಸ್ಥಳ: ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನ, ಕೃಷ್ಣರಾಜನಗರ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ –ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಬಿ.ಶ್ರೀರಾಂ ಭಟ್, ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್. ಎಸ್.ಎಸ್., 8.30 ರೂಪಕ "ಮಯೂರ ವರ್ಮ", ರಚನೆ– ಹೊರೆಯಾಲ ದೊರೆಸ್ವಾಮಿ, ನಿರ್ಮಾಣ– ಶ್ರೀನಿವಾಸಪ್ರಸಾದ್, 9.25 ನಾಟಕ, 10.00 ಮೌನದಾಚೆಯ ಬೆಳಕು– ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣ ಸಾಹಿತ್ಯ–ಎಸ್.ಶಂಕರ್, ನಿರ್ಮಾಣ–ಗೀತಾ ರಮಾನಂದ್, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರ ನಾಮ–ಬಿ.ಎನ್.ಮಂಜುಳಾ, 1.20 ಭಾವಗೀತೆಗಳು– ಶಂಕರ್ ಶಾನ್ ಭಾಗ್, 4.00 ಕಥಾ ಕಾಲಕ್ಷೇಪ "ಪಾದುಕಾ ಪಟ್ಟಭಿಷೇಕ", ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಮಿಶ್ರಮಾಧುರ್ಯ, 6.50 ಕೃಷಿರಂಗ–ಕಿಸಾನ್‌ವಾಣಿ– ತೋಟಗಾರಿಕೆ ಬೆಳೆಗಳ ಕೃಷಿ ಹಾಗೂ ಮಾರುಕಟ್ಟೆಯ ಅನುಭವ ಕುರಿತು ಕೃಷಿಕ ಎಂ.ಎನ್.ಕುಮಾರ್ ಅವರೊಂದಿಗೆ ಸಂದರ್ಶನ, 9.15ಯಕ್ಷಗಾನದ ಹಾಡುಗಳು–ಭೀಷ್ಮ ವಿಜಯ ಪ್ರಸಂಗದ ಹಾಡುಗಳು – ಹರೀಶ್ ಶೆಟ್ಟಿ ಸೂಡ, 9.30 ಪಿ. ಸುರಭಿ – ಹಾಡುಗಾರಿಕೆ

ರಾತ್ರೋರಾತ್ರಿ ದೇವರಾಜ ಅರಸು ರಸ್ತೆ ಡಾಂಬರೀಕರಣ: ಬೆಳಗ್ಗೆ ನೋಡಿದರೆ ಸಂಪೂರ್ಣ ಕಳಪೆ ಕಾಮಗಾರಿ

● ಜೆಸಿಬಿ ಮೂಲಕ ಡಾಂಬರ್ ತೆರವುಗೊಳಿಸಿದ ಇಂಜಿನಿಯರ್ ● ಪ್ರತಿಷ್ಠಿತ ರಸ್ತೆಯಲ್ಲೇ ಈ ಪಾಡಾದರೆ ಉಳಿದೆಡೆ ಕಾಮಗಾರಿಯ ಗತಿಯೇನು ಶಂಭುಲಿಂಗ!





ಮೈಸೂರು, ಏ. 10– ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಮೈಸೂರು ನಗರ ದಾದ್ಯಂತ ಹಲವೆಡೆ ರಸ್ತೆಗಳಿಗೆ ತರಾತುರಿಯಲ್ಲಿ ಡಾಂಬರೀಕರಣ ಮಾಡಲಾಗುತ್ತಿದೆ. ಬಹುತೇಕ ಕಾಮಗಾರಿ ಕಳಪೆಯಿಂದ ಕೂಡಿದೆ ಎಂಬ ಆರೋಪ ಗಳು ವ್ಯಾಪಕವಾಗಿ ಕೇಳಿಬಂದಿದ್ದು, ನಗರದ ಪ್ರಮುಖ ವಾಣಿಜ್ಯ ರಸ್ತೆಯಾದ ದೇವರಾಜ ಅರಸು ರಸ್ತೆಯಲ್ಲಿ ಗುತ್ತಿಗೆದಾರ ಕಳಪೆ ಕಾಮಗಾರಿ ನಡೆಸಿರುವುದು ಗುಣಮಟ್ಟ ಪರಿಶೀಲನೆಯಿಂದ ದೃಢಪಟ್ಟಿದೆ.

ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಂಜಿನಿಯರ್ ರಾಜು, ಇಂದು 40 ಮೀಟರ್ ಉದ್ದದ ರಸ್ತೆಯಲ್ಲಿ ಅರ್ಧ ಇಂಚು ಗಾತ್ರದಲ್ಲಿ ಹಾಕಲಾಗಿದ್ದ ಡಾಂಬರನ್ನು ಜೆಸಿಬಿ ಮೂಲಕ ಕಿತ್ತುಹಾಕಿದ್ದಲ್ಲದೇ, ಈ ಸ್ಥಳದಲ್ಲಿ ಮರು ಡಾಂಬರೀಕರಣ ಮಾಡುವಂತೆ ಗುತ್ತಿಗೆದಾರನಿಗೆ ಸೂಚಿಸಿದ್ದಾರೆ.

ಕಳೆದ ರಾತ್ರಿಯಷ್ಟೇ ಇಲ್ಲಿ ಡಾಂಬರೀಕರಣ ಮಾಡಲಾಗಿತ್ತು. ಆದರೆ, ಡಾಂಬರೀಕರಣವು ಅಲ್ಲಲ್ಲಿ ಕಿತ್ತುಬರುತ್ತಿರುವ ಬಗ್ಗೆ ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಗುಣಮಟ್ಟ ಪರಿಶೀಲಿಸಿದ ಇಂಜಿನಿಯರ್ ರಾಜು, ಡಾಂಬರ್ ಕಿತ್ತುಹಾಕಿದ್ದಾರೆ. ರಾತ್ರಿ ಹಾಕಿದ್ದ ಡಾಂಬರೀಕರಣದ ಬೈಂಡರ್ ಸ್ಟ್ರೆಂತ್ ಇಲ್ಲದ ಕಾರಣ ಡಾಂಬರೀಕರಣವನ್ನು ಕಿತ್ತುಹಾಕಿ ಮರು ಡಾಂಬರೀಕರಣ ಮಾಡಲು ಸೂಚಿಸಲಾಗಿದೆ ಎಂದು ರಾಜು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು. ಬೆಂಗಳೂರಿನ ರಮೇಶ್ ಎಂಬ ಗುತ್ತಿಗೆದಾರ ಈ ಕಾಮಗಾರಿ ನಡೆಸುತ್ತಿದ್ದ ಎಂದು ತಿಳಿದುಬಂದಿದೆ.

ಎಲ್ಲೆಲ್ಲೂ ಕಳಪೆ: ಚುನಾವಣೆ ಸಮೀಪಿ ಸುತ್ತಿದ್ದಂತೆಯೇ ಜನಪ್ರತಿನಿಧಿಗಳು ಹಲವಾರು ರಸ್ತೆಗಳಿಗೆ ತರಾತುರಿಯಲ್ಲಿ ಗುದ್ದಲಿ ಪೂಜೆ ನೆರವೇರಿಸಿಬಿಟ್ಟರು (ಗುದ್ದಲಿ ಪೂಜೆ ನಡೆದಿದ್ದರೆ ಕಾಮಗಾರಿ ನಡೆಸಲು ಚುನಾವಣೆ ನೀತಿ ಸಂಹಿತೆ ಅಡ್ಡಿಯಾಗುವುದಿಲ್ಲ). ತೀರಾ ಕಿತ್ತುಹೋಗಿರುವ ರಸ್ತೆಗಳ ದುರಸ್ತಿ ಕಾರ್ಯ ನಡೆಯುತ್ತಿಲ್ಲ. ವಿಚಿತ್ರವೆಂದರೆ ಅಷ್ಟೇನೂ ಕಿತ್ತು ಹೋಗಿರದ ರಸ್ತೆಗಳಿಗೆ ಡಾಂಬರೀಕರಣವಷ್ಟೇ ನಡೆಯುತ್ತಿದೆ. ಹಲವೆಡೆ ಉತ್ತಮವಾಗಿರುವ ರಸ್ತೆಗಳಿಗೂ ಡಾಂಬರ್ ಹಾಕಲಾಗುತ್ತಿದೆ. ಇಂತಹ ರಸ್ತೆಗಳಿಗೆ ಹೊಂದಿಕೊಂಡಂತೆ ಇರುವ ವಾಹನ ಸಂಚಾರಕ್ಕೆ ತೀವ್ರ ಅಡಚಣೆಯಾಗುವಂತೆ ಗುಂಡಿ ಬಿದ್ದಿರುವ ರಸ್ತೆಗಳನ್ನು ಹಾಗೇ ಬಿಡಲಾಗಿದೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿಬಂದಿದೆ.

ಕೆಲವೆಡೆ ರಸ್ತೆಯ ಅಂಚಿನಲ್ಲಿ ಮಾತ್ರ ಸ್ವಲ್ಪ ಮಣ್ಣನ್ನು ಅಗೆದು ಚೆನ್ನಾಗಿರುವ ರಸ್ತೆಯ ಮೇಲೆ ಚಾಪೆ ಹಾಸಿದಂತೆ ಒಂದು ಲೇಯರ್ ಡಾಂಬರೀಕರಣ ಮಾಡಲಾಗುತ್ತಿದೆ. ವಾಹನ ಸಂಚಾರ ದಟ್ಟಣೆ ಇರುವ ರಸ್ತೆಗಳನ್ನು ಬಿಟ್ಟು ಕೆಲ ಬಡಾವಣೆಗಳ ಕಿರಿಯ ರಸ್ತೆಗಳ ಡಾಂಬರೀಕರಣ ಮಾಡುತ್ತಿರುವುದರ ಹಿಂದಿನ ಉದ್ದೇಶವೇನು ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ. ಜನರಿಗೆ ಎದ್ದು ಕಾಣುವಂತಹ ನಗರದ ಹೃದಯ ಭಾಗದಲ್ಲಿರುವ ಪ್ರಮುಖ ರಸ್ತೆಗಳಿಗೆ ಮಾತ್ರ ಡಾಂಬರೀಕಣ ಭಾಗ್ಯ ದೊರೆತಿದೆ. ಅದೂ ಕೂಡ ಕಳಪೆಯಿಂದ ಕೂಡಿದೆ. ರಾತ್ರಿ ವೇಳೆ ಹಾಕಲಾಗುತ್ತಿರುವ ಡಾಂಬರ್ ರಸ್ತೆಗೆ ಹೊಂದಿಕೊಳ್ಳದ ಕಾರಣ ದ್ವಿಚಕ್ರ ವಾಹನವನ್ನು ನಿಲ್ಲಿಸಿ ಸ್ಟ್ಯಾಂಡ್ ಹಾಕಿದರೆ ಆ ಸ್ಥಳದಲ್ಲಿ ಹಳ್ಳ ಬೀಳುತ್ತಿದೆ. ಕೆಲವೆಡೆ ವಾಹನ ಸಂಚರಿಸಿದ ಟಯರ್ ಮಾರ್ಕ್‌ಗಳು ಕೂಡ ಕಾಣಸಿಗುತ್ತಿದೆ ಎಂದು ನಾಗರಿಕರು ದೂರಿದ್ದಾರೆ. ಆದರೆ, ರಾತ್ರಿ ಡಾಂಬರೀಕರಣ ಮಾಡಿದಾಗ ಅದು, ರಸ್ತೆಗೆ ಸೆಟ್ ಆಗುವುದರೊಳಗಾಗಿ ಅದರ ಮೇಲೆ ವಾಹನಗಳು ಸಂಚರಿಸಿದರೆ ಮಾರ್ಕ್‌ಗಳು ಬೀಳುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಕೋವಿಡ್ ಸೋಂಕಿನ ಹೆಚ್ಚಳ: ಸರ್ಕಾರಿ, ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಮಾಕ್ ಡ್ರಿಲ್‌ಗೆ ಮುಂದಾದ ಆರೋಗ್ಯ ಇಲಾಖೆ

ಬೆಂಗಳೂರು: ಕರ್ನಾಟಕ ರಾಜ್ಯ ಸೇರಿದಂತೆ ದೇಶಾದ್ಯಂತ ಕೊರೊನಾ ಸೋಂಕಿನ ಹಾವಳಿ ಬೇಸಿಗೆಯಲ್ಲಿ ಮತ್ತೆ ಹೆಚ್ಚಾಗುತ್ತಿದೆ. ರಾಜಧಾನಿ ಬೆಂಗಳೂರಿನಲ್ಲೂ ಕೋವಿಡ್ ಸೋಂಕು ಹೆಚ್ಚುತ್ತಿದ್ದು, ಅಣಕು ಪ್ರದರ್ಶನ ನಡೆಸಲು ಆರೋಗ್ಯ



ಇಲಾಖೆ ಮುಂದಾಗಿದೆ. ಸಂಭವನೀಯ ಅಪಾಯವನ್ನು ಎದುರಿಸಲು ಕರ್ನಾಟಕದಲ್ಲಿ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಸೌಲಭ್ಯಗಳ ಮೂಲಕ ರಾಜ್ಯದ ಸನ್ನದ್ಧತೆಯನ್ನು ತಿಳಿಯಲು ಇಂದು ಏಪ್ರಿಲ್ 10 ಮತ್ತು ನಾಳೆ ಏಪ್ರಿಲ್ 11 ರಂದು ಆರೋಗ್ಯ ಇಲಾಖೆ ಅಣಕು ಕಾರ್ಯಾಚರಣೆ ಹಮ್ಮಿಕೊಂಡಿದೆ.

ಕೊರೊನಾ ಪಾಸಿಟಿವ್ ಪ್ರಕರಣಗಳ ಹೆಚ್ಚಳವನ್ನು ಎದುರಿಸಲು ಆರೋಗ್ಯ ಸೌಲಭ್ಯಗಳ ಕಾರ್ಯಾಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಈ ಸಂಬಂಧ ಅಣಕು ಪ್ರದರ್ಶನ ನಡೆಯಲಿದೆ ಎಂದು ಇಲಾಖೆ ತಿಳಿಸಿದೆ. ಆಸ್ಪತ್ರೆಗಳಲ್ಲಿನ ಮೂಲಸೌಕರ್ಯ ಖಚಿತತೆಗಾಗಿ ಕಾರ್ಯಕ್ರಮ ಸರ್ಕಾರಿ ಆಸ್ಪತ್ರೆಗಳಲ್ಲಿ ಅಷ್ಟೇ ಅಲ್ಲದೆ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು, ಆರೋಗ್ಯ ಸಿಬ್ಬಂದಿ (ಮಾನವಶಕ್ತಿ), ಆಂಬ್ಯುಲೆನ್ಸ್‌ಗಳು, ಅಗತ್ಯ ಔಷಧಗಳು, ಮಾಸ್ಕ್‌ಗಳು, ಪಿಪಿಇ ಕಿಟ್‌ಗಳು, ಟೆಲಿಮೆಡಿಸಿನ್ ಸೇವೆಗಳು ಮತ್ತು ಆಮ್ಲಜನಕ ಸಿಲಿಂಡರ್‌ಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನ ಇದಾಗಿದೆ.

ಏಪ್ರಿಲ್ 10 ಮತ್ತು 11 ರಂದು ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಕಡ್ಡಾಯಗೊಳಿಸಿದ ಅಣಕು ಡ್ರಿಲ್ ನ್ನು ನಮ್ಮ ರಾಜ್ಯದಲ್ಲೂ ಕೈಗೊಳ್ಳಲಾಗುತ್ತಿದೆ. ಈ ಮೂಲಕ ತುರ್ತು ಸಂದರ್ಭದಲ್ಲಿ, ಇಲ್ಲವೇ ದಿಢೀರ್ ಕೊರೊನಾ ಏರಿಕೆ ಆದರೂ ಕರ್ನಾಟಕ ಆರೋಗ್ಯ ಇಲಾಖೆ ಎದುರಿಸಲು ಸಿದ್ಧ ಎಂದು ತೋರ್ಪಡಿಸುತ್ತಿದೆ ಎಂದು ಸರ್ಕಾರದ ರಾಷ್ಟ್ರೀಯ ಆರೋಗ್ಯ ಮಿಷನ್‌ನ ನಿರ್ದೇಶಕ ನವೀನ್ ಭಟ್ ವೈ ತಿಳಿಸಿದ್ದಾರೆ.

ದನ ಮೇಯಿಸುತ್ತಿದ್ದ ರೈತರ ಮೇಲೆ ಹೆಜ್ಜೇನು ದಾಳಿ: ಓರ್ವ ಸಾವು

ಮೈಸೂರು, ಏ.10– ದನ ಮೇಯಿಸುತ್ತಿದ್ದ ರೈತರ ಮೇಲೆ ಹಠಾತ್ ಹೆಜ್ಜೇನು ದಾಳಿ ಮಾಡಿ, ಒಬ್ಬರ ಬಲಿ ಪಡೆದ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಹೊಸತೊರವಳ್ಳಿ ಹಾಗೂ ಬೆಳಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಹೆಜ್ಜೇನು ದಾಳಿಗೆ ರೈತ ಸಾವನ್ನಪ್ಪಿದ್ದು, ನಿತ್ರಾಣಗೊಂಡಿರುವ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಚ್.ಡಿ.ಕೋಟೆ ತಾಲೂಕಿನ ಹೊಸತೊರವಳ್ಳಿ ಮತ್ತು ಬೆಳಗನಹಳ್ಳಿ ಸಮೀಪದಲ್ಲಿ ದನ ಮೇಯಿಸುತ್ತಿದ್ದ ರೈತರ ಮೇಲೆ ಹೆಜ್ಜೇನು ಹುಳುಗಳ ಹಿಂಡು ಹಠಾತ್ತನೆ ದಾಳಿ ನಡೆಸಿವೆ. ಹೆಜ್ಜೇನು ಹುಳುಗಳ ಮೊದಲು ಚಿಕ್ಕಮಾಲೇಗೌಡ(65) ಎಂಬುವರ ಮೇಲೂ ನಂತರ ಜಮೀನಿಗೆ ನೀರು ಹಾಯಿಸುತ್ತಿದ್ದ ಬೀರೇಗೌಡ ಮತ್ತು ಶಂಕರನಾಯ್ಕ ಎಂಬ ರೈತರ ಮೇಲೂ ದಾಳಿ ನಡೆಸಿವೆ.

ಮಾರ್ಗ ಮಧ್ಯೆ ರೈತ ಸಾವು: ಹೆಜ್ಜೇನು ದಾಳಿಗೆ ಒಳಗಾಗಿದ್ದ ಮೂವರಲ್ಲಿ ಆಸ್ಪತ್ರೆಗೆ ಸೇರಿಸಲು ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ಚಿಕ್ಕಮಾಲೇಗೌಡ ಸಾವನ್ನಪ್ಪಿದರೆ ಇನ್ನುಳಿದ ಇಬ್ಬರು ರೈತರು ಗಂಭೀರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ.

ಮಿನಿ ವಿಧಾನಸೌಧದಲ್ಲೂ ನಡೆದಿತ್ತು ಹೆಜ್ಜೇನು ದಾಳಿ: ಕಳೆದ ವರ್ಷದ ಡಿ.16 ರಂದು ಹೆಚ್.ಡಿ.ಕೋಟೆಯ ಮಿನಿ ವಿಧಾನಸೌಧದಲ್ಲಿ ಹೆಜ್ಜೇನು ದಾಳಿ ನಡೆದಿತ್ತು. ಈ ದಾಳಿಯಲ್ಲಿ ನಾಲ್ವರು ಗಾಯಗೊಂಡಿದ್ದರು. ಆದರೆ ಅವರೆಲ್ಲ ಸ್ಥಳೀಯ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಬಂದವರಿಗೆಲ್ಲಾ ಇದೇ ಮಾತು ಹೇಳಿ ಕಳಿಸ್ತಿದ್ದೇವೆ, ಈ ಬಾರಿ ನಾವು ಓಟು ಹಾಕುವುದೇ ಇಲ್ಲ

ನಿಖಿಲ್ ಕುಮಾರಸ್ವಾಮಿಗೆ ಮಹಿಳೆಯರ ತರಾಟೆ

ರಾಮನಗರ: ಕಳೆದ ಬಾರಿ 2019ರ ಲೋಕಸಭೆ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿ ಸುಮಲತಾ ಅಂಬರೀಷ್ ವಿರುದ್ಧ ಚುನಾವಣೆಗೆ ನಿಂತು ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಸೋತರು.

ಈ ಬಾರಿ ಅವರು ತಮ್ಮ ತಾಯಿ ಅನಿತಾ ಕುಮಾರಸ್ವಾಮಿ ಶಾಸಕಿಯಾಗಿರುವ



ರಾಮನಗರ ಕ್ಷೇತ್ರದಲ್ಲಿ ಜೆಡಿಎಸ್ ನಿಂದ ಚುನಾವಣೆಗೆ ನಿಲ್ಲುತ್ತಿದ್ದಾರೆ. ಅದಕ್ಕೆ ಕ್ಷೇತ್ರದಲ್ಲಿ ಭಾರೀ ಪ್ರಚಾರ ನಡೆಸುತ್ತಿದ್ದಾರೆ.

ರಾಮನಗರ ಜಿಲ್ಲೆ ಜೆಡಿಎಸ್ ನ ಭದ್ರಕೋಟೆ ಎಂದೇ ಹೇಳಲಾಗುತ್ತಿದೆ. ಆದರೆ ರಾಜಕೀಯದಲ್ಲಿ ಕೆಲವೊಮ್ಮೆ ಮತದಾರರ ಒಲವು ಯಾರ ಕಡೆಗಿರುತ್ತದೆ, ಹೇಗೆ ಮತಗಳು ಹಂಚಿಕೆಯಾಗುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಇಂದು ತಮ್ಮ ಬೆಂಬಲಿಗರೊಂದಿಗೆ ರಾಮನಗರದಲ್ಲಿ ಪ್ರಚಾರಕ್ಕೆ ಹೋಗಿದ್ದ ನಿಖಿಲ್ ಕುಮಾರಸ್ವಾಮಿಗೆ ಸ್ಥಳೀಯರಿಂದ ಅದರಲ್ಲೂ ಮಹಿಳೆಯರು ತರಾಟೆಗೆ ತೆಗೆದುಕೊಂಡಿದ್ದಾರೆ.

ಚರಂಡಿ, ರಸ್ತೆಯ ವ್ಯವಸ್ಥೆಯಿಲ್ಲ, ನಮಗೆ ಕುಡಿಯಲು ನೀರಿನ ವ್ಯವಸ್ಥೆಯಿಲ್ಲ, ಮನೆಯಲ್ಲಿ ಗಂಡಸರಿಲ್ಲ, ಶೌಚಾಲಯ, ಶುಚಿತ್ವದ ಸಮಸ್ಯೆಯಿದೆ. ಮೂಲಭೂತ ಸೌಕರ್ಯಗಳು ಸರಿಯಾಗಿಲ್ಲ. ನಿಮ್ಮ ತಾಯಿಯವರು ಸೌಲಭ್ಯ ಮಾಡಿಕೊಡುತ್ತೇವೆ ಎಂದು ಭರವಸೆ ನೀಡಿದ್ದಾರೆಯೇ ಹೊರತು ಮಾಡಿಕೊಟ್ಟಿಲ್ಲ. ಇಲ್ಲಿಗೆ ಯಾರು ಓಟು ಕೇಳಲು ಬಂದರೂ ಬರಬೇಡಿ ಎಂದು ನಾವು ಹೇಳುತ್ತೇವೆ. ಈ ಬಾರಿ ನಾವು ಯಾರಿಗೂ ಓಟು ಹಾಕುವುದಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ಅನಿತಾ ಕುಮಾರಸ್ವಾಮಿಯವರು ಬಂದು ಮೂರು ಸಲ ಗುದ್ದಲಿ ಪೂಜೆ ಮಾಡಿಬಿಟ್ಟು ಹೋಗಿದ್ದಾರೆ ಹೊರತು ಕೆಲಸವಾಗಿಲ್ಲ ಎಂದು ಆರೋಪಿಸಿದರು. ಕೊನೆಗೆ ನಿಖಿಲ್ ಕುಮಾರಸ್ವಾಮಿಯವರು ಮಹಿಳೆಯರನ್ನು ಸಮಾಧಾನಪಡಿಸಿದರು.

ವಿಶ್ವ ಆರೋಗ್ಯ ದಿನದ ಅಂಗವಾಗಿ ಅಪೋಲೋ ಬಿಜಿಎಸ್ ಆಸ್ಪತ್ರೆಯಿಂದ ಚಾಮುಂಡಿಬೆಟ್ಟದಲ್ಲಿ ಅಪೋಲೋ ಕ್ಲೈಂಬಥಾನ್

ದೈಹಿಕ ಚಟುವಟಿಕೆ, ಆರೋಗ್ಯಕರ ಜೀವನ ಶೈಲಿ ಬಗ್ಗೆ ಜಾಗೃತಿ







ಮೈಸೂರು,ಏ.10(ಎಂಕೆ)–ವಿಶ್ವ ಆರೋಗ್ಯ ದಿನದ ಅಂಗವಾಗಿ ಅಪೋಲೋ ಬಿಜಿಎಸ್ ಆಸ್ಪತ್ರೆ ವತಿಯಿಂದ ಚಾಮುಂಡಿಬೆಟ್ಟದಲ್ಲಿ ಆಯೋಜಿಸಿದ್ದ ದೈಹಿಕ ಚಟುವಟಿಕೆ ಮತ್ತು ಆರೋಗ್ಯಕರ ಜೀವನ ಶೈಲಿ ಜಾಗೃತಿ ಕುರಿತ 'ಅಪೋಲೋ ಕ್ಲೈಂಬಥಾನ್' ಉತ್ತಮ ಜನಸ್ಪಂಧನೆ ದೊರೆಯಿತು.

ಚಾಮುಂಡಿಬೆಟ್ಟ ಹತ್ತಿದ ಎಲ್ಲಾ ವಯೋಮಾನದ ಸುಮಾರು 500ಕ್ಕೂ ಹೆಚ್ಚು ಜನರು ಆರೋಗ್ಯಕರ ಜೀವನ ಶೈಲಿ ಕುರಿತು ಅರಿವು ಮೂಡಿಸಿದರು. ಇದಕ್ಕೂ ಮುನ್ನ ಅಪೋಲೋ ಬಿಜಿಎಸ್ ಆಸ್ಪತ್ರೆಯ ಹಿರಿಯ ಪ್ಲಾಸ್ಟಿಕ್ ಸರ್ಜನ್ ಡಾ. ಹೆಚ್.ವಿ.ಸತೀಶ್ ಮತ್ತು ಮೈಸೂರು ಅಪೋಲೊ ಬಿಜಿಎಸ್ ಆಸ್ಪತ್ರೆಯ ಮುಖ್ಯಸ್ಥ ಎನ್.ಜಿ.ಭರತೀಶ ರೆಡ್ಡಿ ಕ್ಲೈಂಬಥಾನ್ ಚಾಲನೆ ನೀಡಿದರಲ್ಲದೆ ಟಿ-ಶರ್ಟ್, ಕ್ಯಾಪ್ ಮತ್ತು ಬಿಬ್‌ಗಳನ್ನು ನೀಡಿ ಸ್ಪರ್ಧಿಗಳನ್ನು ಅಭಿನಂದಿಸಿದರು.

ಮೈಸೂರು ಅಪೋಲೊ ಬಿಜಿಎಸ್ ಆಸ್ಪತ್ರೆಯ ಮುಖ್ಯಸ್ಥ ಎನ್.ಜಿ. ಭರತೀಶ ರೆಡ್ಡಿ ಮಾತನಾಡಿ, ವಿಶ್ವ ಆರೋಗ್ಯ ದಿನದ ಅಂಗವಾಗಿ ನಾವು ಆರೋಗ್ಯ ಹಾಗೂ ಆರೋಗ್ಯಕರ ಜೀವನ ಶೈಲಿ ರೂಢಿಸಿಕೊಳ್ಳುವ ಮೂಲಕ ಆರೋಗ್ಯಕರ ರಾಷ್ಟ್ರದ ಭಾಗವಾಗಿರಬೇಕು. ಇಂದಿನ ಕ್ಲೈಂಬಥಾನ್ ಆರೋಗ್ಯಕರ ನಗರ ಮತ್ತು ರಾಷ್ಟ್ರದತ್ತ ನಾವು ಇರಿಸುತ್ತಿರುವ ಒಂದು ಮೆಟ್ಟಿಲಾಗಿದೆ ಎಂದರು.

ಪ್ಲಾಸ್ಟಿಕ್ ಸರ್ಜನ್ ಡಾ.ಹೆಚ್.ವಿ. ಸತೀಶ್ ಮಾತನಾಡಿ, ಸ್ಪರ್ಧಿಗಳು ತಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ವೈದ್ಯ ವೃತ್ತಿ ಪರರಾದ ನಮಗೆ ನಿಮ್ಮ ಆರೋಗ್ಯ ಬಗ್ಗೆ ಗಮನಹರಿಸುವುದು ನಮ್ಮ ಜವಾಬ್ದಾರಿ ಎಂದರು.

ಕ್ರಿಮಿನಲ್‌ಗಳ ಸ್ಪರ್ಧೆಗೆ ನಿಷೇಧ

4 ವಾರದಲ್ಲಿ ಉತ್ತರಿಸಲು ಕೇಂದ್ರಕ್ಕೆ ನೋಟಿಸ್

ನವದೆಹಲಿ: ರಾಜಕಾರಣವನ್ನು ಅಪರಾಧೀಕರಣ ಮುಕ್ತಗೊಳಿಸುವ ಕಾರ್ಯವು ನಮ್ಮ ವ್ಯಾಪ್ತಿಯನ್ನು ಮೀರಿದ್ದಾಗಿದೆ. ಇದಕ್ಕಾಗಿ ಕಾಯ್ದೆಗೆ ತಿದ್ದುಪಡಿ ತರುವುದು ಅಗತ್ಯವಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗವು ಸುಪ್ರೀಂಕೋರ್ಟ್‌ಗೆ ತಿಳಿಸಿತು. ರಾಜಕಾರಣವನ್ನು ಅಪರಾಧೀಕರಣ ಮುಕ್ತಗೊಳಿಸಲು ಆಯೋಗವು ಈಗಾಗಲೇ ಹಲವು ಕ್ರಮಗಳನ್ನು ಕೈಗೊಂಡಿದೆ. ಈ ನಿಟ್ಟಿನಲ್ಲಿ ಕೆಲ ಶಿಫಾರಸುಗಳನ್ನೂ ಮಾಡಿದೆ. ಆದರೆ, ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕಾಯ್ದೆಗೆ ತಿದ್ದುಪಡಿ ಅಗತ್ಯ ಎಂದು ಹೇಳಿತು.

ಈ ಸಂಬಂಧ ಲಿಖಿತ ಪ್ರತಿಕ್ರಿಯೆಯನ್ನು ದಾಖಲಿಸಿದ ಆಯೋಗವು, 2016ರ ಚುನಾವಣಾ ಸುಧಾರಣೆಗಳು ಕುರಿತ ಅಂಶಗಳನ್ನು 2004ರಲ್ಲಿ ಮಾಡಿದ್ದ ಶಿಫಾರಸುಗಳಲ್ಲಿಯೂ ಉಲ್ಲೇಖಿಸಿದೆ. ನಿರ್ದಿಷ್ಟ ಸ್ವರೂಪದ ಅಪರಾಧಗಳಿರುವ, ಕನಿಷ್ಠ 5 ವರ್ಷ ಸಜೆಗೆ ಒಳಗಾಗಿರುವ, ಆರೋಪಪಟ್ಟಿ ದಾಖಲಿಸಿರುವ, ಚುನಾವಣೆಗೆ ಕನಿಷ್ಠ ಆರು ತಿಂಗಳು ಮೊದಲು ಪ್ರಕರಣ ದಾಖಲಾಗಿರುವ ವ್ಯಕ್ತಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಇರದಂತೆ ನಿಷೇಧ ಹೇರಬೇಕು ಎಂದು ಶಿಫಾರಸು ಮಾಡಲಾಗಿದೆ ಎಂದು ಆಯೋಗವು ತಿಳಿಸಿದೆ. ವಕೀಲ ಅಶ್ವಿನ್‌ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನ ಸೂಚನೆಯಂತೆ ಪ್ರತಿಕ್ರಿಯೆಯಾಗಿ ಆಯೋಗವು ಈ ಪ್ರಮಾಣಪತ್ರ ಸಲ್ಲಿಸಿತು. ಗಂಭೀರ ಪ್ರಕರಣಗಳಿರುವರಿಗೆ ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧ ಹೇರಬೇಕು ಎಂದು ಅರ್ಜಿದಾರರು ಕೋರಿದ್ದರು. ಅತ್ಯಾಚಾರ, ಕೊಲೆ, ಅಪಹರಣ, ಸುಲಿಗೆ, ಲಂಚ, ಹಣ ಅಕ್ರಮ ವರ್ಗಾವಣೆ, ಆದಾಯ ಮೀರಿದ ಆಸ್ತಿ ಗಳಿಕೆ ಇತ್ಯಾದಿ ಗಂಭೀರ ಸ್ವರೂಪದ ಅಪರಾಧ ಪ್ರಕರಣ ಗಳಿರುವ ವ್ಯಕ್ತಿಗೆ ಚುನಾವಣೆಗೆ ಸ್ಪರ್ಧಿಸುವುದರಿಂದ ನಿಷೇಧ ಹೇರಬೇಕು ಎಂದು ಕೋರಿದ ಅರ್ಜಿಗೆ ಸಂಬಂಧಿಸಿದಂತೆ ನಾಲ್ಕು ವಾರದಲ್ಲಿ ಪ್ರತಿಕ್ರಿಯೆಯನ್ನು ದಾಖಲಿಸು ವಂತೆ ಸೂಚಿಸಿ ಕೇಂದ್ರಕ್ಕೆ ನೋಟಿಸ್ ಅನ್ನು ಕೋರ್ಟ್ ಜಾರಿ ಮಾಡಿತು. ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ವಿ.ನಾಗರತ್ನ ಅವರಿದ್ದ ಪೀಠ ಪ್ರಕರಣದ ವಿಚಾರಣೆ ನಡೆಸಿತು. 'ಭ್ರಷ್ಟಾಚಾರವು ಜನಸಾಮಾನ್ಯರ ಮೇಲೆ ಪರಿಣಾಮ ಬೀರುವ ಕಾರಣ, ಇದು ಬಹುಮುಖ್ಯವಾದ ವಿಷಯ' ಎಂದು ಅಭಿಪ್ರಾಯಪಟ್ಟಿದ್ದ ಪೀಠ, ಈ ಬಗ್ಗೆ ಪ್ರತಿಕ್ರಿಯೆ ದಾಖಲಿಸಲು ಫೆ.26ರಂದು ಕೇಂದ್ರಕ್ಕೆ ಕೊನೆಯ ಅವಕಾಶ ನೀಡಿತ್ತು.

ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ 2024ರಲ್ಲಿ ಮತ್ತೆ ಸ್ಪರ್ಧಿಸುತ್ತೇನೆ



ವಾಷಿಂಗ್ಟನ್: 2024ರಲ್ಲಿ ಮತ್ತೆ ಸ್ಪರ್ಧಿಸಲು ಯೋಜಿಸಿದ್ದೇನೆ ಎಂದು ಅಧ್ಯಕ್ಷ ಜೋ ಬೈಡನ್ ಸೋಮವಾರ ಹೇಳಿದ್ದಾರೆ. ಮತ್ತೆ ಸ್ಪರ್ಧಿಸಲು ಯೋಜಿಸಿದ್ದೇನೆ. ಆದರೆ, ಅದನ್ನು ಘೋಷಿಸಲು ಇನ್ನೂ ಸಿದ್ಧವಾಗಿಲ್ಲ ಎಂದು ಎನ್‌ಬಿಸಿಯ ಟುಡೇ ಕಾರ್ಯಕ್ರಮಕ್ಕೆ ನೀಡಿದ ಸಂದರ್ಶನ'ದಲ್ಲಿ ಹೇಳಿದ್ದಾರೆ. ಅವರು 2024 ರಲ್ಲಿ ಡೆಮಾಕ್ರಟಿಕ್ ಅಭ್ಯರ್ಥಿಯಾಗಲು ಉದ್ದೇಶಿಸಿದ್ದಾರೆ. ಆದರೆ, ಔಪಚಾರಿಕ ಘೋಷಣೆ ಇನ್ನೂ ಮಾಡಿಲ್ಲ. ಇಬ್ಬರೂ ಒಟ್ಟಿಗೆ ಸ್ಪರ್ಧಿಸುವುದಾಗಿ ಬೈಡನ್ ಮತ್ತು ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹೇಳಿಕೊಂಡಿದ್ದಾರೆ.

ಬೇಸಿಗೆ ಶಿಬಿರಗಳು ಮಕ್ಕಳಿಗೆ ಪರಂಪರೆಯ ಕೊಂಡಿಯಾಗಬೇಕು

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ 'ಬೇಸಿಗೆ ಬಂಡಿ ಶಿಬಿರ'ದಲ್ಲಿ ನಟ ಪ್ರಥಮ್ ಅಭಿಮತ





ಮೈಸೂರು, ಏ.10– ಬೇಸಿಗೆ ರಜಾ ಅವಧಿಯಲ್ಲಿ ಆಯೋಜಿಸಲ್ಪಡುವ ಬೇಸಿಗೆ ಶಿಬಿರಗಳು ವಾಣಿಜ್ಯ ಸ್ಪರ್ಶದಿಂದ ಕೂಡಿರದೇ ನಮ್ಮ ಮೂಲ ಪರಂಪರೆ, ಆಚಾರ–ವಿಚಾರಗಳು ಹಾಗೂ ಮೌಲ್ಯಯುತ ಬಾಲ್ಯವನ್ನು ಕಟ್ಟಿಕೊಡುವ ಕಾರ್ಯಕ್ರಮಗಳಾಗಬೇಕು ಎಂದು ಬಿಗ್‌ಬಾಸ್ ಖ್ಯಾತಿಯ ಚಿತ್ರ ನಟ ಪ್ರಥಮ್ ಅಭಿಪ್ರಾಯಪಟ್ಟರು.

ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿರುವ 21 ದಿನಗಳ 'ಬೇಸಿಗೆ ಬಂಡಿ ಶಿಬಿರ' ಬೇಸಿಗೆ ಶಿಬಿರದ ಜಾನಪದ, ಮೆರವಣಿಗೆಯನ್ನು ಉದ್ಘಾಟಿಸಿದ ನಂತರ ಅವರು ಮಾತನಾಡಿದರು.

ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಜಗತ್ತು ವೇಗವಾಗಿ ಓಡುತ್ತಿದ್ದು, ಆಧುನಿಕ ತಂತ್ರಜ್ಞಾನಗಳು ನಮ್ಮ ಸಂಸ್ಕೃತಿ ಆಚಾರ ವಿಚಾರಗಳನ್ನು ಮೂಲೋತ್ಪಾಟನೆ ಮಾಡುತ್ತಿವೆ. ಮಕ್ಕಳಿಗೆ ಸಹಜ ಬಾಲ್ಯ ದೊರಕುತ್ತಿಲ್ಲ. ಬಾಲ್ಯದ ಸವಿ ಅನುಭವಿಸಬೇಕಾದ ಮಕ್ಕಳು ಮೊಬೈಲ್, ಟ್ಯಾಬ್‌ಗಳ ಲೋಕದಲ್ಲಿ ಮುಳುಗಿ ಹೋಗಿದ್ದಾರೆ. ಇದರಿಂದ ನಮ್ಮ ಮಕ್ಕಳ ಸ್ವಾಭಾವಿಕ ಬೆಳವಣಿಗೆ ಹಾಗೂ ಭವಿಷ್ಯತಿನಲ್ಲಿ ಅವರು ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದ್ದರಿಂದ ನಮ್ಮ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ನಮ್ಮ ಸಂಸ್ಕೃತಿಯನ್ನು ಬಿತ್ತುವ ಹಾಗೂ ಪರಂಪರೆಯನ್ನು ಬೆಳೆಸುವ ಚಟುವಟಿಕೆಗಳು ಶಿಕ್ಷಣದ ಭಾಗವಾಗಬೇಕು. ಆಗ ಮಾತ್ರ ನಮ್ಮದು ನೈಜ ಶಿಕ್ಷಣ ಎಂದು ನಾವು ಒಪ್ಪಬಹುದಾಗಿದೆ. ಇಂಥ ಸುಧಾರಣೆ ಹಾಗೂ ಬದಲಾವಣೆಗೆ ಪೋಷಕರ ಸಹಕಾರ, ಸಹಭಾಗಿತ್ವ ಸಹ ಶಿಕ್ಷಣ ಸಂಸ್ಥೆಗೆ ಅವಶ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ತಜ್ಞ ಆರ್.ರಘು ಅವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿರುವ ನೈಪುಣ್ಯ ಶಿಕ್ಷಣ ಸಂಸ್ಥೆ ವಿಭಿನ್ನತೆ ಕಂಡುಕೊಂಡಿದೆ ಎಂದು ನಟ ಪ್ರಥಮ್ ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದಿನ ಉದ್ಘಾಟನಾ ಮೆರವಣಿಗೆಯಲ್ಲಿ ಶಿಬಿರಾರ್ಥಿ ಮಕ್ಕಳು ಸಾಂಪ್ರದಾಯಿಕ ಉಡುಗೆ ತೊಟ್ಟು ಹಳ್ಳಿಗಾಡಿನ ಸವಿ ಅನುಭವಿಸುವ ನಿಟ್ಟಿನಲ್ಲಿ ಎತ್ತಿನ ಗಾಡಿಗಳಲ್ಲಿ ಕುಳಿತು ಮೆರವಣಿಗೆಯಲ್ಲಿ ಸಾಗಿದರು. ವಿವಿಧ ಜನಪದ ನೃತ್ಯ, ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ನೈಪುಣ್ಯ ಶಾಲೆಯ ಬೇಸಿಗೆ ಬಂಡಿಯ ಈ ಕಾರ್ಯಕ್ರಮ ಆರಂಭದಲ್ಲಿ ದೇಶೀಯತೆಯ ಉತ್ತೇಜನಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸಂಪೂರ್ಣ ಜನಪದ ಚಟುವಟಿಕೆಗೆ ಒತ್ತು ಕೊಟ್ಟಿದ್ದು ಗಮನ ಸೆಳೆಯಿತು. ಬೇಸಿಗೆ ಶಿಬಿರದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ ಶೋಭಿತಾ, ಕಾರ್ಯದರ್ಶಿ ಆರ್.ಕೌಟಿಲ್ಯ, ಸಂಯೋಜಕಿ ಡಾ. ಶಾಲಿನಿ, ಅಧ್ಯಾಪಕ ವರ್ಗ ಹಾಗೂ ಶಿಬಿರದ ವಿವಿಧ ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯ ಕ್ರಮದಲ್ಲಿ ಭಾಗವಹಿಸಿದ್ದರು. ನೂರಾರು ಪೋಷಕರು ಮಕ್ಕಳೊಂದಿಗೆ ತಾವು ಹೆಜ್ಜೆ ಹಾಕಿ ಮೆರವಣಿಗೆಯ ಮೆರಗು ಹೆಚ್ಚಿಸಿದರು.

ನಕ್ಕರೆ ಅದೇ ಸ್ವರ್ಗ

ಟಿಕೆಟ್ ಪರೀಕ್ಷಕರು : (ಓರ್ವ ಪ್ರಯಾಣಿಕ ರೈಲಿನಲ್ಲಿ ಎರಡು ಟಿಕೆಟ್‌ನೊಂದಿಗೆ ಪ್ರಯಾಣಿಸುತ್ತಿದ್ದಾಗ) ಎರಡು ಟಿಕೆಟ್ ಖರೀದಿಸಿದ ಕಾರಣ ಏನು?

ಪ್ರಯಾಣಿಕ : ಒಂದು ಕಳೆದರೆ ಮತ್ತೊಂದು ಇರಲಿ ಅಂತ

ಟಿಕೆಟ್ ಪರೀಕ್ಷಕರು : ಒಂದು ವೇಳೆ ಎರಡೂ ಕಳೆದು ಹೋದರೆ?

ಪ್ರಯಾಣಿಕ : ಅದಕ್ಕಾಗಿಯೇ ನಾನು ತಿಂಗಳ ಪಾಸ್ ಅನ್ನೂ ಸಹ ಇಟ್ಟುಕೊಂಡಿದ್ದೇನೆ!

ಮೈಸೂರು ಮಿತ್ರ

ಮಂಗಳವಾರ, 11 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಮ್ಮ ದುಃಖವನ್ನೆಲ್ಲಾ ಕಡೆ ತನಕ ನಿವಾರಣೆ ಮಾಡುವುದು ಆಧ್ಯಾತ್ಮಿಕ ಜ್ಞಾನವೊಂದೇ – ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಳಿಗೆ ಚೆಂಬು ಹೋದ ಮೇಲೆ ಮಳಿಗೆ ಬಾಗಿಲು ಮುಚ್ಚಿದ ಹಾಗೆ

ನಿಮ್ಮ ಪತ್ರಗಳು

ಚುನಾವಣೆ ಯುದ್ಧವು ಅಲ್ಲ, ಕದನವು ಅಲ್ಲ, ಅದೊಂದು ವರದಾನ..!

ಮಾನ್ಯರೆ,

ಈಗ ಮತ್ತೆ ಬಂದಿದೆ ವಿಧಾನಸಭಾ ಚುನಾವಣೆ. ಮತದಾನದ ಮಹತ್ವವನ್ನು ಮತದಾರ ಅರಿಯಬೇಕಾಗಿದೆ. ಮತದಾನದ ಹಕ್ಕು ನಮ್ಮ ಸಂವಿಧಾನ ನಮಗೆ ನೀಡಿರುವ ಪವಿತ್ರ ವರದಾನ. ಚುನಾವಣೆ ಎಂಬುದು ಯುದ್ಧವು ಅಲ್ಲ, ಕದನವು ಅಲ್ಲ, ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ಪ್ರಜೆಗಳೇ ಅವರಿಗೆ ಬೇಕಾದ ಜನಪ್ರತಿನಿಧಿ ಆಯ್ಕೆ ಮಾಡಿಕೊಳ್ಳಲು ನೀಡಿರುವ ಗೋವಿನ ಕ್ಷೀರದಷ್ಟೇ ಮಾನ್ಯವಾದದ್ದು ಮತದಾನ. ಭ್ರಷ್ಟಾಚಾರ ಮುಕ್ತವಾಗಿಸಲು ಇದು ನಮ್ಮ ಒಂದು ಮುಖ್ಯ ಜವಾಬ್ದಾರಿಯಾಗಿದೆ. ನಮ್ಮಿಂದಲೇ, ಅದೂ ಮತದಾನದ ಮೂಲಕ ನಾಂದಿಯಾಗಬೇಕು. ಮತವನ್ನು ದಾನ ಮಾಡಬೇಕೇ ಹೊರತು, ಹಣ, ಹೆಂಡ ಮತ್ತಾವುದೇ ಆಸೆ–ಆಮಿಷಕ್ಕೆ ಮಾರಿಕೊಳ್ಳಬಾರದು ಮತ್ತು ಅದನ್ನು ಚಲಾಯಿಸದೇ ವ್ಯರ್ಥ ಕೂಡ ಮಾಡಬಾರದು.

ಪ್ರಜೆಗಳಾದ ನಾವು ಜಾಗೃತರಾಗದ ಹೊರತು ಬದಲಾವಣೆ ತರಲಾಗದು. ಎಚ್ಚರಿಕೆಯಿಂದ ಪ್ರತಿನಿಧಿಗಳ ಮೂಲಕ ಸರ್ಕಾರವನ್ನು ಆಯ್ಕೆ ಮಾಡಬೇಕಾಗಿದೆ. ವಿದ್ಯಾವಂತರೇ ಹೆಚ್ಚು ಇರುವ ಪ್ರಸ್ತುತ ಸಂದರ್ಭದಲ್ಲಿ ಸ್ವಾಭಿಮಾನಿಯಾಗಿ ಮುಂದಿನ ಭವಿಷ್ಯದ ಬಗ್ಗೆ ಚಿಂತಿಸಿ ಯೋಗ್ಯರನ್ನು ಚುನಾಯಿಸಿ ತರುವ ಹೊಣೆಗಾರಿಕೆ ನಮ್ಮ ಮೇಲಿದೆ. ನಮ್ಮಗಳ ಜೊತೆಯಿದ್ದು ಮೂಲ ಸೌಕರ್ಯ, ಸೌಲಭ್ಯಗಳ ಒದಗಿಸುವ ನಿಸ್ವಾರ್ಥ ಸೇವಕರಾಗಿ ದುಡಿಯುವ, ಪಕ್ಷ ಜಾತಿ, ಧರ್ಮ ಭೇದಭಾವ ತೋರದ ವ್ಯಕ್ತಿಯ ಗುರುತಿಸಿ, ನಮ್ಮ ಮನೆಯ ಒಬ್ಬ ಸದಸ್ಯರನ್ನು ಆಯ್ಕೆ ಮಾಡುತ್ತಿದ್ದೇವೆ ಎಂಬ ಭಾವದಲ್ಲಿ ಹೆಮ್ಮೆಯಿಂದ, ಪ್ರೀತಿಯಿಂದ, ಸ್ವಯಂ ಪ್ರೇರಿತರಾಗಿ ಮತಗಟ್ಟೆಗೆ ಹೋಗಿ ಮತದಾನ ಮಾಡಬೇಕು ಹಾಗೂ ಇತರರನ್ನು ಪ್ರಜ್ಞಾವಂತರನ್ನಾಗಿಸಿ ಮತದಾನ ಮಾಡುವಂತೆ ಪ್ರೇರೇಪಿಸಬೇಕು. ಇಲ್ಲವಾದರೆ ನಾಳೆ ಪ್ರಶ್ನಿಸುವ ಅಧಿಕಾರವನ್ನು ಪ್ರಜೆಗಳು ಕಳೆದುಕೊಳ್ಳಬೇಕಾಗುತ್ತದೆ. ದೊರಕಿರುವ ಹಕ್ಕನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳದಿದ್ದರೆ ನಮಗೆ, ನಮ್ಮಗಳ ಕ್ಷೇತ್ರಕ್ಕೆ ನಾವೇ ವಂಚನೆ ಮಾಡಿಕೊಂಡಂತೆ.

ಇನ್ನು ಮುಂದಿನ ದಿನಗಳಲ್ಲಿ ಪಶ್ಚಾತ್ತಾಪದಿಂದ ಪರಿತಪಿಸಬೇಕಾಗುತ್ತದೆ. ಆಸೆ ಆಮಿಷ ತೋರಿಸುವುದರಿಂದ ಮುಂದೆ ಜನಗಳ ತೆರಿಗೆ ಹಣವೇ ಪೋಲಾಗುತ್ತದೆ, ದುರ್ಬಳಕೆಯಾಗುತ್ತದೆ. ಮತ್ತೆ ನಾವೇ ತೆರಿಗೆ ರೂಪದಲ್ಲಿ ಖಜಾನೆ ತುಂಬಿಸಬೇಕಾಗುತ್ತದೆ. ಹಾಗಾಗಿ ಇದರ ಕಡೆ ಹೆಚ್ಚು ಗಮನಹರಿಸಬೇಕಾಗುತ್ತದೆ. ಇಲ್ಲದೇ ಹೋದರೆ ಮುಂದೆ ನಮ್ಮ ಕೆಲಸಕ್ಕೆ ನಾವೇ ಹಣ ಖರ್ಚು ಮಾಡಿಕೊಂಡು ಹುಡುಕಿ ಕೊಂಡು ಅಲೆಯುವಂತಾಗುತ್ತದೆ. ಮೇಲಾಗಿ ನಾವು ಅವರನ್ನು ಕೇಳುವ ಅಧಿಕಾರ ಕಳೆದುಕೊಳ್ಳುತ್ತೇವೆ. ತಮ್ಮ ಕ್ಷೇತ್ರದ ಅಭ್ಯುದಯಕ್ಕಾಗಿ ಎಲ್ಲರೂ ಮತ್ತೊಮ್ಮೆ ಚಿಂತಿಸಿ ಪವಿತ್ರವಾದ ಮತದಾನವನ್ನು ದಾನ ಮಾಡೋಣ. ನಮ್ಮ ಹಕ್ಕು ಚಲಾಯಿಸಿ ಯೋಗ್ಯರನ್ನು ಗೆಲ್ಲಿಸಿ ತರೋಣ. ದೇಶ ಕಟ್ಟುವ, ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಕಾರ್ಯದಲ್ಲಿ ನಾವು–ನೀವು ಕೈ ಜೋಡಿಸೋಣ ಬನ್ನಿ..!

–ಕಟ್ಟೆ ಎಂ.ಎಸ್. ಕೃಷ್ಣಸ್ವಾಮಿ, ಸಾಹಿತಿ ಕಲಾವಿದ, ಮಂಡ್ಯ

ಫುಟ್‌ಪಾತ್‌ನಲ್ಲಿ ತಲೆ ಎತ್ತಿರುವ ಫಾಸ್ಟ್‌ಫುಡ್ ಟೆಂಟ್ ತೆರವಿಗೆ ಮನವಿ



ಮಾನ್ಯರೆ,

ಕಳೆದ ಐದಾರು ದಿನಗಳಿಂದ ಚಾಮರಾಜಪುರಂನ ನರಸರಾಜ ರಸ್ತೆಯ "ಮನುವನ" ಪಾರ್ಕ್ ಪ್ರವೇಶ ದ್ವಾರದ ಹತ್ತಿರ ಫುಟ್‌ಪಾತನ್ನು ಆಕ್ರಮಿಸಿಕೊಂಡಂತೆ ಫಾಸ್ಟ್‌ಫುಡ್ ಟೆಂಟ್ ಒಂದು ತಲೆ ಎತ್ತಿದೆ. ಇದರಿಂದ ವಾಕಿಂಗ್ ಹೋಗುವವರಿಗೆ ತೊಂದರೆಯಾಗುತ್ತಿದೆ. ವಾಹನಗಳನ್ನು ಪಾರ್ಕ್ ಮಾಡಲು ಕೂಡ ತೊಂದರೆಯಾಗಿದೆ. ಮೊದಲೇ ಆ ರಸ್ತೆಯ ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಓಡಾಡಲು ಮತ್ತಷ್ಟು ತೊಂದರೆಯಾಗಿದೆ. ಸಾಮಾನ್ಯವಾಗಿ ಅಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ಉಚಿತ ಮೆಡಿಕಲ್ ಕ್ಯಾಂಪ್ ನಡೆಯುತ್ತಿತ್ತು. ಈಗ ಅಲ್ಲಿ ಫಾಸ್ಟ್‌ಫುಡ್ ಟೆಂಟ್, ಚೇರ್, ಟೇಬಲ್, ಗ್ಯಾಸ್ ಇನ್ನಿತರೆ ಅಡುಗೆ ಪರಿಕರಗಳು ಆವರಿಸಿಕೊಂಡು ಫುಟ್‌ಪಾತ್ ಕಾಣದಂತೆ ಮಾಡಿವೆ. ವ್ಯಾಪಾರಿ ಮನಸ್ಥಿತಿಯ ಫಾಸ್ಟ್‌ಫುಡ್ ಕೇಂದ್ರಗಳು ಪಾರ್ಕ್ ಇರುವ ಉದ್ದೇಶಕ್ಕೆ ವ್ಯತಿರಿಕ್ತವಾಗಿವೆ. ಇಂತಹ ವ್ಯಾಪಾರಿ ಕೇಂದ್ರಗಳಿಂದ ಸಾಕಷ್ಟು ಪಾರ್ಕ್‌ಗಳು ಹಾಳಾಗಿವೆ. ಚಾಮರಾಜ ಪುರಂನಂತಹ ಪ್ರಶಾಂತ ಏರಿಯಾದಲ್ಲಿ ಈ ರೀತಿಯ ಕಿರಿಕಿರಿ ಉಂಟು ಮಾಡುವ ವ್ಯಾಪಾರ ಚಟುವಟಿಕೆ ಅನವಶ್ಯಕ. ಸಂಬಂಧಪಟ್ಟವರು ಕೂಡಲೇ ಇದನ್ನು ತೆರವುಗೊಳಿಸಿ, ಮಹಿಳೆಯರು, ವೃದ್ಧರು ನೆಮ್ಮದಿಯಾಗಿ ವಾಕಿಂಗ್ ಮಾಡಲು ಅನುವು ಮಾಡಿಕೊಡಿ. ಸಾರ್ವಜನಿಕ ಹಣದಿಂದ ನಿರ್ಮಾಣಗೊಂಡ ಪಾರ್ಕ್‌ನ ಧ್ಯೇಯೋದ್ದೇಶ ನಗಣ್ಯವಾಗದಿರಲಿ.

–ನೇತ್ರ, ಪಂಪಾಪತಿ ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು

ದರ್ಶನ್ ಧ್ರುವನಾರಾಯಣ್ ಬೆನ್ನಿಗೆ ನಿಲ್ಲಬೇಕಿದೆ

ಮಾನ್ಯರೆ,

ಸರಳ ಸಜ್ಜನ ರಾಜಕಾರಣಿ ದಿವಂಗತ ಆರ್.ಧ್ರುವನಾರಾಯಣ್ ವಿಧಿವಶರಾಗಿ ಒಂದು ತಿಂಗಳು ಕಳೆಯುವ ಮುನ್ನವೇ ಅವರ ಪತ್ನಿ ವೀಣಾ ಧ್ರುವನಾರಾಯಣ್ ಸಾವು ಅವರ ಕುಟುಂಬಕ್ಕೆ ಬರ ಸಿಡಿಲಿನಂತೆ ಎರಗಿದೆ. ತಂದೆಯ ಸಾವಿನ ನೋವೇ ಇನ್ನು ಮಾಸಿಲ್ಲ. ಆಗಲೇ ತಾಯಿಯ ಸಾವಿನ ಆಘಾತವನ್ನು ಚಿಕ್ಕ ವಯಸ್ಸಿನ ಇಬ್ಬರು ಗಂಡು ಮಕ್ಕಳು ಮತ್ತು ಕುಟುಂಬ ವರ್ಗ ಹೇಗೆ ತಾನೆ ತಡೆದುಕೊಳ್ಳಲು ಸಾಧ್ಯ. ವಿಧಿಯ ಕ್ರೂರಲೀಲೆ ಧ್ರುವನಾರಾಯಣ್ ಅವರ ಜೀವನದಲ್ಲಿ ಇಂತಹ ದುರಂತ ಸನ್ನಿವೇಶಕ್ಕೆ ಎಡೆಮಾಡಿಕೊಟ್ಟಿದೆ. ಇಂತಹ ಸಂದರ್ಭದಲ್ಲಿ ಅವರ ಹಿತೈಷಿಗಳು, ಅಭಿಮಾನಿಗಳು ಹಾಗೂ ಬಂಧುಮಿತ್ರರು ಅವರ ಕುಟುಂಬಕ್ಕೆ ಒತ್ತಾಸೆಯಾಗಬೇಕು. ಜೊತೆಗೆ ದರ್ಶನ್ ಧ್ರುವನಾರಾಯಣ್ ಅವರ ಭವಿಷ್ಯದ ವಿಚಾರದಲ್ಲಿ ಸಹಕಾರ ನೀಡಬೇಕಾದ್ದು ಮಾನವೀಯ ಧರ್ಮ.

ತಂದೆಯ ಸಾವಿನ ನೋವಿನ ನಡುವೆಯೇ ಅವರ ಅಪಾರ ಸಂಖ್ಯೆಯ ಅಭಿಮಾನಿಗಳು, ಹಿತೈಷಿಗಳ ಒತ್ತಾಸೆಗೆ ಮಣಿದು ದರ್ಶನ್ ಧ್ರುವನಾರಾಯಣ್ ಅವರು ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದಾರೆ. ತಂದೆ–ತಾಯಿ ಕಳೆದುಕೊಂಡು ನೊಂದಿರುವ ಈ ಯುವ ಮನಸ್ಸು ನಂಜನಗೂಡಿನ ಜನತೆಯ ಮನೆಯ ಬಾಗಿಲಿಗೆ ಬರಲಿದೆ. ಇವರ ಬೆನ್ನಿಗೆ ನಂಜನಗೂಡಿನ ಜನತೆ ನಿಲ್ಲಬೇಕು. ಈ ಯುವಕನ ಕಣ್ಣೀರನ್ನು ಒರೆಸಿ. ನೊಂದ ಜೀವಕ್ಕೆ ಸಂತೈಸುವ ನಿರ್ಧಾರ ಕೈಗೊಳ್ಳಬೇಕಿದೆ. ತಂದೆ–ತಾಯಿ ಕಳೆದುಕೊಂಡ ಜೀವಕ್ಕೆ ಅನಾಥಪ್ರಜ್ಞೆ ಕಾಡುವ ಮೊದಲೇ ಹೆಗಲು ತಟ್ಟಿ ಸಂತೈಸುವ, ನಾವಿದ್ದೇವೆ ಹೆದರಬೇಡ ಎಂದು ಧೈರ್ಯ ತುಂಬುವ ನಂಜನಗೂಡು ಜನತೆಯ ಪ್ರೀತಿಯ ಅವಶ್ಯಕತೆ ಇದೆ. **–ರಮೇಶ್ ಮೌರ್ಯ, ಹೆಡಿಯಾಲ, ನಂಜನಗೂಡು ತಾ.**



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಅಂಕದ ಪರದೆಯ ಮೇಲೆ ನಗುವಾಗ ಎಲ್ಲ ನೆಂಟರು!.....

ಸಾಮಾನ್ಯವಾಗಿ ವಿದುರರು, ವಿಧವೆಯರು, ಮಕ್ಕಳಿಲ್ಲದವರು, ಮದುವೆ ಆಗದವರು. ಆಕಸ್ಮಿಕವಾಗಿ ಎಲ್ಲರನ್ನೂ ಕಳಕೊಂಡವರು–ಹೀಗೆ ಒಂದಿಲ್ಲೊಂದು ಕಾರಣಕ್ಕೆ ಯಾರೂ ಇಲ್ಲದೆ ಒಬ್ಬೊಬ್ಬರೇ ಜೀವಿಸುತ್ತಿರುವ ಅಸಂಖ್ಯಾತ ಮಂದಿ ನಮ್ಮ ನಡುವೆ ಇದ್ದಾರೆ. ಅಂಯ್ಯೋ! ಪಾಪ ಎಲ್ಲರೂ ಜೊತೆಗಿದ್ದರು ಈಗ ಯಾರೂ ಇಲ್ಲ; ಒಬ್ಬರೇ ಇದ್ದಾರೆ! ತುಂಬಾ ಒಳ್ಳೆ ಜನ ಹೀಗಾಗಬಾರದಿತ್ತು. ಅವರಿಗೆ ಯಾರೂ ಇಲ್ಲ ಅವರೇನೋ ಒಂಟಿ, ಏಕಾಂಗಿ, ಅಯ್ಯೋ ಪಾಪ ಸರಿ! ಆದರೆ ಎಲ್ಲರೂ ಇದ್ದೂ ಯಾರೂ ಇಲ್ಲದಂತೆ ಬದುಕುವ ಒಂಟಿತನ ಅನ್ನೋದು ಆಗಾಗ ನಮ್ಮನ್ನು ಕಾಡೋದಿಲ್ವ? ನಾವು ಅನುಭವಿಸುವ ನಮ್ಮ ಒಂಟಿತನದ ಬಗ್ಗೆ ನಾವು ಯಾವತ್ತಾದರೂ ಯಾರ ಬಳಿಯಾದರೂ ಹೇಳಿಕೊಂಡಿದ್ದೀವಾ? ಹಾಗಾದರೆ ಎಲ್ಲರೂ ಇದ್ದ ಮಾತ್ರಕ್ಕೆ ನಮ್ಮ ಮನಸ್ಸು ಒಂಟಿತನ ಅನುಭವಿಸುವುದೇ ಇಲ್ಲವೇ? ಮನೆಯ ವರಾಂಡದಲ್ಲಿ ಕುಳಿತು ಹರಟೆ ಕೊಚ್ಚುತ್ತಾ ಟಿ.ವಿ. ನೋಡುತ್ತ ಲವಲವಿಕೆಯಿಂದಿದ್ದ ಮನಸ್ಸು ಎಲ್ಲರೂ ಎದ್ದುಹೋದ ಮೇಲೆ ಏಕಾಂತ ಬಯಸುತ್ತದಲ್ಲ ಹೇಗೆ? ಮಕ್ಕಳ ಓದು, ನೌಕರಿ, ಮದುವೆ, ಜವಾಬ್ದಾರಿ ಎಲ್ಲಾ ಮುಗಿದ ಮೇಲೆ ಅಕ್ಷರಶಃ ಒಂಟಿತನ ಅನ್ನೋದು ನಮ್ಮ ಹೆಗಲ ಮೇಲೆ ಕೈಯ್ಯಿಟ್ಟು 'ಹಲೋ' ಎಂದಾಗ ಉತ್ತರಿಸಲು ಉತ್ತರವಿಲ್ಲದೆ ಪ್ಯಾದೆ ನಗೆ ನಕ್ಕು ಮೌನವಾಗಿ ಅನುಭವಿಸುವ ಅತಿ ಮಧುರ ಯಾತನೆಯೆಂದರೆ ಈ ಒಂಟಿತನ ಸಾರ್. ಇದು ಎಲ್ಲರ ಬದುಕಿನ ಬಾಗಿಲಿಗೂ ಕರೆಯದೇ ಬರುವ ಅತಿಥಿ. ಕಾದಿರಿಸಿದ ಬಸ್ ಟಿಕೇಟು, ಒಂದಿಲ್ಲೊಂದು ದಿನ ನಮ್ಮ ಪಾಲಿಗಿದು ಗ್ಯಾರಂಟಿ.

ಇದು ತರ್ಕಕ್ಕೇ ಸಿಲುಕದ ವಿಚಿತ್ರ ವ್ಯಾಕುಲ. ಅಂದಾಜಿಗೇ ನಿಲುಕದ ಅವ್ಯಕ್ತ ಗೊಂದಲ. ಎಲ್ಲರೂ ಇದ್ದು ಯಾರೂ ಇಲ್ಲ ಎನ್ನುವ ನಿರ್ಭಾವುಕ ಸ್ಥಿತಿ, ಪ್ರೇಮಲೋಕ ಚಿತ್ರಿಸಿ ಪಡ್ಡೆ ಹುಡುಗರ ನಿದ್ದೆ ಕೆಡಿಸಿದ ರವಿಚಂದ್ರನ್ ಅದೇಕೋ ಗೊತ್ತಿಲ್ಲ ನಲ್ವತ್ತು ದಾಟಿದ ಮೇಲೆ 'ಏಕಾಂಗಿ' ಎಂಬ ಸಿನಿಮಾ ನಿರ್ಮಿಸಿ ತಾನು ಚಿತ್ರಿಸಿದ 'ಏಕಾಂಗಿ'ಯಲ್ಲಿ ಒಂಟಿತನವನ್ನು ಸೆಲೆಬ್ರೇಟ್ ಮಾಡುವ ವಿನೂತನ ಸಂದರ್ಭಗಳನ್ನು ಚಿತ್ರೀಕರಿಸಿ ತೋರಿಸಿದ್ದು ಮಾತ್ರ ಏಕಾಂಗಿತನದ ಸೆಲೆಬ್ರೇಷನ್‌ಗಾಗಿ. ಪ್ರೇಮಲೋಕದಲ್ಲಿ ಗಿಟಾರ್ ಹಿಡಿದ ಕೈ, ಇಲ್ಲಿ ಪಿಯಾನೋ ನುಡಿಸುತ್ತಿತ್ತು. ಏಕಾಂಗಿ ಗೆಲ್ಲಲಿಲ್ಲ. ಆದರೆ ಇವತ್ತಿಗೂ ರವಿಚಂದ್ರನ್ ಹೇಳೋದೇನೆಂದ್ರೆ ಜನ ನೋಡದೇ ಇದ್ರೂ ಪರ್ವಾಗಿಲ್ಲ! ಸಿನಿಮಾ ಗೆಲ್ಲದೇ ಹೋದ್ರು ಪರ್ವಾಗಿಲ್ಲ! ಏಕಾಂಗಿ ನನಗಿಷ್ಟ ಅಂತ. 'ಏಕಾಂಗಿ' ನನ್ನ ಸಿನಿಮಾ passion ಎಂದು ಹೇಳಿದ್ದುಂಟು. ಅಂದ ಮೇಲೆ ಒಂದು ಬಿಗ್ ಬಜೆಟ್ ಸಿನಿಮಾದ ಕೇಂದ್ರ ಕಥಾವಸ್ತುವಾದ ಈ 'ಏಕಾಂಗಿತನ', ಒಂಟಿತನಗಳೆಂಬ ಗಂಡಭೇರುಂಡ ಒಂದು ತಲೆಯಲ್ಲಿ ಸೆಲೆಬ್ರೇಷನ್ನು ಮತ್ತೊಂದರಲ್ಲಿ ವೈಬ್ರೇಷನ್ನು ಎರಡನ್ನೂ ಸೃಷ್ಟಿಸುವ ಭಾವತೀವ್ರತೆಯ ಸೂಚ್ಯಂಕವಾಗುತ್ತಲ್ಲ ಹೇಗೆ? ಇದು ಬರಹಗಾರರನ್ನೂ ಬಿಡದೆ ಕಾಡುವ ಅಂಕದ ಪರದೆ. ಬರಹಗಾರರು ಚಿತ್ರಕಾರರು, ಸಂಗೀತಗಾರರು, ಕಲಾವಿದರು, ಪತ್ರಕರ್ತರು, ಆಟಗಾರರು, ಸುಪ್ತಚೇತನದ ಈ ಏಕಾಂತವನ್ನು ಮೊದಮೊದಲು ಸೆಲೆಬ್ರೇಟ್ ಮಾಡುತ್ತಾರೆ ಅದೇ ಅದರ ತೀವ್ರತೆ ಹೆಚ್ಚಾದಂತೆ ವೈಬ್ರೇಟ್ ಆಗುತ್ತಾರೆ.

ನಿಮಗೆ ಗೊತ್ತೆ? ಡಾ. ಜೀವರಾಜ್ ಆಳ್ವ ಎಂಬ ಉತ್ಸಾಹಿ, ವರ್ಣರಂಜಿತ ವ್ಯಕ್ತಿತ್ವದ ರಾಜಕಾರಣಿ ಕರ್ನಾಟಕದ ರಾಜಕಾರಣದಲ್ಲಿ ರಾಮಕೃಷ್ಣ ಹೆಗಡೆಯವರಂಥ ಮುತ್ಸದ್ಧಿಯ ಜೊತೆ ಹೆಜ್ಜೆ ಹಾಕಿದ ಬಹುದೊಡ್ಡ ಸಂಘಟಕ. ಚುನಾವಣೆಗಳಲ್ಲಿ ಪಟ್ಟು ಹಾಕಿ ಗೆಲ್ಲಲು ಗೊತ್ತಿದ್ದ ಜೀವರಾಜ್, ಸದಾ ಹುಡುಗರ ಪಡೆ ಕಟ್ಟಿಕೊಂಡು, ರಾಜಕಾರಣದ ಪಾಳೇಪಟ್ಟು ನಡೆಸುತ್ತಿದ್ದ ತರುಣರ ತಲೆಮಾರಿನ ಆಕರ್ಷಣೆಯಾಗಿದ್ದವರು. ಅಂಥಾ ಜೀವರಾಜ್ ಆಳ್ವ ತನ್ನ ಜೀವನದ ಕಡೇ ದಿನಗಳಲ್ಲಿ ಅಕ್ಷರಷಃ ಏಕಾಂಗಿಯಾಗಿ ಹೋಗಿದ್ದರು. ವಿದೇಶದಲ್ಲಿ ಚಿಕಿತ್ಸೆ ಕೊಡಿಸುತ್ತೇನೆಂದು ಕರೆಸಿಕೊಂಡ ಆಳ್ವ ಸ್ನೇಹಿತನೊಬ್ಬ ಕಡೇ ಘಳಿಗೆಯಲ್ಲಿ ಕೈಕೊಟ್ಟು, ವಿಮಾನ ನಿಲ್ದಾಣದಲ್ಲಿ ಅವರನ್ನು ರಿಸೀವ್ ಮಾಡಲೂ ಬರದೆ ನಾಪತ್ತೆಯಾಗಿಬಿಡುತ್ತಾನೆ. ತಾರುಣ್ಯದ ಕಾಲದಲ್ಲಿ ಕರ್ನಾಟಕವನ್ನೇ ಸುತ್ತುತ್ತಿದ್ದ ಜೀವರಾಜ್ ಕಾಲುಗಳಲ್ಲಿ ಆವತ್ತು ಶಕ್ತಿಯಿರಲಿಲ್ಲ. ಜೊತೆಯಲ್ಲಿ ಯಾರೂ ಇಲ್ಲದೆ ವ್ಹೀಲ್‌ಛೇರ್ ಮೇಲೆ ಒಬ್ಬಂಟಿಯಾಗಿ ಕುಳಿತಿದ್ದ ಜೀವರಾಜ್‌ರನ್ನ ಗೊತ್ತಿದ್ದವರೊಬ್ಬರು ಗುರುತಿಸಿ, ಮಾತಾಡಿಸಿ, ಭಾರತಕ್ಕೆ ವಾಪಸ್ಸು ಕಳಿಸುವಾಗ ಸಂಕಟ ಮತ್ತು ಮುಗ್ಗಟ್ಟುಗಳ ಕಾಲದಲ್ಲಿ ಎಲ್ಲರೂ ಒಬ್ಬಂಟಿಗರೆ ಎಂಬ ಸತ್ಯ ಬೃಹದಾಕಾರ ತಾಳುತ್ತದೆ. ಆಗ ಕಾಡುತ್ತದೆ ನೋಡಿ ಜೀವರಾಜ್‌ಗೆ ಒಂಟಿತನ ಅನ್ನೋ ಪೆಡಂಭೂತ. ಅದರ ನೋವಿಗೆ ಭಾಷೆಯಿಲ್ಲ, ಬರವಣಿಗೆಯಿಲ್ಲ, ಭಾವವಿಲ್ಲ, ಬಂಧುವಿಲ್ಲ. ಸಂಕಟ ಮತ್ತು ಮುಗ್ಗಟ್ಟುಗಳ ಕಾಲದಲ್ಲಿ ಎಲ್ಲರೂ ಒಬ್ಬಂಟಿಗರೆ! unless ರಾಜಕಾರಣಿಗಳು, ಅಧಿಕಾರಿಗಳು, ವ್ಯಾಪಾರಸ್ಥರು, ಆಯಕಟ್ಟಿನ ಜಾಗಗಳಲ್ಲಿ ಕುಳಿತ ಪ್ರಭಾವಿಗಳು ಇಂಥ ಮುಗ್ಗಟ್ಟಿಗೆ ಸಿಲುಕಿದರೆ ಅವರು ಮಾತ್ರ ಈ ಒಂಟಿತನದ ವೈಬ್ರೇಷನ್ನಿನಿಂದ ಬಚಾವಾಗುವ ಅವಕಾಶವಿರುತ್ತದೆ. ಕಾರಣ ಮುಂದೊಂದು ದಿನ ಇವರಿಂದ ನಮಗೆ ಪ್ರಯೋಜನವಿದೆ. ಅನುಕೂಲಗಳು ಆಗುತ್ತವೆ ಎಂಬ ಗ್ಯಾರಂಟಿಯಿದ್ದರೆ ಮಾತ್ರ ಅವರ ಸುತ್ತಾ ಜನ ಜಾತ್ರೆಯೇ ನೆರೆಯುತ್ತದೆ. ಇಂದು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಇಂತಹ ಅದೆಷ್ಟು ಸತ್ಯಾಸತ್ಯ ಚಿತ್ರಣಗಳನ್ನು ಇಡೀ ಸಮಾಜ ಕುತೂಹಲದಿಂದ ನೋಡುತ್ತಿದೆ ಎಂದರೆ, ಅಧಿಕಾರ ಕಳೆದುಕೊಳ್ಳುವ ತನಕ ಕೆಲವರು ಅವರನ್ನು ಒಂಟಿಯಾಗಲು ಬಿಡುವುದಿಲ್ಲ. ಅಂಥವರಿಗೆ ಮಾತ್ರ ಗೆಳೆತನದ ಅಕ್ಕರೆ ತೋರಿಸಿ ಆತ್ಮೀಯತೆಯ ಪಟ್ಟ ಕಟ್ಟುತ್ತಾರೆ. ಇಲ್ಲದಿದ್ದರೆ ಸದಾ ಜನಜಂಗುಳಿಯ ಮಧ್ಯೆಯೇ ಇದ್ದು ಇದ್ದೂ ಅಭ್ಯಾಸವಾಗಿ ಹೋಗಿರುವ ಅಸಂಖ್ಯಾತ ಜನಪ್ರಿಯ ವ್ಯಕ್ತಿಗಳ ಆತ್ಮಸಂಚಲನ ಏಕಾಂಗಿಯಾಗಿ ಬಿಡುತ್ತದೆ. ಎಲ್ಲಾ ಇದ್ದು ಅವರು ಆಂತರ್ಯದಲ್ಲಿ ಒಬ್ಬಂಟಿಗರಾಗಿಬಿಡುತ್ತಾರೆ. ಕೆಲವೊಮ್ಮೆ ಊಟ, ತಿಂಡಿ ಮಾಡಲೂ ಬಿಡದ ಜನ, ಅವರು ಸ್ನಾನಕ್ಕೆ ಹೋದಾಗಲೂ, ಬಂದ ಕೂಡಲೇ ನಾವೇ ಕಾಣಬೇಕೆಂಬ ಆಸೆಯಿಂದ ಸ್ನಾನದ ಮನೆಯ ಬಾಗಿಲಲ್ಲೇ ನಿಂತುಬಿಡುತ್ತಾರೆ. ಅವರು ಹಾಕಿಕೊಂಡ ಪ್ಯಾಂಟು, ಶರ್ಟು, ಕೋಟು, ಬೂಟು ವಾಚು, ಬೆಲ್ಟುಗಳನ್ನೇ ಅದ್ಭುತ ಎಂದು ಹಾಡಿಹೊಗಳುವ ಅಸಂಖ್ಯಾತ ಅಭಿಮಾನಿ ಸ್ನೇಹಿತರು, ಮನೆಯಿಂದ ಬಿಸಿಬಿಸಿ, ರುಚಿರುಚಿ ಊಟದ ಡಬ್ಬಿ ತಂದು ಕೊಡುವ ಔತಣ ಪ್ರಿಯರು, ಗಿಜುಗುಡುವ ಒಡ್ಡೋಲಗದಲ್ಲಿ ಮಿಂಚಿತ್ತಾರೆಯೇ ಹೊರತು ಸಂಕಟ ಮತ್ತು ಮುಗ್ಗಟ್ಟುಗಳ ಕಾಲದಲ್ಲಿ ಮಾತ್ರ ಅವರು ಕಾಣಿಸುವುದಿಲ್ಲ. ಸಂಕಟಗಳ ಕಾಲದಲ್ಲಿ ಅಧಿಕಾರ, ಕೀರ್ತಿ, ಸೆಲೆಬ್ರೇಷನ್ನು ಇದ್ಯಾವುದೂ ಇಲ್ಲದ ಕಾಲದಲ್ಲೂ ಜೊತೆಯಲ್ಲಿ ಹೆಜ್ಜೆ ಹಾಕುವ ಬೆರಳೆಣಿಕೆಯ ಆತ್ಮೀಯರನ್ನು ಬಿಟ್ಟರೆ, ಆಗಲೂ ಅವರು ಒಬ್ಬಂಟಿಗರೆ!



> **ಸಂಕಟ ಮತ್ತು ಮುಗ್ಗಟ್ಟುಗಳು ಹಣಕಾಸಿನ ಕಾರಣಕ್ಕೇನೆ ಆಗುತ್ತವೆ ಎಂದೇನೂ ಇಲ್ಲ. ಮಾರಣಾಂತಿಕ ಖಾಯಿಲೆಗಳು, ಬಾಧಿಸಲು ಶುರುವಾಗಿ ಬಿಟ್ಟರೆ ಯಾರಿಗೂ ಹೇಳಿಕೊಳ್ಳುವ ಮನಸ್ಸಿಲ್ಲದೆ ಮನುಷ್ಯ ತಾನೇ ಎಲ್ಲರಿಂದಲೂ ದೂರವಾಗಿ ಬಿಡುತ್ತಾನೆ. ಸಂಕಟದ ಕಾಲಕ್ಕೆ ತಾನೇ ಒಂಟಿಯಾಗಿಬಿಡುತ್ತಾನೆ. ಕಷ್ಟಪಟ್ಟು ಗಳಿಸಿದ ಹಣ, ಹೆಸರು, ಕೀರ್ತಿಗಳು, ಸ್ಕ್ಯಾಂಡಲ್‌ಗಳಿಗೆ ಸಿಲುಕಿ ಕಣ್ಣೆದುರೇ ಕಾಲಕಸವಾಗಿ ಹೋದರೆ, ಸೆಲೆಬ್ರಿಟಿಗಳು ಕೂಡ ಆಗ ಒಂಟಿಯಾಗಿ ಬಿಡುತ್ತಾರೆ. ಚುನಾವಣೆಗಳು, ಚಿತಾವಣೆಗಳು, ಸೋಲುಗಳು, ಹಳಿ ತಪ್ಪಿದ ದಾಂಪತ್ಯಗಳು, ಮಣ್ಣು ಮುಕ್ಕಿದ ಸೋದರ ಸಂಬಂಧಗಳು, ಇಂಚಿಂಚೇ ಕೊಲ್ಲುವ ಮಾನಸಿಕ ಖಾಯಿಲೆಗಳು, ಹೀಗೆ ಯಾವ್ಯಾವುದೋ ಕಾರಣಕ್ಕೆ ಸಂಕಟಗಳಿಗೆ ಸಿಕ್ಕಿಕೊಳ್ಳುವ ಮನಸ್ಸು ಅನಿವಾರ್ಯವಾಗಿ ಒಂಟಿತನ ಕೇಳುತ್ತದೆ.**

ಡಿ.ದೇವರಾಜ ಅರಸರು ರಾಜಕಾರಣದ ಮೊಗಸಾಲೆಯಲ್ಲಿ ಅಧಿಕಾರ ಕಳೆದುಕೊಂಡು ಅತಂತ್ರವಾಗಿ ಹೋದಾಗ ಇವರೆಡೆಗೆ ಆಸೆ ಕಣ್ಣುಗಳಿಂದ ಓಡಿಬಂದ ಎರಡನೇ ಪಂಕ್ತಿಯ ನಾಯಕರುಗಳಿಗೆ ಇಂಥಾ ಎತ್ತರದ ವ್ಯಕ್ತಿತ್ವ ಕೂಡ ಅವರಿಗೆ ಹೇಳಿದ ಕೊನೆಯ ಮಾತೇನು ಗೊತ್ತಾ? ಇನ್ಯಾರೂ ನನ್ನತ್ತ ಬರಬೇಡಿ ಇಂದಿಗೆ ಅರಸರ ಮನೆ ಬಾಗಿಲು ನಿಮಗೆ ಮುಚ್ಚಿತು! ನಿಮ್ಮ ನಿಮ್ಮ ದಾರಿ ನೀವು ನೋಡಿಕೊಳ್ಳಿ! ನನ್ನೊಂದಿಗೆ ಗುರುತಿಸಿಕೊಂಡರೆ ನಿಮಗೆ ಭವಿಷ್ಯವಿಲ್ಲ ಅಂತ ಹೇಳಿ ಬೆಳೆಯುವ ಪೈರಿನ ಬೇರಿಗೆ ನೀರೆರೆಯುವಂತೆ ಅವರ ಹಿಂಬಾಲಕರನ್ನು ಮತ್ತೆ ಜನರತ್ತ ಕಳಿಸಿ ಅವರ ಭವಿಷ್ಯ ರೂಪುಗೊಳ್ಳಲಿ ಎಂದು ಆಶಿಸಿದರಲ್ಲ; ಅರಸರು. ಯಾರೆಷ್ಟೇ ಗೋಗರೆದರೂ ಯಾರನ್ನೂ ಹತ್ತಿರ ಬಿಟ್ಟುಕೊಳ್ಳದೆ ತಮ್ಮ ಶಿಷ್ಯಕೋಟಿಯನ್ನು ಜನರ ಗುಂಪಿನೆಡೆಗೆ ತಳ್ಳಿ ರಾಜಕಾರಣದ ಮೊಗಸಾಲೆಯಲ್ಲಿಯೇ ತಮ್ಮ ಶಿಷ್ಯರನ್ನು ಉಳಿಸುವ ಯೋಚನೆ ಮಾಡುತ್ತಿದ್ದರೆ: ಇತ್ತ ಅರಸರು ಅಧಿಕಾರದಲ್ಲಿದ್ದಷ್ಟೂ ದಿನ ಅವರಿಗೆ ಬಹುಪರಾಕ್ ಹೇಳುತ್ತಿದ್ದವರು, ಅಧಿಕಾರ ಕಳೆದುಕೊಂಡ ಕೂಡಲೇ ಬಣ್ಣ ಬದಲಿಸಿ ಮತ್ತೊಬ್ಬರ ಮನೆಯ ಕದ ತಟ್ಟುತ್ತಿದ್ದವರನ್ನು ನೋಡಿ ಅವರು ವಿಚಲಿತರಾಗಲಿಲ್ಲ. ಇಂಥವರ ನಡುವೆಯೇ ತಮ್ಮ ಹುಡುಗರೂ ಬೆಳೆದುಬಿಡಲಿ ಎಂಬ ಕನಸು ಕಟ್ಟಿಕೊಂಡು ತಾವು ಮಾತ್ರ ಒಬ್ಬಂಟಿಗರಾಗಿಯೇ ಉಳಿದುಹೋದರು! ಸಂಕಟ ಮತ್ತು ಮುಗ್ಗಟ್ಟುಗಳ ಕಾಲದಲ್ಲಿ ಎಲ್ಲರೂ ಒಬ್ಬಂಟಿಗರೆ! ಸಾರ್.

ಎ.ಬಿ.ಸಿ.ಎಲ್. ಎಂಬ ಸಿನಿಮಾ ನಿರ್ಮಾಣ ಸಂಸ್ಥೆ ಕಟ್ಟಿದ ಅಮಿತಾಬ್ ಬಚ್ಚನ್ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ದಿನಗಳಲ್ಲಿ ಸಂಕಟ ಮತ್ತು ಮುಗ್ಗಟ್ಟಿನ ಕಾರಣದಿಂದ ಅವರು ಒಬ್ಬಂಟಿಯಾಗಿ ಹೋಗಿದ್ದರು. 'ಕೌನ್ ಬನೇಗ ಕರೋಡ್ ಪತಿ' ಎಂಬ ಕಿರುತೆರೆಯ ಕಾರ್ಯಕ್ರಮಕ್ಕೆ ಆ್ಯಂಕರ್ ಆಗಿ ಅವರು ಸಹಿ ಹಾಕಬೇಕಾಯಿತು. ಅಂದು ಕೌನ್ ಬನೇಗ ಕರೋಡ್ ಪತಿ ಕೈಹಿಡಿಯದೇ ಹೋಗಿದ್ದರೆ ಅಮಿತಾಬ್ ಇವತ್ತು ನೇಪಥ್ಯದಿಂದ ಮತ್ತೆ ವಸಂತಕ್ಕೆ ಬರಲು ಸಾಧ್ಯವೇ ಇಲ್ಲದಂಥ ಸ್ಥಿತಿ ನಿರ್ಮಾಣವಾಗಿ ಹೋಗಿರುತ್ತಿತ್ತು.

ಚಾಣಾಕ್ಷ ಮಾತುಗಾರ ದಿ.ರಾಮಕೃಷ್ಣ ಹೆಗಡೆಯವರು ತಮ್ಮ ಕಡೆಯ ದಿನಗಳಲ್ಲಿ ಮನೆಯವರು ಹೇಳಿಕೊಟ್ಟ ಮಾತುಗಳನ್ನಷ್ಟೆ ಹೇಳುವ ಅರಗಿಣಿಯಂತಾಗಿ ಹೋಗಿದ್ದರು. ಅಸಂಖ್ಯಾತ ರಾಜಕಾರಣಿಗಳ ಹೃದಯದಲ್ಲಿ ಈಗಲೂ ಗುರುಸ್ಥಾನದಲ್ಲೇ ಇರುವ ಹೆಗಡೆಯವರು ಸಂಕಟ ಮತ್ತು ಮುಗ್ಗಟ್ಟುಗಳ ಕಾಲದಲ್ಲಿ ಒಬ್ಬಂಟಿಗರಾಗಿ ಹೋದರು.

ಸಂಕಟ ಮತ್ತು ಮುಗ್ಗಟ್ಟುಗಳು ಹಣಕಾಸಿನ ಕಾರಣಕ್ಕೇನೆ ಆಗುತ್ತವೆ ಎಂದೇನೂ ಇಲ್ಲ. ಮಾರಣಾಂತಿಕ ಖಾಯಿಲೆಗಳು, ಬಾಧಿಸಲು ಶುರುವಾಗಿಬಿಟ್ಟರೆ ಯಾರಿಗೂ ಹೇಳಿಕೊಳ್ಳುವ ಮನಸ್ಸಿಲ್ಲದೆ ಮನುಷ್ಯ ತಾನೇ ಎಲ್ಲರಿಂದಲೂ ದೂರವಾಗಿ ಬಿಡುತ್ತಾನೆ. ಸಂಕಟದ ಕಾಲಕ್ಕೆ ತಾನೇ ಒಂಟಿಯಾಗಿ ಬಿಡುತ್ತಾನೆ. ಕಷ್ಟಪಟ್ಟು ಗಳಿಸಿದ ಹಣ, ಹೆಸರು, ಕೀರ್ತಿಗಳು, ಸ್ಕ್ಯಾಂಡಲ್‌ಗಳಿಗೆ ಸಿಲುಕಿ ಕಣ್ಣೆದುರೇ ಕಾಲಕಸವಾಗಿ ಹೋದರೆ, ಸೆಲೆಬ್ರಿಟಿಗಳು ಕೂಡ ಆಗ ಒಂಟಿಯಾಗಿ ಬಿಡುತ್ತಾರೆ. ಚುನಾವಣೆಗಳು, ಚಿತಾವಣೆಗಳು, ಸೋಲುಗಳು, ಹಳಿ ತಪ್ಪಿದ ದಾಂಪತ್ಯಗಳು, ಮಣ್ಣು ಮುಕ್ಕಿದ ಸೋದರ ಸಂಬಂಧಗಳು, ಇಂಚಿಂಚೇ ಕೊಲ್ಲುವ ಮಾನಸಿಕ ಖಾಯಿಲೆಗಳು, ಹೀಗೆ ಯಾವ್ಯಾವುದೋ ಕಾರಣಕ್ಕೆ ಸಂಕಟಗಳಿಗೆ ಸಿಕ್ಕಿಕೊಳ್ಳುವ ಮನಸ್ಸು ಅನಿವಾರ್ಯವಾಗಿ ಒಂಟಿತನವನ್ನು ಕೇಳುತ್ತದೆ. ಆದರೆ ಇಲ್ಲಿ ಒಂಟಿತನದ ಸೆಲೆಬ್ರೇಷನ್ನುಗಳು ಪ್ರೈವೆಸಿಯ ಖಾಸಗಿ ಸುಖ ಕೊಡುವುದಿಲ್ಲ. ಬದಲಿಗೆ ಬದುಕಿಗೆ ಅಭದ್ರ ಸನ್ನಿವೇಶಗಳನ್ನು ಸೃಷ್ಟಿಸಿ ವೈಬ್ರೇಷನ್ನಿನ ಕರಾಳ ದರ್ಶನ ಮಾಡಿಸುತ್ತವೆ.

ಅಂದರೆ ಯಾರೆಲ್ಲಾ ಎಷ್ಟೆಲ್ಲಾ ಕಷ್ಟಪಟ್ಟು ಕಟ್ಟಿಕೊಂಡ ತಮ್ಮ ತಮ್ಮ ಒಡೆತನದ ಸಾಮ್ರಾಜ್ಯಗಳ ಸಾರಥ್ಯವನ್ನು ವಯಸ್ಸಿನ ಕಾರಣಕ್ಕೋ, ಮಕ್ಕಳೆಂಬ ಉತ್ಸಾಹದ ಕಾರಣಕ್ಕೋ ಅವರ ಕೈಗಿಟ್ಟು ಸುಮ್ಮನೇ ಕೂರುವ ದಿನಗಳಲ್ಲಿ ಮಕ್ಕಳಿದ್ದೂ, ಆಸ್ತಿಯಿದ್ದೂ, ಹೆಂಡತಿಯಿದ್ದೂ, ಸ್ನೇಹಿತರಿದ್ದೂ, ಖರ್ಚಿಗೆ ದುಡ್ಡಿದ್ದರೂ ಸಹ ಈ ಎಲ್ಲ ಸುಖಗಳ ನಡುವೆ Inactive ಮಾಲೀಕತ್ವವೊಂದು ನಿಮ್ಮ ಕೈಹಿಡಿದುಬಿಟ್ಟರೆ ಎಲ್ಲಾ ಇದ್ದೂ ಎಲ್ಲರೂ ಇದ್ದೂ ಒಬ್ಬಂಟಿಗರೇ ಅನಿಸಿಬಿಡುತ್ತದೆ. ಇಲ್ಲಿ ಮತ್ತದೇ ಒಂಟಿತನ ಮತ್ತು ಅದರ ವೈಬ್ರೇಷನ್ನು ಬಾಧಿಸುತ್ತದೆ, ಆಗ ಏಕಾಂತವೆಂಬುದು ಸುಂದರವಾದ ಸೆಲೆಬ್ರೇಷನ್ ಅಲ್ಲ; ಅದು ದುಮ್ಮಾನ ಸಹಿತವಾದ ವೈಬ್ರೇಷನ್ನು. ಮೊಹಮ್ಮದ್ ರಫೀ ಹಾಡಿದ ಹಾಡು ನೆನಪಿದೆಯೇ ನಿಮಗೆ "ನಗುವಾಗ ಎಲ್ಲ ನೆಂಟರು ಅಳುವಾಗ ಯಾರೂ ಇಲ್ಲ!" ಸಂಕಟ ಮತ್ತು ಮುಗ್ಗಟ್ಟುಗಳ ಕಾಲದಲ್ಲಿ ಎಲ್ಲರೂ ಒಬ್ಬಂಟಿಗರೆ, ಏನಂತೀರಿ?

ಮೈಸೂರಲ್ಲಿ ಪ್ರಗತಿಪರ ರೈತರಿಗೆ ಸನ್ಮಾನ



ಮೈಸೂರು,ಏ.10(ಎಂಕೆ)–ಮೈಸೂರಿನ ಜೆ.ಪಿ.ನಗರದ ಸಿದ್ದಲಿಂಗೇಶ್ವರ ಬಡಾವಣೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಸಹಯೋಗದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಪ್ರಗತಿ ಪರ ರೈತರಾದ ಚುಂಚರಾಯನಹುಂಡಿ ಶಿವಶಂಕರ್, ಮೈಸೂರಿನ ಸುಶೀಲಮ್ಮ, ವಾಟಾಳ್ ಮೂರ್ತಿ, ಮೈಸೂರಿನ ಶಿವಪ್ರಕಾಶ್ ಅವರನ್ನು ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಮನುಷ್ಯನಿಗಿಂದು ಎಲ್ಲವೂ ಸಿಗುತ್ತಿದೆ. ಆದರೆ ಉತ್ತಮ ಆರೋಗ್ಯ, ನೆಮ್ಮದಿ ಸಿಗುತ್ತಿಲ್ಲ. ಕಾರಣ ಪೋಷಕಾಂಶವುಳ್ಳ ಆಹಾರ ಪದಾರ್ಥಗಳ ಕೊರತೆ ಮುಖ್ಯ ಕಾರಣವಾಗಿದೆ ಎಂದರು.

ದೇಶದಲ್ಲಿ ಸೈನಿಕರ ಪಾತ್ರ ಎಷ್ಟು ಮುಖ್ಯವೋ ರೈತರ ಪಾತ್ರವೂ ಅಷ್ಟೇ ಇದೆ. ಒಂದೆಡೆ ಔಷಧಿ ಮತ್ತು ರಸಗೊಬ್ಬರಗಳ ಬೆಲೆ ಗಗನಕ್ಕೇರುತ್ತಿವೆ. ಖರ್ಚು ಮಾಡಿ ಬೆಳೆ ಬೆಳೆದರೂ ಸರಿಯಾದ ಬೆಲೆ ಸಿಗದೆ, ಮಾಡಿದ ಸಾಲ ತೀರಿಸಲಾಗದೆ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದೆಲ್ಲದರ ನಡುವೆಯೂ ಸ್ವಾವಲಂಬಿಗಳಾಗಿ ಜೀವನ ನಡೆಸುತ್ತಿರುವ ರೈತರನ್ನು ಗುರ್ತಿಸಿ ಅಭಿನಂದಿಸುತ್ತಿರುವುದು ಶ್ಲಾಘನೀಯ ಎಂದರು. ವೇಳೆ ನಿವೃತ್ತ ಪ್ರೊ.ಚಿಂತಾಮಣಿ, ಮಾಜಿ ಉಪ ಮೇಯರ್ ಓಂಕಾರ್ ಪ್ರಸಾದ್, ಜಿಪಂ ಮಾಜಿ ಅಧ್ಯಕ್ಷ ಕಾ.ಪು.ಸಿದ್ದವೀರಪ್ಪ, ಪ್ರಗತಿ ಪರ ರೈತ ಮುಖಂಡರಾದ ಮಾದಪ್ಪ, ಕೆಂಡಗಣ್ಣಸ್ವಾಮಿ, ಮಾದಪ್ಪಸ್ವಾಮಿ, ಆರ್.ಡಿ. ವಿಶ್ವನಾಥ್, ಸಿದ್ದೇಶ್ ಪ್ರಸಾದ್ ಇತರರಿದ್ದರು.

ಏ.29ರಂದು ನವೋದಯ ಪರೀಕ್ಷೆ

ಮೈಸೂರು,ಏ.10– 2023–24ನೇ ಸಾಲಿನ ಜವಾಹರ್ ನವೋದಯ ವಿದ್ಯಾಲಯಕ್ಕೆ 6ನೇ ತರಗತಿಗೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯು ಏ.29 ರಂದು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖೆಯ www.navodaya.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿ ಕೊಂಡು, ಪ್ರವೇಶ ಪತ್ರದೊಂದಿಗೆ ತಮ್ಮ ಪರೀಕ್ಷಾ ಕೇಂದ್ರಕ್ಕೆ ಹಾಜರಾಗುವಂತೆ ಡಿ.ಎಂ.ಜಿ ಹಳ್ಳಿಯ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು (ದೂರವಾಣಿ ಸಂಖ್ಯೆ 0821–2970040) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹುಲಿ ಸಂರಕ್ಷಿತ ಪ್ರದೇಶಗಳ ಮಹತ್ವ ಸಾರುತ್ತಿದೆ ವಸ್ತುಪ್ರದರ್ಶನ

● 36 ಮಳಿಗೆಗಳಲ್ಲಿ ಅರಣ್ಯ ಸಂಪತ್ತಿನ ಮಾಹಿತಿ ಅನಾವರಣ ● ಹುಲಿ ನಡೆದ ಹಾದಿ; ವನ್ಯಜೀವಿಗಳ ರಕ್ಷಣಾ ಸಂದೇಶ ● ದೇಶದ ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳ ಸಿಬ್ಬಂದಿ ವಿವರಣೆ ● ದರ್ಬಾರ್ ಹಾಲ್‌ನಂತೆ ಕಂಗೊಳಿಸುತ್ತಿರುವ ವಸ್ತುಪ್ರದರ್ಶನ ಆವರಣ





ಇಂದೇ ಕಡೆ ದಿನ...!

ಏ.9ರಿಂದ ಆರಂಭವಾದ ಹುಲಿ ಸಂರಕ್ಷಣೆ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ ಹಾಗೂ ವಸ್ತುಪ್ರದರ್ಶನ ನಾಳೆ (ಏ.11) ಮುಕ್ತಾಯಗೊಳ್ಳಲಿದೆ. ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ವಸ್ತುಪ್ರದರ್ಶನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. 36 ಮಳಿಗೆಗಳಲ್ಲಿಯೂ ವನ್ಯಜೀವಿಗಳ ವೈವಿಧ್ಯತೆ ಕುರಿತು ಮಾಹಿತಿಯುಳ್ಳ ಪುಸ್ತಕಗಳು, ಸಫಾರಿ ಟೀ ಶರ್ಟ್‌ಗಳು, ಕೀ ಬಂಚ್ ಸೇರಿದಂತೆ ಹತ್ತು-ಹಲವು ವಸ್ತುಗಳ ಖರೀದಿಗೆ ಅವಕಾಶವಿದೆ.

ಮೈಸೂರು,ಏ.10(ಎಂಟಿವೈ, ಎಂಕೆ)- ರಾಷ್ಟ್ರೀಯ ಪ್ರಾಣಿ 'ಹುಲಿ' ಸಂತತಿ ಸಂರಕ್ಷಣೆ ಜೊತೆಗೆ ವನ್ಯಜೀವಿಗಳ ವೈವಿಧ್ಯತೆ ಕುರಿತು ತಿಳಿಯುವ ಆಸಕ್ತಿ ಇದ್ದರೆ ಇಂದೇ 'ಹುಲಿ ಸಂರಕ್ಷಣೆ ಕುರಿತ ಅಂತರಾಷ್ಟ್ರೀಯ ಸಮ್ಮೇಳನ ಹಾಗೂ ವಸ್ತುಪ್ರದರ್ಶನ'ಕ್ಕೆ ಭೇಟಿ ನೀಡಿ...!

ಮೈಸೂರು ಮುಕ್ತ ವಿವಿ ಆವರಣದಲ್ಲಿ 'ಹುಲಿ ಸಂರಕ್ಷಣಾ ಯೋಜನೆ 50 ವರ್ಷ ಪೂರ್ಣಗೊಂಡ' ಹಿನ್ನೆಲೆಯಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ವತಿಯಿಂದ ಆಯೋಜಿಸಿರುವ 'ಮೊದಲ ಭಾರತೀಯ ಸಂರಕ್ಷಣಾ ಸಮ್ಮೇಳನ ಹಾಗೂ ವಸ್ತುಪ್ರದರ್ಶನ'ದಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳಲ್ಲಾದ ಬದಲಾವಣೆ, ವನ್ಯಜೀವಿಗಳ ವೈವಿಧ್ಯತೆ ಕುರಿತು ತಿಳಿದುಕೊಳ್ಳಬಹುದಾಗಿದೆ.

ಮೂರು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನ ಹಾಗೂ ವಸ್ತುಪ್ರದರ್ಶನಕ್ಕೆ ಸಾವಿರಾರು ಪ್ರಾಣಿ ಪ್ರಿಯರು ಭೇಟಿ ನೀಡಿದ್ದು, ಅಗತ್ಯ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ಇಷ್ಟದ ವಸ್ತುಗಳನ್ನು ಖರೀದಿಸುತ್ತಿದ್ದಾರೆ. ಬಂಡೀಪುರ, ನಾಗರ ಹೊಳೆ, ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶ, ಕಾಳಿ ಹುಲಿ ಸಂರಕ್ಷಿತ ಪ್ರದೇಶ ಸೇರಿದಂತೆ ದೇಶದ ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳ ಮಾಹಿತಿ ನೀಡುವ ಒಟ್ಟು 36 ಮಳಿಗೆಗಳನ್ನು ನಿರ್ಮಿಸಿದ್ದು, ಚಿರತೆ, ಹುಲಿ, ಗ್ರೇಟ್ ಇಂಡಿಯನ್ ಬಸ್ಟರ್ಡ್ ಸೇರಿದಂತೆ ಸೇರಿದಂತೆ ಪ್ರಬೇಧದ ಪ್ರಾಣಿಗಳು ಹಾಗೂ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕೈಗೊಂಡಿರುವ ಕ್ರಮಗಳ ಕುರಿತ ವಿವರಗಳಿರುವ ಪ್ರಾತ್ಯಕ್ಷಿತೆ ಗಮನ ಸೆಳೆಯುತ್ತಿದೆ.

ನಾಗರಹೊಳೆ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಕಾರ್ಬೆಟ್ ಟೈಗರ್ ರಿಸರ್ವ್, ಸಾತ್ಪುರ ಟೈಗರ್ ರಿಸರ್ವ್‌ನ ಮಳಿಗೆಗಳಲ್ಲಿ ಪ್ರಾಣಿಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮಗಳು ಸೇರಿದಂತೆ ಇನ್ನಿತರ ಯಶಸ್ವಿ ಪ್ರಯೋಗಗಳ ಕುರಿತು ಮಾಹಿತಿ ಫಲಕಗಳನ್ನು ಅಳವಡಿಸಲಾಗಿದೆ. ಅರಣ್ಯ ಇಲಾಖೆಯಲ್ಲಿ ಇತ್ತೀಚೆಗೆ ಬಳಸಲಾಗುತ್ತಿರುವ ಹೊಸ ತಾಂತ್ರಿಕ ಪರಿಕರಗಳು, ಪ್ರಾಣಿಗಳ ಸಂರಕ್ಷಣೆಗಾಗಿ ಹಾಗೂ ಬೆಂಕಿ ನಂದಿಸಲು ಬಳಸುವ ಬಳಸುವ ಉಪಕರಣಗಳು, ವಿದ್ಯುತ್ ಬೇಲಿಗಳಿರುವಲ್ಲಿ ಪ್ರಾಣಿಗಳು ಬಾರದಂತೆ ಬೆಳಕು ಚೆಲ್ಲುವ ಸೋಲಾರ್ ದೀಪಗಳು, ವಿವಿಧ ಬಗೆಯ ಡ್ರೋಣ್ ಕ್ಯಾಮೆರಾಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕಿಡಲಾಗಿದೆ.

ಹಾಗೆಯೇ ವನ್ಯಜೀವಿಗಳ ದೂರದಿಂದಲೇ ಕಣ್ತುಂಬಿಕೊಳ್ಳುವ ಅತ್ಯಾಧುನಿಕ ಗುಣಮಟ್ಟದ ಬೈನಾಕೂಲರ್, ಕ್ಯಾಮರಾ, ಹುಲಿ ಟ್ರ್ಯಾಕರ್ ಉಪಕರಣಗಳೂ ಲಭ್ಯವಿವೆ.

ಬೇಸಿಗೆ ಶಿಬಿರ: ಕೇರಳ ರಾಜ್ಯದ ಪೆರಿಯಾರ್ ಟೈಗರ್ ರಿಸರ್ವ್‌ನಲ್ಲಿರುವ ಜೀವವೈವಿಧ್ಯತೆ, ಅರಣ್ಯ, ನೀರಿನ ಮೂಲಗಳು ಪ್ರಾಣಿ ಸಂಕುಲಗಳ ಜೊತೆಗೆ ಕರ್ನಾಟಕದ ಕಾಳಿ ಟೈಗರ್ ರಿಸರ್ವ್ ವತಿಯಿಂದ 10ರಿಂದ 15 ವರ್ಷದ ಮಕ್ಕಳಿಗೆ ಅರಣ್ಯ, ಪ್ರಾಣಿಗಳ ಸಂರಕ್ಷಣೆ, ಟ್ರೆಕ್ಕಿಂಗ್, ಕ್ಷೇತ್ರ ಸಂಶೋಧನೆ, ಹಾಗೂ ಫೋಟೋಗ್ರಫಿ ಕುರಿತು ಆಯೋಜಿಸಿರುವ ಬೇಸಿಗೆ ಶಿಬಿರ ಆಯೋಜಿಸಿರುವ ಎಲ್ಲರ ಸೆಳೆಯುತ್ತಿದೆ.

ದರ್ಬಾರ್ ಹಾಲ್ ವಿನ್ಯಾಸ: ಹುಲಿ ಸಂರಕ್ಷಿತ ಪ್ರದೇಶಗಳ 50ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ದೇಶದ ವಿವಿಧ ರಾಜ್ಯ ಸೇರಿದಂತೆ ಹುಲಿ ಸಂತತಿ ಇರುವ ಹಲವು ರಾಷ್ಟ್ರಗಳಿಂದಲೂ ಪ್ರತಿನಿಧಿಗಳು ಆಗಮಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಸ್ತುಪ್ರದರ್ಶನದಲ್ಲಿ ಮೈಸೂರು ಅರಮನೆ ದರ್ಬಾರ್ ಹಾಲ್‌ನಂತೆ ವಿನ್ಯಾಸ ಮಾಡಲಾಗಿದ್ದು, ನೋಡುಗರ ಕಣ್ಮನ ಸೆಳೆಯುತ್ತಿದೆ. ಈ ವಿನ್ಯಾಸದ ಮಳಿಗೆಗಳಲ್ಲಿ ಕರ್ನಾಟಕದ ಅಭಯಾರಣ್ಯಗಳ ಮಳಿಗೆ ಆಕರ್ಷಿಸುತ್ತಿದೆ. ಅಲ್ಲದೆ ಮೈಸೂರು ರೇಷ್ಮೆ ಸೀರೆ, ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ ವಿವಿಧ ಉತ್ಪನ್ನಗಳನ್ನು ಮಾರಾಟಕ್ಕಿಡಲಾಗಿದೆ.

ವನ್ಯಜೀವಿ ಸಂರಕ್ಷಣೆ ಕುರಿತು ಉಪನ್ಯಾಸ, ಸಂವಾದ

ಮೈಸೂರು,ಏ.10(ಎಂಕೆ)-'ಹುಲಿ ಸಂರಕ್ಷಣೆ ಕುರಿತ ಅಂತರಾಷ್ಟ್ರೀಯ ಸಮ್ಮೇಳನ'ದಲ್ಲಿ ವನ್ಯಜೀವಿ ಸಂರಕ್ಷಣೆ, ಸಂವೃದ್ಧಿ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಗಂಭೀರ ಚರ್ಚೆಗಳು ನಡೆದವು. ಮುಕ್ತ ವಿವಿಯ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣದಲ್ಲಿ ದಿನವಿಡೀ ನಡೆದ ಸೆಮಿನಾರ್ ಹಾಗೂ ಸಂವಾದಗಳಲ್ಲಿ ಮಾನವ ಹಾಗೂ ವನ್ಯಜೀವಿಗಳ ನಡುವಿನ ಸಂಘರ್ಷ ನಿಯಂತ್ರಣಕ್ಕೆ ಅಗತ್ಯ ಸಲಹೆಗಳ ಕುರಿತು ಚರ್ಚಿಸಲಾಯಿತು. ಹುಲಿ ಸಂರಕ್ಷಣಾ ಪ್ರದೇಶಗಳಲ್ಲಿ ಆಗಬೇಕಾಗಿರುವ ಸಂರಕ್ಷಣಾ ಕಾರ್ಯಚಟುವಟಿಕೆಗಳು, ಮುಂಜಾಗ್ರತಾ ಕ್ರಮಗಳು ಹಾಗೂ ಹುಲಿ ಸಂತತಿ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಯಿತು.

ವಿಜ್ಞಾನಿಗಳು, ತಜ್ಞರು, ತಂತ್ರಜ್ಞರು ಭಾಗಿ: ಹುಲಿ ಸಂರಕ್ಷಣೆ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ 30ಕ್ಕೂ ಹೆಚ್ಚು ವಿಜ್ಞಾನಿಗಳು, ವನ್ಯಜೀವಿ ತಜ್ಞರು, ತಂತ್ರಜ್ಞರು ಹಾಗೂ ಹವ್ಯಾಸಿ ಛಾಯಾಚಿತ್ರಗಾರರು ಭಾಗವಹಿಸಿ ವನ್ಯಜೀವಿಗಳ ಸಂರಕ್ಷಣೆಗೆ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ತಿಳಿಸಿದರು. ನದಿ ಸಂರಕ್ಷಣೆ, ದೇಶಕ್ಕೆ ಮತ್ತಷ್ಟು ಚಿರತೆಗಳ ತರುವುದು, ಹಸಿರು ಪ್ರದೇಶ ನಿರ್ಮಾಣ, ಕಾಡಿನ ಪರಿಸರ ರಕ್ಷಣೆ, ಅಗ್ನಿ ಅವಘಡ ನಿಯಂತ್ರಣ ಸೇರಿದಂತೆ ಹತ್ತಾರು ಮಹತ್ವದ ವಿಚಾರಗಳ ಕುರಿತು ಉಪನ್ಯಾಸ ನೀಡಲಾಯಿತು.





ಲಂಟಾನದಿಂದ ಗೃಹೋಪಯೋಗಿ ವಸ್ತುಗಳು...

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇದಲ್ಲಿ ವ್ಯಾಪಕವಾಗಿರುವ ಲಂಟಾನ ಕಳೆ ಗಿಡದಿಂದ ಗೃಹೋಪಯೋಗಿ ಮತ್ತು ಅಲಂಕಾರಿಕ ವಸ್ತುಗಳನ್ನು ಸೋಲಿಗ ಸಮುದಾಯದವರು ತಯಾರಿಸಿದ್ದು, ಅವುಗಳ ಬಗ್ಗೆಯೂ ಮಾಹಿತಿ ನೀಡಲಾಗುತ್ತಿದೆ. ಬಿಆರ್‌ಟಿ ಮಳಿಗೆಯಲ್ಲಿ ಅರಣ್ಯ ಸಿಬ್ಬಂದಿಗಳು ಜನರಿಗೆ ಲಂಟಾನ ಕಳೆಗಿಡದಿಂದ ತಯಾರಿಸುತ್ತಿರುವ ಪೀಠೋಪಕರಣಗಳ ಬಗ್ಗೆ ಮಾಹಿತಿ ನೀಡುತ್ತಿದ್ದು, ಪರಿಸರ ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ. ಕಳೆ ಗಿಡ ಲಂಟಾನಾದಿಂದ ಒಂಟಿ ಸಲಗ, ಕುರ್ಚಿ, ಟಿಪಾಯಿ, ಕಸದ ಬುಟ್ಟಿ, ಪೆನ್ ಬ್ಯಾಂಡ್, ಫ್ಲವರ್ ವಿನ್ಯಾಸ ಮಾಡಿ ಪ್ರದರ್ಶಕ್ಕಿಡಲಾಗಿದೆ.

ಚಾ.ನಗರದಲ್ಲಿ 41.56 ಲಕ್ಷ ರೂ. ಮೌಲ್ಯದ ಅಕ್ರಮ ಮದ್ಯ ವಶ



ಚಾಮರಾಜನಗರ, ಏ.10- ಕಂಟ್ರೋಲಿಂಗ್ ಅಬಕಾರಿ ಭದ್ರತಾ ಚೀಟಿಗಳು ಇಲ್ಲದಿರುವುದು ಕಂಡುಬಂದ ಹಿನ್ನೆಲೆಯಲ್ಲಿ 39,56,468 ರೂ ಮೌಲ್ಯದ 5481 ಲೀಟರ್ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಚಾಮರಾಜನಗರದಲ್ಲಿ ವಶಕ್ಕೆ ಪಡೆದುಕೊಂಡಿದ್ದಾರೆ. ಅಲ್ಲದೆ, ಮತ್ತೊಂದು ಪ್ರಕರಣದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 2.03 ಲಕ್ಷ ರೂ. ಮೌಲ್ಯದ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ ಒಂದೇ ದಿನ 41.56 ಲಕ್ಷ ರೂ. ಮೌಲ್ಯದ ಮದ್ಯ ಜಪ್ತಿ ಮಾಡಲಾಗಿದೆ.

ಕಳೆದ ಶನಿವಾರ (ಏ.8) ಸಂಜೆ 5.15 ಗಂಟೆ ಸಮಯದಲ್ಲಿ ಚಾಮರಾಜನಗರದ ಕೆ.ಎಸ್.ಬಿ.ಸಿ.ಎಲ್ ಡಿಪೋಗೆ ಚಿಕ್ಕಬಳ್ಳಾಪುರದ ಬ್ಲೂ ಏಷಿಯನ್ ಬ್ರೆವರೇಜಸ್ ಲಿಮಿಟೆಡ್‌ನಿಂದ ಸರಬರಾಜಾದ 630 ಪೆಟ್ಟಿಗೆಗಳಲ್ಲಿ 5 ಪೆಟ್ಟಿಗೆಗಳಲ್ಲಿ ಇನ್ನರ್ ಕಾರ್ಟನ್ ಬಾಕ್ಸ್‌ನ ಕಂಟ್ರೋಲಿಂಗ್ ಅಬಕಾರಿ ಭದ್ರತಾ ಚೀಟಿಗಳು ಇಲ್ಲದೇ ಇರುವುದು ಕಂಡುಬಂತು ಈ ಹಿನ್ನೆಲೆಯಲ್ಲಿ ಒಟ್ಟಾರೆ 5481 ಲೀಟರ್ ಮದ್ಯವನ್ನು ವಶಕ್ಕೆ ಪಡೆದು ಡಿಸ್ಟಿಲರಿ ಸನ್ನದುದಾರರು ಹಾಗೂ ಚಾಲಕರ ಮೇಲೆ ಮೊಕದ್ದಮೆ ದಾಖಲಿಸಲಾಗಿದೆ.

ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತರ (ಜಾರಿ ಮತ್ತು ತನಿಖೆ) ನಿರ್ದೇಶನದ ಮೇರೆಗೆ ಕಾರ್ಯಾಚರಣೆ ನಡೆಸಲಾಯಿತು. ಅಬಕಾರಿ ಉಪ ಆಯುಕ್ತ ಆರ್.ನಾಗಶಯನ, ಅಬಕಾರಿ ಉಪ ಅಧೀಕ್ಷಕ ಎಂ.ಡಿ.ಮೋಹನ್‌ಕುಮಾರ್, ಅಬಕಾರಿ ನಿರೀಕ್ಷಕಿ ಮೀನಾ, ಕೆಎಸ್‌ಬಿಸಿಎಲ್ ಡಿಪೋ ವ್ಯವಸ್ಥಾಪಕ ಬಸವರಾಜು, ಅಬಕಾರಿ ನಿರೀಕ್ಷಕ ಗುರುನಾಥಶೆಟ್ಟಿ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಮದ್ಯ, ವಾಹನ ವಶ: ಚಾಮರಾಜನಗರ ವಲಯದ ಬಿಸಲವಾಡಿ ಗ್ರಾಮ ವ್ಯಾಪ್ತಿ ರಸ್ತೆಗಾವಲು ನಡೆಸುತ್ತಿದ ವೇಳೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 9 ಲೀಟರ್ ಮದ್ಯವನ್ನು ವಶಪಡಿಸಿಕೊಂಡಿರುವ ಅಬಕಾರಿ ಇಲಾಖೆ ಅಧಿಕಾರಿಗಳು ಸಾಗಾಣೆ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿದ್ದಾರೆ.

ಭಾನುವಾರ ರಾತ್ರಿ 9 ಗಂಟೆ ಸಮಯದಲ್ಲಿ ಈರೋಡ್ ಜಿಲ್ಲೆ ಸತ್ತಿ ತಾಲೂಕಿನ ಕಾಮಯನಪುರದ ವೆಂಕಟರಾಜು ಎಂಬ ವ್ಯಕ್ತಿಯು ಟಾಟಾ ಏಸ್ ವಾಹನದಲ್ಲಿ 9 ಲೀಟರ್ ಮದ್ಯವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದು ಕಂಡುಬಂತು.

ಆರೋಪಿಯನ್ನು ದಸ್ತಗಿರಿ ಮಾಡಿ ಮದ್ಯವನ್ನು ವಶಪಡಿಸಿಕೊಂಡು ಆರೋಪಿ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಮದ್ಯ ಮತ್ತು ವಾಹನದ ಒಟ್ಟು ಮೌಲ್ಯ 2,03,512 ರೂ.ಗಳಾಗಿದೆ. ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ), ಚಾಮರಾಜನಗರ ಜಿಲ್ಲಾ ಅಬಕಾರಿ ಉಪ ಆಯುಕ್ತರ ಮಾರ್ಗದರ್ಶನದಲ್ಲಿ ಚಾಮರಾಜನಗರ ವಲಯದ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದ ವೇಳೆ ಪ್ರಕರಣ ಕಂಡುಬಂದಿದೆ ಎಂದು ಅಬಕಾರಿ ಇಲಾಖೆ ಪ್ರಕಟಣೆ ತಿಳಿಸಿದೆ.

ಮೋದಿ ಇಡೀ ವಿಶ್ವಕ್ಕೆ ಹುಲಿ



ಶಿವಮೊಗ್ಗ: ಬಂಡೀಪುರದಲ್ಲಿ ನರೇಂದ್ರ ಮೋದಿ ಅವರಿಗೆ ಹುಲಿ ಕಾಣಲಿಲ್ಲ ಎಂದು ವಿಪಕ್ಷಗಳು ಟೀಕಿಸುತ್ತಿವೆ. ಆದರೆ ಮೋದಿ ಇಡೀ ವಿಶ್ವಕ್ಕೆ ಹುಲಿ. ಅಂತಹ ಹುಲಿಯ ನೇತೃತ್ವದಲ್ಲಿ ದೇಶ ಸಾಗುತ್ತಿರುವುದು ನಮ್ಮ ಪುಣ್ಯ ಎಂದು ಮಾಜಿ ಸಚಿವ ಕೆ.ಎಸ್ ಈಶ್ವರಪ್ಪ ಹೇಳಿದ್ದಾರೆ.

ಟೀಕೆ ಮಾಡುವುದು ಬಿಟ್ಟರೆ ಕಾಂಗ್ರೆಸ್‌ನವರಿಗೆ ಏನೂ ಗೊತ್ತಿಲ್ಲ. ಹುಲಿ ಕಾಣಲಿಲ್ಲ ಎನ್ನುವುದಕ್ಕೂ ಟೀಕೆ, ಅಕಸ್ಮಾತ್ ಒಂದು ಹುಲಿ ಕಂಡಿದ್ದರೆ ಒಂದೇ ಕಾಣಿಸಿದೆ ಎಂದು ಟೀಕೆ ಮಾಡುತ್ತಿದ್ದರು. ಟೀಕೆಯಲ್ಲೇ ಅವರ ಜೀವನ ಕಳೆಯುತ್ತಿದ್ದಾರೆ ಎಂದು ಕುಟುಕಿದ್ದಾರೆ. ರಾಜ್ಯಕ್ಕೆ ಈ ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿ, ಉಕ್ಕಿನ ಮನುಷ್ಯ ಗೃಹ ಮಂತ್ರಿ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಬಂದು ಹೋಗುತ್ತಿದ್ದಾರೆ. ರಾಷ್ಟ್ರದ ಬಿಜೆಪಿ ನಾಯಕರು ಚುನಾವಣೆ ಸಮಯದಲ್ಲಿ ರಾಜ್ಯಕ್ಕೆ ಬರುತ್ತಿರುವುದು ಕಾಂಗ್ರೆಸ್‌ನವರಿಗೆ ಭಯ ತಂದಿದೆ. ರಾಷ್ಟ್ರೀಯ ನಾಯಕರು ಬಂದು ಹೋಗುವುದಕ್ಕೂ ಟೀಕೆ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಯಾವುದೇ ಲಕ್ಷಣಗಳಿಲ್ಲ ಹಾಗಾಗಿ ಟೀಕೆಯಲ್ಲಿ ತೊಡಗಿದ್ದಾರೆ ಎಂದು ಚಾಟಿ ಬೀಸಿದ್ದಾರೆ. ಇವರಿಗೆ ನಾಯಕರೇ ಇಲ್ಲ, ಅವರ ಮುಖ ನೋಡಿದರೆ ವೋಟ್ ಬರುತ್ತದೆಯೇ ಎನ್ನುತ್ತಾರೆ. ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿಯವರ ಮುಖ ತೋರಿಸಿ ಜನರ ಬಳಿ ವೋಟ್ ಕೇಳಲಿ ನಮ್ಮ ಅಭ್ಯಂತರ ಇಲ್ಲ. ಕಾಂಗ್ರೆಸ್ ಪಕ್ಷ ರಾಹುಲ್ ಗಾಂಧಿ ಬರುತ್ತಾರೆ ಎಂದು ಕೋಲಾರ ಕಾರ್ಯಕ್ರಮವನ್ನು 3 ಬಾರಿ ಮುಂದೆ ಹಾಕಿದ್ದಾರೆ. ನಿಮಗೆ ನಾಯಕರುಗಳೇ ಇಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಮುಸ್ಲಿಂ ಬಾಂಧವರಲ್ಲಿ ರಂಜಾನ್ ಸಂಭ್ರಮ

ಮೀನಾ ಬಜಾರ್ ಸುತ್ತಮುತ್ತ ಹಬ್ಬದ ವಾತಾವರಣ



ಮೈಸೂರು, ಏ.10(ಎಂಕೆ)- ಮುಸ್ಲಿಂ ಬಾಂಧವರ ಪವಿತ್ರ ರಂಜಾನ್ ಹಬ್ಬಕ್ಕೂ ಮುನ್ನವೇ ಮೈಸೂರಿನಲ್ಲಿ ಹಬ್ಬದ ಸಡಗರ-ಸಂಭ್ರಮ ಜೋರಾಗಿದೆ.

ಬೆಳಗ್ಗೆಯಿಂದ ಸಂಜೆವರೆಗೂ ಉಪವಾಸ ವ್ರತ ಆಚರಿಸುವ ಮುಸ್ಲಿಂ ಬಾಂಧವರು ಸಂಜೆಯ ನಂತರ ಕುಟುಂಬಸ್ಥರೊಂದಿಗೆ ಇಷ್ಟದ ಖಾದ್ಯಗಳನ್ನು ಸವಿದು ಸಂಭ್ರಮಿಸುತ್ತಿದ್ದಾರೆ. ಉದಯಗಿರಿ, ರಾಜೀವ್ ನಗರ, ಮೀನಾ ಬಜಾರ್, ಶಾಂತಿನಗರ, ಅಶೋಕ ರೋಡ್, ಮಿಲಾದ್ ಪಾರ್ಕ್ ಸುತ್ತಮುತ್ತ ಸೇರಿದಂತೆ ಹಲವೆಡೆ ಹಬ್ಬದ ವಾತಾ ವರಣ ಮನೆ ಮಾಡಿದೆ.

ಖರೀದಿ ಜೋರು: ರಂಜಾನ್ ಹಿನ್ನೆಲೆ ಖರೀದಿ ಜೋರಾಗಿದೆ. ಖಾದ್ಯಗಳ ಸವಿಯುವುದು ಒಂದೆಡೆಯಾದರೆ, ಹೊಸ ಬಟ್ಟೆ, ಕುರ್ತಾ, ಟೋಪಿ ಇನ್ನಿತರೆ ವಸ್ತುಗಳ ಖರೀದಿ ಜೋರಾಗಿದ್ದು, ವ್ಯಾಪಾರ ಮಳಿಗೆಗಳು ಹೆಚ್ಚಾಗಿರುವ ಮೀನಾ ಬಜಾರ್ ಜನ ಜಂಗುಳಿಯಿಂದ ನಿತ್ಯವೂ ತುಂಬಿ ತುಳುಕುತ್ತಿದೆ. ವ್ಯಾಪಾರಕ್ಕೆ ಅನುಕೂಲವಾಗುವಂತೆ ಮೀನಾ ಬಜಾರ್ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಹಾಕಲಾಗಿದೆ. ಸಂಜೆ ವೇಳೆ ರಸ್ತೆಯ ಎರಡೂ ಬದಿಯಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ವ್ಯಾಪಾರ-ವಹಿವಾಟಿಗೆ ತೊಂದರೆಯಾಗದಂತೆ ಮುಂಜಾಗ್ರತೆ ವಹಿಸಲಾಗಿದೆ.

ಜಾಲತಾಣದಲ್ಲಿ ಕೋರ್ಟ್ ಕಲಾಪ ಹಕ್ಕು ಸ್ವಾಮ್ಯ ರಕ್ಷಣೆಗೆ ಕ್ರಮ

ನವದೆಹಲಿ: ಯೂಟ್ಯೂಬ್ ಜಾಲತಾಣದ ಮೂಲಕ ನೇರಪ್ರಸಾರವಾಗುವ ಕೋರ್ಟ್‌ನ ಕಲಾಪಗಳ ಹಕ್ಕುಸ್ವಾಮ್ಯವನ್ನು ಕಾಯ್ದುಕೊಳ್ಳಲು ಕ್ರಮವಹಿಸಲಾಗಿದೆ ಎಂದು ಸುಪ್ರೀಂಕೋರ್ಟ್ ಸೋಮವಾರ ತಿಳಿಸಿತು.



2018ರ ತೀರ್ಪಿಗೆ ಅನುಗುಣವಾಗಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ತಿಳಿಸಿದ ಸುಪ್ರೀಂಕೋರ್ಟ್‌ನ ಪೀಠವು, ಈ ಕುರಿತು ಆರ್‌ಎಸ್‌ಎಸ್‌ನ ಚಿಂತಕ ಕೆ.ಎನ್. ಗೋವಿಂದಾಚಾರ್ಯ ಅವರು ಸಲ್ಲಿಸಿದ್ದ ಅರ್ಜಿಯನ್ನು ವಿಲೇವಾರಿ ಮಾಡಿತು. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ, ಜೆ.ಬಿ.ಪಾರ್ದಿವಾಲಾ ಅವರಿದ್ದ ಪೀಠವು, ಅರ್ಜಿದಾರರು ಎತ್ತಿರುವ ಆಕ್ಷೇಪಗಳನ್ನು ಗಮನದಲ್ಲಿ ಇರಿಸಿಕೊಂಡು ಹಕ್ಕು ಸ್ವಾಮ್ಯ ರಕ್ಷಿಸುವ ವ್ಯವಸ್ಥೆ ರೂಪಿಸಲು ಸೂಚಿಸಲಾಗಿದೆ ಎಂದು ತಿಳಿಸಿತು.

'ಅಗತ್ಯ ಸಲಹೆಗಳನ್ನು ನೀವೂ ನೀಡಬಹುದು' ಎಂದು ಗೋವಿಂದಾಚಾರ್ಯ ಅವರನ್ನು ಪ್ರತಿನಿಧಿಸಿದ್ದ ವಕೀಲರಾದ ವಿರಾಗ್ ಗುಪ್ತಾ ಅವರಿಗೆ ಪೀಠ ತಿಳಿಸಿತು. ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದರು. 'ನೇರ ಪ್ರಸಾರದ ಹಕ್ಕುಸ್ವಾಮ್ಯ ರಕ್ಷಣೆಗೆ 2018ರ ತೀರ್ಪಿಗೆ ಅನುಗುಣವಾಗಿ ಕೋರ್ಟ್‌ನ ರಿಜಿಸ್ಟ್ರಿಯು ಯಾವುದೇ ಕ್ರಮವಹಿಸಿಲ್ಲ ಎಂದು ಟೀಕಿಸುವುದು ಸುಲಭ. ಆದರೆ, ಥರ್ಡ್ ಪಾರ್ಟಿ ತಂತ್ರಾಂಶಗಳ ನೆರವಿಲ್ಲದೆ ನೇರ ಪ್ರಸಾರ ಮಾಡುವಷ್ಟು ತಾಂತ್ರಿಕ ಮೂಲಸೌಕರ್ಯ ನಮ್ಮಲ್ಲಿ ಇಲ್ಲ ಎಂದು ಎನ್‌ಐಸಿ ಹೇಳಿದೆ. ಈ ಹಂತದಲ್ಲಿ ಏನು ಕ್ರಮ ವಹಿಸಬೇಕು ಎಂದು ನೀವು ಸಲಹೆ ನೀಡಿ ಎಂದು ಪೀಠ ಗೋವಿಂದಾಚಾರ್ಯ ಅವರ ವಕೀಲರಿಗೆ ತಿಳಿಸಿತು. ಗೋವಿಂದಾಚಾರ್ಯ ಅವರು ತಮ್ಮ ಅರ್ಜಿಯಲ್ಲಿ, ನೇರಪ್ರಸಾರ ವಿಷಯದಲ್ಲಿ ಕಲಾಪದ ಹಕ್ಕುಸ್ವಾಮ್ಯ ಉಳಿಸಿಕೊಳ್ಳಬೇಕು. ಕಲಾಪದ ಮುದ್ರಣವನ್ನು ಜಾಲತಾಣವು, ಸದ್ಯ (ಯೂಟ್ಯೂಬ್) ವಾಣಿಜ್ಯದ ದೃಷ್ಟಿಯಿಂದ ಬಳಸದಂತೆ ಎಚ್ಚರವಹಿಸಬೇಕು ಎಂದು ಪ್ರತಿಪಾದಿಸಿದ್ದರು.

ಪಿಂಚಣಿ ಅದಾಲತ್ ಏ.17ಕ್ಕೆ ಮುಂದೂಡಿಕೆ

ಮೈಸೂರು,ಏ.10- ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಪಿಂಚಣಿದಾರರ ಕುಂದುಕೊರತೆ ಮತ್ತು ಅಹವಾಲುಗಳಿಗೆ ಸಂಬಂಧಿಸಿದಂತೆ ಮಾ.15ರಂದು ನಡೆಯಬೇಕಿದ್ದ ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ಏಪ್ರಿಲ್ 17ಕ್ಕೆ ಮುಂದೂಡಲಾಗಿದೆ.

ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2023

ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆ ತೀವ್ರಗೊಳಿಸಿ: ಡಿಸಿ



ಮೈಸೂರು ಜಿಲ್ಲಾಡಳಿತ ಭವನದಲ್ಲಿ ಸೋಮವಾರ ನಡೆದ ವಿವಿಧ ಚುನಾವಣಾ ಕರ್ತವ್ಯ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ ರಾಜೇಂದ್ರ ಮಾತನಾಡಿದರು. ಚಿತ್ರದಲ್ಲಿ ನಗರ ಪೊಲೀಸ್ ಆಯುಕ್ತ ರಮೇಶ್, ಜಿಪಂ ಸಿಇಓ ಗಾಯತ್ರಿ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಮುಡಾ ಆಯುಕ್ತ ದಿನೇಶ್ ಇದ್ದಾರೆ.

ಮೈಸೂರು,ಏ.10-ಚುನಾವಣಾ ಅಕ್ರಮಗಳನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಚೆಕ್ ಪೋಸ್ಟ್‌ಗಳಲ್ಲಿ ನಡೆಸುತ್ತಿರುವ ತಪಾಸಣೆಯನ್ನು ತೀವ್ರಗೊಳಿಸಿ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆವಿ.ರಾಜೇಂದ್ರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿ ನಡೆದ ವಿವಿಧ ಚುನಾವಣಾ ಕರ್ತವ್ಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು ಪ್ರತಿ ವಾಹನವನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ನೀವೇ ಮೇಲ್ನೋಟಕ್ಕೆ ನಿರ್ಧಾರ ತೆಗೆದುಕೊಂಡು ವಾಹನಗಳನ್ನು ಬಿಡಬಾರದು, ಅನುಮಾನ ಬಂದ ವಾಹನಗಳನ್ನು ತೀವ್ರ ತಪಾಸಣೆಗೊಳಪಡಿಸಬೇಕು, ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ಸಿಸಿ ಕ್ಯಾಮರಾ ಹಾಗೂ ಬ್ಯಾಕಪ್ ಸರಿ ಇರುವಂತೆ ನೋಡಿಕೊಳ್ಳಿ, ಅಗತ್ಯವಿರುವ ಕ್ಯಾಮೆರಾಗಳನ್ನು ಸ್ಥಳೀಯ ಆಡಳಿತಗಳು ಒದಗಿಸಬೇಕೆಂದರು.

ಒಂದೆರಡು ದಿನಗಳಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳು ಬರಲಿದ್ದು ಜಾಗ್ರತೆಯಿಂದ ಕಾರ್ಯನಿರ್ವಹಿಸಿ, ಹಾಗೂ ಎಲ್ಲಾ ತಂಡಗಳವರು ಯಾವುದೇ ಗೊಂದಲಗೊಳಗಾಗದೇ ತಂಡವಾಗಿ ಕಾರ್ಯನಿರ್ವಹಿಸಿ ಎಂದರು. ಈಗಾಗಲೇ ಆಮಿಷಗಳಾದ ವಾಚ್, ಕುಕ್ಕರ್ ಹೆಚ್ಚಿನ ಸಂಖ್ಯೆಯಲ್ಲಿ ಖರೀದಿ ಯಾಗಿದ್ದು, ಜಿಲ್ಲೆಯಲ್ಲಿರುವ ಗೋದಾಮುಗಳ ಮೇಲೆ ಕಣ್ಣಿಡಿ ಹಾಗೂ ಒಂದೇ ನಂಬರಿನಿಂದ ವ್ಯವಹರಿಸಲ್ಪಡುವ ಗೂಗಲ್ ಪೇ, ಫೋನ್ ಪೇ, ಪೇಟಿಎಂಗಳ ಮೇಲೆ ನಿಗಾ ಇರಿಸಬೇಕು ಎಂದರು. ಸಭೆಯಲ್ಲಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಪಂ ಸಿಇಓ ಗಾಯತ್ರಿ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಇತರೆ ಅಧಿಕಾರಿಗಳು ಇದ್ದರು.

ಏ.22, 23ರಂದು ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ

ಮೈಸೂರು, ಏ.10(ಆರ್‌ಕೆ)- ಮೇ 10 ರಂದು ನಡೆಯಲಿರುವ ವಿಧಾನಸಭಾ ಸಾರ್ವತ್ರಿಕ ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳಿಗೆ ಏಪ್ರಿಲ್ 22 ಮತ್ತು 23 ರಂದು ಮೊದಲ ಹಂತದ ತರಬೇತಿ ನೀಡಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ರ‍್ಯಾಂಡ್‌ಮೈಸೇಷನ್ ಅಧಿಕಾರಿಗಳ ಸಭೆ ನಡೆಸಿದ ಅವರು, ವಿಧಾನಸಭಾ ಕ್ಷೇತ್ರ ಮತಗಟ್ಟೆ ಅಧ್ಯಕ್ಷೀಯ ಅಧಿಕಾರಿ(PRO)ಗಳು ಹಾಗೂ ಸಹಾಯಕ ಅಧ್ಯಕ್ಷೀಯ ಅಧಿಕಾರಿ (APRO)ಗಳಿಗೆ ಮತದಾನ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

2,905 ಪ್ರಿಸೈಡಿಂಗ್ ಆಫೀಸರ್‌ಗಳು, 2,905 ಅಸಿಸ್ಟೆಂಟ್ ಪ್ರಿಸೈಡಿಂಗ್ ಆಫೀಸರ್‌ಗಳು ಹಾಗೂ 5,810 ಮತದಾನ ಅಧಿಕಾರಿ (Poling Officer) ಗಳಿಗೆ ತರಬೇತಿ ನೀಡಲಿದ್ದು, ಮತಗಟ್ಟೆಗಳಿಗೆ ನಿಯೋಜನೆಗೊಂಡ ಎಲ್ಲಾ ಅಧಿಕಾರಿಗಳೂ ತಪ್ಪದೇ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಡಾ. ರಾಜೇಂದ್ರ ತಿಳಿಸಿದ್ದಾರೆ.

ತರಬೇತಿಗೆ ಗೈರುಹಾಜರಾದವರ ವಿರುದ್ಧ ಜನಪ್ರತಿನಿಧಿ ಕಾಯ್ದೆಯಡಿ ಶಿಸ್ತುಕ್ರಮ ಜರುಗಿಸಲಾಗುವುದು. ಚುನಾವಣಾ ಆಯೋಗವು ಕಾಲಕಾಲಕ್ಕೆ ನೀಡುವ ನಿರ್ದೇಶನ ಹಾಗೂ ಸೂಚನೆಗಳನ್ನು ಪಾಲಿಸುವುದು ಅಧಿಕಾರಿಗಳ ಕರ್ತವ್ಯವಾಗಿದ್ದು, ಈ ಸಂಬಂಧ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಸೂಚನೆ ನೀಡಿದರು.

ಮೈಸೂರು ಮಿತ್ರ

ಚುನಾವಣಾ ಪ್ರಚಾರಕ್ಕೆ ಶಾಸಕ ಸಿಎಸ್‌ಪಿ ಅಧಿಕೃತ ಚಾಲನೆ

● ಚಿನಕುರಳಿ ದೇವಾಲಯಗಳಲ್ಲಿ ವಿಶೇಷ ಪೂಜೆ ● ಮುಖಂಡರಿಂದ 5 ಲಕ್ಷ ರೂ. ದೇಣಿಗೆ ● ಕುಟುಂಬ ಸದಸ್ಯರಿಂದ ಪ್ರಚಾರ





ಚಿನಕುರಳಿ ಗ್ರಾಮಸ್ಥರು ಶಾಸಕ ಸಿ.ಎಸ್.ಪುಟ್ಟರಾಜು ಅವರನ್ನು ಸನ್ಮಾನಿಸಿ, ಚುನಾವಣೆ ಖರ್ಚಿಗಾಗಿ 5 ಲಕ್ಷ ರೂ. ದೇಣಿಗೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಶಾಸಕ ಪುಟ್ಟರಾಜು ಚುನಾವಣಾ ಪ್ರಚಾರ ನಡೆಸಿದ್ದನ್ನು ಕಾಣಬಹುದು.

ಚಿನಕುರಳಿ, ಏ.10– ಗ್ರಾಮದ ಹಲವು ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯೂ ಆದ ಶಾಸಕ ಸಿ.ಎಸ್.ಪುಟ್ಟರಾಜು ಚುನಾವಣಾ ಪ್ರಚಾರಕ್ಕೆ ಅಧಿಕೃತ ಚಾಲನೆ ನೀಡಿದರು.

ಚಿನಕುರಳಿ ಗ್ರಾಮದ ಮಹಾಗಣಪತಿ, ಶ್ರೀಮದ ಸುಂದರಮ್ಮ, ಶ್ರೀರಾಮೇಶ್ವರ, ಅಂಕನಾಥೇಶ್ವರ, ರಾಮಾಂಜನೇಯ, ಅರಿಳಿಕಮ್ಮ, ಮನೆಮಂಚಮ್ಮ, ಮಾಸ್ತಮ್ಮ, ದಣ್ಣಮ್ಮ, ಪಟ್ಟಲದಮ್ಮ ಸೇರಿದಂತೆ ಹಲವು ದೇವಾಲಯಗಳಿಗೆ ಪತ್ನಿ ನಾಗಮ್ಮ ಸೇರಿದಂತೆ ಕುಟುಂಬ ಸಮೇತರಾಗಿ ತೆರಳಿದ ಶಾಸಕ ಸಿ.ಎಸ್.ಪುಟ್ಟರಾಜು ವಿಶೇಷ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು.

5 ಲಕ್ಷ ದೇಣಿಗೆ: ಇದೇ ವೇಳೆ ಚಿನಕುರಳಿ ಗ್ರಾಮದ ಯುವಕರು ಹಾಗೂ ಮುಖಂಡರು ದೇಣಿಗೆ ಸಂಗ್ರಹಿಸಿ, ಗ್ರಾಮದ ಯಜಮಾನರಾದ ತಮ್ಮಣ್ಣಗೌಡ, ಸುಬ್ಬೇಗೌಡ ಮೂಲಕ ಚುನಾವಣಾ ಖರ್ಚಿಗಾಗಿ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ 5 ಲಕ್ಷ ರೂ. ದೇಣಿಗೆ ನೀಡಿದರು. ಬಳಿಕ ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿದ ಪುಟ್ಟರಾಜು ಅವರಿಗೆ ಮುಸ್ಲಿಂ ಸಮುದಾಯದ ಮುಖಂಡರು 25 ಸಾವಿರ ರೂ. ದೇಣಿಗೆ ನೀಡಿದರು.

ಬಳಿಕ ಶಾಸಕ ಸಿ.ಎಸ್.ಪುಟ್ಟರಾಜು, ಪತ್ನಿ ನಾಗಮ್ಮ, ಪುತ್ರ ಶಿವರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಸಿ. ಶಿವಕುಮಾರ್, ಸಿ.ಎಸ್.ಗೋಪಾಲಗೌಡ, ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ಎ. ಮಲ್ಲೇಶ್ ಸೇರಿದಂತೆ ಹಲವು ಮುಖಂಡರು ಚಿನಕುರಳಿ ಹಲವು ಬೀದಿಗಳಲ್ಲಿ ಮನೆ ಮನೆಗೆ ತೆರಳಿ ಚುನಾವಣಾ ಪ್ರಚಾರ ಕೈಗೊಂಡರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಸಂಪ್ರದಾಯದಂತೆ ನಾನು ಚುನಾವಣೆ ಪ್ರಚಾರಕ್ಕೂ ಮುನ್ನಾ ಗ್ರಾಮದ ಯಜಮಾನರು, ಮುಖಂಡರ ನೇತೃತ್ವದಲ್ಲಿ ಗ್ರಾಮದ ಎಲ್ಲಾ ಅದಿದೇವತೆಗಳಿಗೂ ಪೂಜೆ ಸಲ್ಲಿಸಿ ದೇವರ ಆಶೀರ್ವಾದ ಪಡೆದುಕೊಳ್ಳುತ್ತೇನೆ. ಅದರಂತೆ ಇಂದು ಎಲ್ಲಾ ದೇವರಿಗೂ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದು ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದ್ದೇನೆ. ನಿಮ್ಮೆಲ್ಲರ ಆಶೀರ್ವಾದ ಸದಾ ಹೀಗೆ ಇರಲಿ. ಗ್ರಾಮದ, ತಾಲೂಕಿನ, ಜಿಲ್ಲೆಯ, ರಾಜ್ಯದ ಹೆಸರು ಉಳಿಸುವ ಕೆಲಸ ಮಾಡುತ್ತೇನೆ ಎಂದರು.

ನನ್ನ ರಾಜಕೀಯ ಜೀವನ ಆರಂಭವಾದ ದಿನಗಳಿಂದಲೂ ಚುನಾವಣೆ ವೇಳೆ ಎಲ್ಲ ಪಕ್ಷಗಳು ನನ್ನ ವಿರುದ್ಧ ಒಟ್ಟಾಗುತ್ತವೆ. ಆದರೆ ಕ್ಷೇತ್ರದ ಮಹಾಜನತೆಯ ಆಶೀರ್ವಾದ ಇರುವ ತನಕ ಯಾರೂ ಏನೂ ಮಾಡಲು ಸಾಧ್ಯವಿಲ್ಲ. ಹೀಗಾಗಿ ಈ ಬಾರಿಯು ಪ್ರಚಂಡ ಬಹುಮತದಿಂದ ಕ್ಷೇತ್ರದ ಮತದಾರರು ನನ್ನನ್ನು ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಲಿದ್ದಾರೆ ಎನ್ನುವ ವಿಶ್ವಾಸವಿದೆ. ಕೋವಿಡ್ ವೇಳೆ ಪ್ರಾಣದ ಹಂಗು ತೊರೆದು ಜನರ ರಕ್ಷಣೆಗೆ ಮುಂದಾಗಿದ್ದೇನೆ. ಅಲ್ಲದೇ ನಾನು ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು, ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಹೀಗಾಗಿ ನನ್ನ ಅಭಿವೃದ್ಧಿ ಕಾರ್ಯ ಮುಂದುವರೆಯಲು ಕ್ಷೇತ್ರದ ಮತದಾರರಲ್ಲಿ ಮತ ಕೇಳುತ್ತೇನೆ ಎಂದು ತಿಳಿಸಿದರು.

ಇದೇ ವೇಳೆ ಹಾಜರಿದ್ದ ಗ್ರಾಮದ ಮುಸ್ಲಿಂ, ದಲಿತ ಸೇರಿದಂತೆ ಎಲ್ಲಾ ಸಮುದಾಯದ ಮುಖಂಡರು ಸಿ.ಎಸ್.ಪುಟ್ಟರಾಜು ಅವರಿಗೆ ಬೆಂಬಲ ಸೂಚಿಸಿದರು. ಅಲ್ಲದೇ ಇದೇ ವೇಳೆ ವಿವಿಧ ಪಕ್ಷಗಳ ಹಲವು ಮುಖಂಡರು ಜೆಡಿಎಸ್ ಸೇರ್ಪಡೆ ಗೊಂಡರು. ಇದೇ ಸಂದರ್ಭ ಚಿನಕುರಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು, ಯಜಮಾನರು, ಯುವಕರು ಹಾಜರಿದ್ದರು.

ಏ.18ಕ್ಕೆ ನಾಮಪತ್ರ ಸಲ್ಲಿಕೆ

ಇದೇ ತಿಂಗಳ ಏ.18ರಂದು ಮಧ್ಯಾಹ್ನ 12.30ರಿಂದ 1.30ರೊಳಗೆ ಕ್ಷೇತ್ರದ ಮಹಾಜನತೆ ಸಮ್ಮುಖದಲ್ಲಿ ನಾನು ನಾಮಪತ್ರ ಸಲ್ಲಿಸುತ್ತೇನೆ. ಆ ಸಂದರ್ಭ ಹೆಚ್ಚಿನ ಸಂಖ್ಯೆಯಲ್ಲಿ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ಸಾರ್ವಜನಿಕರು ಆಗಮಿಸಿ ಬೆಂಬಲ ನೀಡಬೇಕು.

– ಸಿ.ಎಸ್.ಪುಟ್ಟರಾಜು, ಶಾಸಕ

ಅರಕೆರೆಯಲ್ಲಿ ತಗ್ಗಹಳ್ಳಿ ವೆಂಕಟೇಶ್ ಬಿರುಸಿನ ಪ್ರಚಾರ



ಮಂಡ್ಯ, ಏ.10– ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಅರಕೆರೆ ಗ್ರಾಮದ ವ್ಯಾಪ್ತಿಯಲ್ಲಿ ಕ್ಷೇತ್ರದ ಜೆಡಿಎಸ್ ಬಂಡಾಯ ಅಭ್ಯರ್ಥಿ ತಗ್ಗಹಳ್ಳಿ ವೆಂಕಟೇಶ್ ಬಿರುಸಿನ ಪ್ರಚಾರ ನಡೆಸಿದರು. ಬೆಳಗ್ಗೆಯಿಂದಲೇ ಬೆಂಬಲಿಗರೊಂದಿಗೆ ಪ್ರಚಾರಕ್ಕಿಳಿದ ವೆಂಕಟೇಶ್, ಅರಕೆರೆ ಸೇರಿದಂತೆ ಅಕ್ಕಪಕ್ಕದ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು. ಬಳಿಕ ಮಾತನಾಡಿದ ಅವರು, ಕಳೆದ 2 ದಶಕಗಳಿಂದ ಜೆಡಿಎಸ್‌ನಲ್ಲಿ ಸಕ್ರಿಯವಾಗಿದ್ದ ನನಗೆ ಟಿಕೆಟ್ ವಂಚನೆ ಲಾಯಿತು. ಇದರಿಂದ ಬೇಸತ್ತು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿದ್ದು ಕ್ಷೇತ್ರದ ಮತದಾರರ ಆಶೀರ್ವಾದ ಈ ಬಾರಿ ನನ್ನ ಮೇಲಿರಲಿ ಎಂದು ಮನವಿ ಮಾಡಿದರು.

ಈ ಬಾರಿ ನನಗೊಂದು ಅವಕಾಶ ಕೊಡಿ: ರಮೇಶ್ ಬಂಡಿಸಿದ್ದೇಗೌಡ



ಮಂಡ್ಯ, ಏ.10– ಈ ಬಾರಿ ನನ್ನನ್ನು ಗೆಲ್ಲಿಸಿ. ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಮೇಶ್ ಬಂಡಿಸಿದ್ದೇಗೌಡ ಮನವಿ ಮಾಡಿದರು.

ತಾಲೂಕಿನ ಕಾರಸವಾಡಿಯಲ್ಲಿ ಶ್ರೀಕಾಲಭೈರವೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮನೆ ಮನೆಗೆ ತೆರಳಿ ಚುನಾವಣಾ ಪ್ರಚಾರ ನಡೆಸಿದ ಅವರು, ನನಗೆ ಸಿಕ್ಕಿದ ಅವಧಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ನಿಮ್ಮ ಕುಟುಂಬದ ಸದಸ್ಯನಾಗಿ ನಿಲ್ಲುತ್ತೇನೆ. ಹೀಗಾಗಿ ದಯಮಾಡಿ ಈ ಬಾರಿ ನನ್ನ ಕೈ ಬಿಡಬೇಡಿ. ಕಾಂಗ್ರೆಸ್ ಪಕ್ಷ ಹಾಗೂ ಬಾಬು ಪರವಾಗಿ ನಿಲ್ಲಿ. ಪ್ರೀತಿಪೂರ್ವಕವಾಗಿ ನಿಮ್ಮ ನಂಬಿಕೆ ಉಳಿಸಿಕೊಳ್ಳುವ ಕೆಲಸ ಮಾಡುತ್ತೇನೆ ಎಂದರು. ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಈ ಬಾರಿಯು ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುತ್ತದೆ. ಯಾವುದೇ ಸಂಶಯ ಬೇಡ. ಬಿಜೆಪಿ ದುರಾಡಳಿತಕ್ಕೆ ಜನ ಬೇಸತ್ತು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಲು ಸಿದ್ಧರಿದ್ದಾರೆ. ಈ ಬಾರಿ ರಮೇಶ್ ಬಂಡಿಸಿದ್ದೇಗೌಡರಿಗೆ ಅಧಿಕ ಮತಗಳನ್ನು ಕೊಟ್ಟು ಗೆಲ್ಲಿಸುವ ಕೆಲಸ ಮಾಡಿ. ಇಬ್ಬರು ಒಟ್ಟಿಗೆ ಸೇರಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆ ಎಂದರು.

ಈ ಸಂದರ್ಭ ಕಾಂಗ್ರೆಸ್ ಮುಖಂಡರಾದ ಸಿದ್ದರಾಮೇಗೌಡ, ಬೋರೇಗೌಡ, ಮಂಜುನಾಥ್, ಶಶಿಧರ್, ರಮೇಶ್ ಮಿತ್ರ, ವೆಂಕಟೇಶ್, ನಾಗರಾಜು, ನಾಗಣ್ಣ, ರಾಮಚಂದ್ರು ಇತರರಿದ್ದರು.

ಈ ಬಾರಿಯೂ ಹಾಲುಮತ ಸಮಾಜ ನನ್ನ ಕೈ ಬಿಡಲ್ಲ



ಮಳವಳ್ಳಿ, ಏ.10– ಈ ಬಾರಿಯ ಚುನಾವಣೆಯಲ್ಲೂ ಹಾಲು ಮತ ಸಮುದಾಯ ನನ್ನ ಕೈ ಬಿಡುವುದಿಲ್ಲ ಎಂಬ ನಂಬಿಕೆ ಇದೆ ಎಂದು ಜೆಡಿಎಸ್ ಅಭ್ಯರ್ಥಿ ಹಾಗೂ ಶಾಸಕ ಡಾ.ಕೆ.ಅನ್ನದಾನಿ ತಿಳಿಸಿದರು.

ತಾಲೂಕಿನ ಮೂಗನಕೊಪ್ಪಲು ಗ್ರಾಮದಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಮಂಚನಹಳ್ಳಿ ಗ್ರಾಮದ 20ಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರನ್ನು ಜೆಡಿಎಸ್‌ಗೆ ಬರಮಾಡಿಕೊಂಡು ಮಾತನಾಡಿದ, ಹಿಂದಿನ ಚುನಾವಣೆಯಲ್ಲಿ ಭರವಸೆ ಕೊಟ್ಟಂತೆ ಕನಕ ಭವನಕ್ಕೆ ನಿವೇಶನ ನೀಡುವ ಜೊತೆಗೆ ಕಟ್ಟಡ ನಿರ್ಮಿಸಲು ಚಾಲನೆ ನೀಡಲಾಗಿದೆ. ನನ್ನ ಅಧಿಕಾರ ಅವಧಿಯಲ್ಲಿಯೇ ಕನಕ ಭವನವನ್ನು ಪೂರ್ಣಗೊಳಿಸಿ ಉದ್ಘಾಟಿಸಬೇಕೆಂಬ ಸಂಕಲ್ಪ ಹೊಂದಿರುವ ತನಗೆ ಮತ್ತೊಂದು ಬಾರಿ ಅವಕಾಶ ನೀಡಬೇಕೆಂದು ಕೋರಿದರು.

ಹಾಲು ಮತ ಸಮುದಾಯಕ್ಕೆ ರಾಜಕೀಯವಾಗಿ ಸಿಗಬೇಕಾದ ಸ್ಥಾನಮಾನ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಮಂಚನಹಳ್ಳಿ ಗ್ರಾಮದ ಯುವಕರು ಕಾಂಗ್ರೆಸ್ ಬಿಟ್ಟು ಜೆಡಿಎಸ್‌ಗೆ ಸೇರ್ಪಡೆಗೊಂಡಿರುವುದಕ್ಕೆ ಸ್ವಾಗತ ಕೋರುತ್ತೇನೆ. ಕಳೆದ ಬಾರಿ ಹಾಲುಮತಸ್ಥರ (ಕುರುಬರ) ಆಶೀರ್ವಾದರಿಂದ 25 ಸಾವಿರಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದೇನೆ ಎಂದರು.

ಪಂಪ್‌ಹೌಸ್‌ನಲ್ಲಿ ಬೆಳಗೊಳ ಜೆಡಿಎಸ್ ಕಾರ್ಯಕರ್ತರ ಸಭೆ



ಶ್ರೀರಂಗಪಟ್ಟಣ, ಏ.10– ತಾಲೂಕಿನ ಪಂಪ್‌ಹೌಸ್‌ನಲ್ಲಿ ಭಾನುವಾರ ಸಂಜೆ ಬೆಳಗೊಳ ಹೋಬಳಿ ಜೆಡಿಎಸ್ ಕಾರ್ಯಕರ್ತರ ಸಭೆ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್, ಬಿಜೆಪಿಯ 600ಕ್ಕೂ ಹೆಚ್ಚು ಮಂದಿ ಮುಖಂಡರು ಹಾಗೂ ಕಾರ್ಯಕರ್ತರು ಶಾಸಕ ರವೀಂದ್ರ ಶ್ರೀಕಂಠಯ್ಯ ನೇತೃತ್ವದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದ ಅಭಿವೃದ್ಧಿಗಾಗಿ ಪಂಚರತ್ನ ಯೋಜನೆ ಜಾರಿಗೆ ಮುಂದಾಗಿದ್ದಾರೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದ್ದು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗುವುದು ಖಚಿತ. ಕ್ಷೇತ್ರದ ಮತದಾರರು ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸುವ ಮೂಲಕ ತಮ್ಮ ಸೇವೆ ಮಾಡಲು ಮತ್ತೊಂದು ಅವಕಾಶ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ಸರ್ಕಾರ ಬಡವರಿಗೆ ಹೆಚ್ಚಿನ ವೃದ್ಧಾಪ್ಯ ವೇತನ, ಪಿಂಚಣಿ ಹಾಗೂ ಉಚಿತ ಶಿಕ್ಷಣ ನೀಡುವ ಮನಸ್ಸು ಮಾಡಲಿಲ್ಲ. ಹಾಗಾಗಿ ಕುಮಾರಸ್ವಾಮಿ ಅವರ ಕನಸಿಗೆ ಈ ಚುನಾವಣೆ ಉತ್ತರ ಆಗಬೇಕಿದೆ. ಇತ್ತ ಕಾಂಗ್ರೆಸ್ ಪಕ್ಷ 10 ಕೆಜಿ ಅಕ್ಕಿ ನೀಡುತ್ತೇವೆ ಎಂದು ಮತದಾರರನ್ನು ಯಾಮಾರಿಸಲು ಹೊರಟಿದೆ ಎಂದರು.

ಬಿಜೆಪಿಯವರು ಮತದಾರರಿಗೆ ಸೀರೆ, ಬಳೆ ಕೊಟ್ಟು ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ. ಕೋವಿಡ್ ಸಮಯದಲ್ಲಿ ಯಾರೊಬ್ಬರು ಬಡಜನರ ಬೆಂಬಲಕ್ಕೆ ಬರಲಿಲ್ಲ ಎಂದು ಆರೋಪಿಸಿದರು.

ಮೊಗರಹಳ್ಳಿ ಗ್ರಾಪಂ ಮಾಜಿ ಸದಸ್ಯೆ ಸುಂದ್ರಮ್ಮ, ಬಿಜೆಪಿ ಮುಖಂಡ ಉಮಾಶಂಕರ್, ಯಜಮಾನರಾದ ಸಿದ್ದೇಗೌಡ, ಅನಿಲ್‌ಕುಮಾರ್, ಮುನಿಸ್ವಾಮಿ, ಚಲುವರಾಜು ಸೇರಿದಂತೆ ಹೊಸಹಳ್ಳಿ, ಬೆಳಗೊಳ, ಕೆಆರ್‌ಎಸ್‌ನ ಕಾಂಗ್ರೆಸ್ ಹಾಗೂ ಬಿಜೆಪಿಯ 600ಕ್ಕೂ ಹೆಚ್ಚು ಮುಖಂಡರು ಹಾಗೂ ಕಾರ್ಯಕರ್ತರು ಜೆಡಿಎಸ್‌ಗೆ ಸೇರ್ಪಡೆಗೊಂಡರು. ಈ ವೇಳೆ ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಂ. ಸಂತೋಷ್, ತಾಲೂಕು ಅಧ್ಯಕ್ಷ ಪೈ.ಮುಕುಂದ, ಮುಖಂಡ ಕೃಷ್ಣಣ್ಣ, ಜಿಪಂ ಮಾಜಿ ಸದಸ್ಯೆ ಸವಿತಾ, ಗ್ರಾಪಂ ಸದಸ್ಯರು ಸೇರಿದಂತೆ 4 ಸಾವಿರ ಮಂದಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹಾಜರಿದ್ದರು.

ಗೋಪಾಲಣ್ಣ ನಿಧನ



ಶ್ರೀರಂಗಪಟ್ಟಣ, ಏ.10– ಪಟ್ಟಣದ ರಂಗನಾಥನಗರದ ನಿವಾಸಿ ಗೋಪಾಲಣ್ಣ(65) ಭಾನುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸಂಜೆ ಪಟ್ಟಣದ ಶಂಭುಲಿಂಗಯ್ಯ ನಕಟ್ಟೆಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇಶೀಯ ಕ್ರಿಕೆಟ್ ವೇಳಾಪಟ್ಟಿ ಪ್ರಕಟ

ಮುಂಬೈ: 2023–24ರ ಭಾರತದ ದೇಶೀಯ ಋತುವಿನ ವೇಳಾಪಟ್ಟಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ಪ್ರಕಟಿಸಿದೆ. ಜೂನ್ 28 ರಂದು ದುಲೀಪ್ ಟ್ರೋಫಿ ಪಂದ್ಯಾವಳಿಯೊಂದಿಗೆ ದೇಶಿಯ ಕ್ರಿಕೆಟ್ ಪ್ರಾರಂಭವಾಗಲಿದ್ದು, ಮುಂದಿನ ವರ್ಷ ಜನವರಿ 5 ರಿಂದ ಪ್ರಮುಖ ರಣಜಿ ಟ್ರೋಫಿ ಪ್ರಾರಂಭವಾಗಲಿದೆ

ಆರು ವಲಯ ತಂಡಗಳ ನಡುವೆ ಆಡಲಾಗುವ ದುಲೀಪ್ ಟ್ರೋಫಿ ನಂತರ ದೇವಧರ್ ಟ್ರೋಫಿ (ಪಟ್ಟಿ ಎ) (ಜುಲೈ 24 ರಿಂದ ಆಗಸ್ಟ್ 3), ಇರಾನಿ ಕಪ್ (ಅಕ್ಟೋಬರ್ 1–5), ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪುರುಷರ ಟಿ20 ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗಳು (ಅಕ್ಟೋಬರ್. 16–ನವೆಂಬರ್ 6) ಮತ್ತು ವಿಜಯ್ ಹಜಾರೆ ಟ್ರೋಫಿ (ನವೆಂಬರ್ 23–ಡಿಸೆಂಬರ್ 15) ಪಂದ್ಯಾವಳಿ ನಡೆಯಲಿದೆ. ರಣಜಿ ಟ್ರೋಫಿ ಹಿರಿಯ ಆಟಗಾರರ ವೇಳಾಪಟ್ಟಿಯ ಕೊನೆಯ ಪಂದ್ಯಾವಳಿ ಯಾಗಿದ್ದು, ಜನವರಿ 5 ರಿಂದ ಫೆಬ್ರವರಿ 19 ರವರೆಗೆ ಎಲೈಟ್ ಗ್ರೂಪ್ ಲೀಗ್ ಪಂದ್ಯಗಳನ್ನು ಆಡಲಾಗುತ್ತದೆ, ಆದರೆ ನಾಕ್–ಔಟ್ ಸುತ್ತು ಫೆಬ್ರವರಿ 23 ರಿಂದ ಮಾರ್ಚ್ 14 ರವರೆಗೆ ಇರುತ್ತದೆ. ಟೂರ್ನಿಯ ಅವಧಿಯು 70 ದಿನ ಆಗಿದೆ. ಪ್ಲೇಟ್ ಗುಂಪಿನ ಲೀಗ್ ಪಂದ್ಯಗಳು ಜನವರಿ 5 ಮತ್ತು ಫೆಬ್ರವರಿ 5 ರ ನಡುವೆ ನಡೆಯಲಿದ್ದು, ನಾಕ್–ಔಟ್ ಸುತ್ತು ಫೆಬ್ರವರಿ 9–22 ರವರೆಗೆ ನಡೆಯಲಿದೆ.

ಅಕ್ಟೋಬರ್ 19 ರಿಂದ ನವೆಂಬರ್ 9ರ ನಡುವೆ ರಾಷ್ಟ್ರೀಯ ಟಿ–20 ಚಾಂಪಿಯನ್‌ಶಿಪ್‌ಗಳೊಂದಿಗೆ ಹಿರಿಯ ಮಹಿಳೆಯರ ಸೀಸನ್ ಪ್ರಾರಂಭವಾಗುತ್ತದೆ.

ನೌಕಾದಳದ ಕರ್ನಾಟಕ ಪ್ರದೇಶದ ಮುಖ್ಯಸ್ಥರಾಗಿ ಕೆ.ಎಂ.ರಾಮಕೃಷ್ಣನ್



ಕಾರವಾರ: ನೌಕಾದಳದ ಕರ್ನಾಟಕ ಪ್ರದೇಶದ ಮುಖ್ಯಸ್ಥರಾಗಿ (ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್) ರಿಯರ್ ಅಡ್ಮಿರಲ್ ಕೆ.ಎಂ.ರಾಮಕೃಷ್ಣನ್ ಸೋಮ ವಾರ ಅಧಿಕಾರ ವಹಿಸಿಕೊಂಡರು. ಈ ಮುನ್ನ ನೌಕಾ ಸಿಬ್ಬಂದಿಯ ಸಹಾಯಕ ಮುಖ್ಯಸ್ಥರಾಗಿ ಅವರು ಕೆಲಸ ಮಾಡುತ್ತಿದ್ದರು. 1991ರ ಜನವರಿ 1 ರಂದು ನೌಕಾಪಡೆಗೆ ಸೇರಿರುವ ಅವರು ಕ್ಷಿಪಣಿ ನೌಕೆ ಐ.ಎನ್.ಎಸ್. ನಿರ್ಭೀಕ್, ಪೆಟ್ರೋಲ್ ನೌಕೆ ಸುಭದ್ರ ಮತ್ತು ಐ.ಎನ್.ಎಸ್.ಬೆಟ್ವಾ ಅವುಗಳನ್ನು ಮುನ್ನಡೆಸಿದ್ದಾರೆ. ಜತೆಗೆ ಶಾರದಾ, ಕುತಾರ್, ರಾಣಾ, ಕೃಷ್ಣ ಮತ್ತು ತಲ್ವಾರ್ ಹಡಗುಗಳ ನೌಕಾ ಅಧಿಕಾರಿಯಾಗಿಯೂ ಕೆಲಸ ಮಾಡಿದ್ದಾರೆ. ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ವ್ಯಾಸಂಗ ಮಾಡಿರುವ ರಾಮಕೃಷ್ಣನ್ ರಕ್ಷಣಾ ವಿಭಾಗದಲ್ಲಿ ಸ್ನಾತಕ ಪದವಿ ಪಡೆದವರಾಗಿದ್ದಾರೆ ಎಂದು ನೌಕಾದಳದ ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿಂದೆ ನೌಕಾದಳದ ಕರ್ನಾಟಕ ವಲಯದ ಮುಖ್ಯಸ್ಥರಾಗಿದ್ದ ಅತುಲ್ ಆನಂದ್ ಈಚೆಗಷ್ಟೆ ಪದೋನ್ನತಿ ಪಡೆದು ನೌಕಾದಳದ ಕಾರ್ಯಾಚರಣೆ ವಿಭಾಗದ ಮುಖ್ಯಸ್ಥರಾಗಿ ನಿಯೋಜನೆಗೊಂಡಿದ್ದಾರೆ.

ಒಂದನೇ ಪುಟದಿಂದ

5000 ಯುವ ಮತದಾರರ ಸೇರ್ಪಡೆ

ಮಂದಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿದ್ದಾರೆ. ಬೂತ್ ಮಟ್ಟದ ಅಧಿಕಾರಿ (BLO) ಗಳ ಮೂಲಕ ಅವರ ಮನೆಗೆ ಭೇಟಿ ನೀಡಿ 12–ಡಿ ನಮೂನೆ ಭರ್ತಿ ಮಾಡಿಸುತ್ತಿದ್ದು, ಮತದಾನ ದಿನದಂದು ಬ್ಯಾಲೆಟ್ ಪೇಪರ್‌ನೊಂದಿಗೆ ತೆರಳಿ ಅಂಚೆ ಮತದಾನ ಮಾಡಿಸಿ ಪ್ರಕ್ರಿಯೆಯನ್ನು ವಿಡಿಯೋ ಮಾಡಿಸಿ, ತಂದು ಆಯಾಯ ವಿಧಾನಸಭಾ ಕ್ಷೇತ್ರದ ಚುನಾವಣಾ ಅಧಿಕಾರಿ (RO) ಗಳಿಗೆ ಬಿಎಲ್‌ಓಗಳು ತಲುಪಿಸಲು ಸಕಲ ಸಿದ್ಧತೆ ಮಾಡಲಾಗಿದೆ. ಮತದಾನದ ಪ್ರಮಾಣ ಹೆಚ್ಚಿಸುವ ಉದ್ದೇಶ ಹೊಂದಿರುವ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಜಿಲ್ಲೆಯಾದ್ಯಂತ ಯುವ ಮತದಾರರು ಮತದಾರರ ಪಟ್ಟಿಗೆ ಕೊನೆಗಳಿಗೆವರೆಗೂ ಹೆಸರು ಸೇರಿಸುವುದರೊಂದಿಗೆ, ಮತಗಟ್ಟೆಗಳಿಗೆ ಬಂದು ಮತ ಚಲಾಯಿಸಲು ಸಾಧ್ಯವಾಗದ 80 ವರ್ಷ ಮೇಲ್ಪಟ್ಟ ಹಿರಿಯರಿಗೂ ಮನೆಯಲ್ಲೇ ಮತದಾನ ಮಾಡಲು ಅವಕಾಶ ಮಾಡಿಕೊಡುತ್ತಿದ್ದಾರೆ.

ಮೈಸೂರು ಆಸ್ಪತ್ರೆಗಳಲ್ಲಿ ಅಣಕು ಪ್ರದರ್ಶನ

ತೀವ್ರ ಸೋಂಕು ಮತ್ತು ಅತೀವ ಉಸಿರಾಟ ತೊಂದರೆ, ಅಧಿಕ ಸೋಂಕು ಪ್ರಕರಣಗಳ ಪತ್ತೆಗೆ ರೋಗ ಲಕ್ಷಣಗಳಿರುವ ರೋಗಿಗಳಿಗೆ ಮಾತ್ರ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸುತ್ತಿದ್ದೇವೆಯೇ ಹೊರತು, ಸಾರ್ವಜನಿಕರಿಗೆ ಕಡ್ಡಾಯವಲ್ಲ. ಮೈಸೂರು ಜಿಲ್ಲೆಯಲ್ಲಿ ಕೇವಲ 43 ಕೊರೊನಾ ಪಾಸಿಟಿವ್ ಕೇಸುಗಳಿವೆ. ಆದ್ದರಿಂದ ಯಾರೂ ಆತಂಕ ಪಡುವ ಅಗತ್ಯವಿಲ್ಲ ಎಂದ ಅವರು, ಆದರೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಡಾ. ಪ್ರಸಾದ್ ತಿಳಿಸಿದರು. ರೋಗ ಲಕ್ಷಣಗಳು ಕಂಡು ಬರುತ್ತಿವೆಯಾದರೂ, ಯಾರೂ ಆಸ್ಪತ್ರೆಗಳಲ್ಲಿ ದಾಖಲು ಮಾಡುವಷ್ಟು ತೀವ್ರತೆ ಇಲ್ಲವಾದ್ದರಿಂದ ಸಾರ್ವಜನಿಕರು ಆತಂಕಪಡಬೇಕಾಗಿಲ್ಲ. ಆದರೆ ಕೋವಿಡ್ ಮುನ್ನೆಚ್ಚರಿಕೆ ವಹಿಸುವುದು ಅವಶ್ಯ ಎಂದು ಡಾ. ಕೆ.ಹೆಚ್. ಪ್ರಸಾದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಿದ್ದರಾಮಯ್ಯ ಅವಧಿಯಲ್ಲೇ ಅಮುಲ್ ಹಾಲು ಮಾರಾಟ ವಿಸ್ತರಣೆಯಾಗಿದೆ: ಅಣ್ಣಾಮಲೈ



ಬೆಂಗಳೂರು: 2017ರಲ್ಲಿ ಅಮುಲ್ ತನ್ನ 43ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಅಮುಲ್ ಹಾಲನ್ನು ಉತ್ತರ ಕರ್ನಾಟಕದ ಭಾಗವೂ ಸೇರಿ ದೇಶದ ವಿವಿಧ ಕಡೆಗಳಲ್ಲಿ ಪೂರೈಕೆ ಮಾಡುವ ನಿರ್ಧಾರವನ್ನು ತೆಗೆದುಕೊಂಡಿತ್ತು. ಆಗ ಕರ್ನಾಟಕದಲ್ಲಿ ಮುಖ್ಯಮಂತ್ರಿ ಯಾರಾಗಿದ್ದರು ಎಂದು ರಾಜ್ಯ ಬಿಜೆಪಿ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ಪ್ರಶ್ನಿಸಿದ್ದಾರೆ.

ಈ ಸಂಬಂಧ ಟ್ವೀಟ್‌ವೊಂದನ್ನು ಸಿದ್ದರಾಮಯ್ಯ ಅವರಿಗೆ ಟ್ಯಾಗ್ ಮಾಡಿದ್ದು, ಅಮುಲ್ ತನ್ನ ಹಾಲು ಮತ್ತು ಇತರ ಉತ್ಪನ್ನಗಳನ್ನು ಆಗಲೇ ವಿಸ್ತರಣೆ ಮಾಡಲು ಆರಂಭಿಸಿತ್ತು. ಈಗ ಇಬ್ಬಗೆಯ ಧೋರಣೆ ಏಕೆ ಎಂದಿದ್ದಾರೆ. ಕಾಂಗ್ರೆಸ್ ಅವಧಿಯಲ್ಲಿ ದಿನಕ್ಕೆ 66.3 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿತ್ತು. ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯದ ರೈತರಿಂದ ಹಾಲಿನ ಉತ್ಪಾದನೆ 82.4 ಲಕ್ಷ ಲೀಟರ್‌ಗೆ ಏರಿಕೆಯಾಗಿದೆ. ಹಾಗಿದ್ದರೆ ಯಾರ ಅವಧಿಯಲ್ಲಿ ಖಾಸಗಿ ಡೇರಿಗಳು ಸಮೃದ್ಧವಾಗಿ ಬೆಳೆದವು ಎಂದು ಪ್ರಶ್ನಿಸಿದ್ದಾರೆ.

ತಮಿಳುನಾಡಿನ ಆವಿನ್ ಮತ್ತು ಕರ್ನಾಟಕದ ನಂದಿನಿ ಆಯಾ ರಾಜ್ಯಗಳ ಹೆಮ್ಮೆಯ ಉತ್ಪನ್ನಗಳು. ಇವೆರಡೂ ಆಯಾ ರಾಜ್ಯಗಳ ರೈತರಿಂದ ಹಾಲನ್ನು ಸಂಗ್ರಹಿಸಿ ಗ್ರಾಹಕರಿಗೆ ತಲುಪಿಸಲಾಗುತ್ತದೆ. 2014 ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮಿಳುನಾಡಿನಲ್ಲಿ ನಂದಿನಿ ಹಾಲಿನ ಪೂರೈಕೆಗೆ ಚಾಲನೆ ನೀಡಿದರು. ಈ ದ್ವಿಮುಖ ನೀತಿ ಏಕೆ ಸಿದ್ದರಾಮಯ್ಯ ಅವರೇ ಎಂದು ಕುಟುಕಿದ್ದಾರೆ.

ಮಹಿಳೆಯ ಚಿನ್ನದ ಸರ ಕಳವು

ಭಾರತೀನಗರ, ಏ.10– ದುಷ್ಕರ್ಮಿಗಳು ಮಹಿಳೆಯೊಬ್ಬರ ಚಿನ್ನದ ಸರ ಕಸಿದು ಪರಾರಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಕಪರೆಕೊಪ್ಪಲು ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮರಿಯಮ್ಮ ಎಂಬುವರೇ ಚಿನ್ನದ ಸರ ಕಳೆದು ಕೊಂಡವರು. ಈಕೆ ಸಂಜೆ ಜಮೀನಿ ನಿಂದ ವಾಪಸ್ ಮನೆಗೆ ಬರುವಾಗ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಮರಿಯಮ್ಮನವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಲಂಚ ಆರೋಪ: ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಜಾಮೀನು ಅರ್ಜಿ ವಿಚಾರಣೆ ಪೂರ್ಣ

ಆದೇಶ ಕಾಯ್ದಿರಿಸಿದ ಕೋರ್ಟ್



ಬೆಂಗಳೂರು: ಕೆಎಸ್‌ಡಿಎಲ್ ಟೆಂಡರ್‌ಗಾಗಿ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಮಾಡಾಳ್ ವಿರೂಪಾಕ್ಷಪ್ಪ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ಕೋರ್ಟ್‌ನಲ್ಲಿ ವಿಚಾರಣೆ ಮಾಡಲಾಗಿದೆ. ಅರ್ಜಿ ವಿಚಾರಣೆ ಪೂರ್ಣಗೊಳಿಸಿ ಕೋರ್ಟ್ ಆದೇಶ ಕಾಯ್ದಿರಿಸಿದ್ದು, ಏ.15 ರಂದು ಮಾಡಾಳ್ ವಿರೂಪಾಕ್ಷಪ್ಪ ಜಾಮೀನು ಭವಿಷ್ಯ ನಿರ್ಧಾರವಾಗಲಿದೆ. ಇತ್ತೀಚೆಗೆ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಯನ್ನು ಕರ್ನಾಟಕ ಹೈಕೋರ್ಟ್ ಏಕ ಸದಸ್ಯ ಪೀಠ ವಿಚಾರಣೆ ನಡೆಸಿತು. ಈ ವೇಳೆ, ಮಾಡಾಳ್ ಪರ ವಕೀಲರು ಹಾಗೂ ಲೋಕಾಯುಕ್ತ ವಕೀಲರು ವಾದ ಮಂಡಿಸಿದ್ದರು. ಉಭಯ ವಕೀಲರ ವಾದ ಆಲಿಸಿದ ಏಕಸದಸ್ಯ ಪೀಠದ ನ್ಯಾಯಮೂರ್ತಿ ಕೆ. ನಟರಾಜನ್, ಆದೇಶವನ್ನು ಕಾಯ್ದಿರಿಸಿದ್ದರು. ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಏಕಸದಸ್ಯ ಪೀಠ ಆರಂಭಿಸಿದ ಕೂಡಲೇ ಅದಕ್ಕೆ ಲೋಕಾಯುಕ್ತ ಪೊಲೀಸರು ಆಕ್ಷೇಪಣೆ ಸಲ್ಲಿಸಿದ್ದರು. ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಳಿಸುವಂತೆ ಮನವಿ ಮಾಡಿದ್ದರು. ಈ ಮಧ್ಯೆ, ಮಾಡಾಳ್ ಪರ ವಕೀಲರು ವಾದ ಮಂಡನೆಗೆ ಕಾಲಾವಕಾಶ ಕೋರಿದ್ದರು. ಆದರೆ ಅವರ ಮನವಿಯನ್ನು ಹೈಕೋರ್ಟ್ ನಿರಾಕರಿಸಿ, ಕೂಡಲೇ ವಾದಮಂಡನೆ ಆರಂಭಿಸುವಂತೆ ಸೂಚಿಸಿತ್ತು.

ಪ್ರಕರಣ ಹಿನ್ನೆಲೆ: ಮಾರ್ಚ್ 2ರಂದು ಶಾಸಕ ಮಾಡಾಳ್ ವಿರುಪಾಕ್ಷಪ್ಪ ಅವರ ಪುತ್ರ ಬೆಂಗಳೂರು ಜಲಮಂಡಳಿಯ ಚೀಫ್ ಅಕೌಂಟಿಂಗ್ ಆಫೀಸರ್ ಮಾಡಾಳ್ ಪ್ರಶಾಂತ್ ಅವರು 40 ಲಕ್ಷ ರೂ. ಹಣವನ್ನು ಪಡೆಯುವಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದರು. ಈ ವೇಳೆ ಪ್ರಶಾಂತ್ ಅವರಿಗೆ ಹಣ ಕೊಡಲು ಬಂದ ವ್ಯಕ್ತಿಗಳು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ಅಧ್ಯಕ್ಷರಾಗಿದ್ದ ಮಾಡಾಳ್ ವಿರುಪಾಕ್ಷಪ್ಪ ಅವರಿಗೆ ಸಂಬಂಧಪಟ್ಟ ಹಣವಾಗಿದೆ ಎಂದು ಹೇಳಿದ್ದರು. ಬಳಿಕ ಲೋಕಾಯುಕ್ತ ಅಧಿಕಾರಿಗಳು ವಿರುಪಾಕ್ಷಪ್ಪ ಹಾಗೂ ಅವರ ಪುತ್ರ ಪ್ರಶಾಂತ್ ನಿವಾಸದ ಮೇಲೆ ದಾಳಿ ಮಾಡಿತ್ತು. ಬೆಂಗಳೂರಿನ ಮನೆ, ಕಚೇರಿ, ಚನ್ನೇಶಪುರ ಗ್ರಾಮದ ಮನೆಯಲ್ಲಿ ಕಾರ್ಯಾಚರಣೆ ನಡೆಸಿತ್ತು, ಈ ವೇಳೆ ಕೋಟಿ ಕೋಟಿ ಹಣ, ಚಿನ್ನ, ಅಪಾರ ಪ್ರಮಾಣದ ಆಸ್ತಿ ಪತ್ರಗಳು ಪತ್ತೆಯಾಗಿದ್ದವು.

ಈ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರಿಗೆ 6 ದಿನಗಳ ಕಾಲ ಸಿಗದೇ ಕಣ್ಮರೆಸಿಕೊಂಡಿದ್ದ ಮಾಡಾಳ್ ವಿರುಪಾಕ್ಷಪ್ಪ ಹೈಕೋರ್ಟ್‌ನಿಂದ ಮಧ್ಯಂತರ ನಿರೀಕ್ಷಣಾ ಜಾಮೀನು ಪಡೆದು ಲೋಕಾಯುಕ್ತ ಪೊಲೀಸರ ಮುಂದೆ ಹಾಜರಾಗಿದ್ದರು. ಆದರೆ ಲೋಯುಕ್ತರ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡಿಲ್ಲ ಎಂದು ತಿಳಿದುಬಂದಿತ್ತು.

ಶಾಸಕರ ಪುತ್ರ ಮಾಡಾಳ್ ಪ್ರಶಾಂತ್ ಜಾಮೀನು ಅರ್ಜಿ ವಜಾ



ಶಾಸಕರ ಪುತ್ರ ಮಾಡಾಳ್ ಪ್ರಶಾಂತ್ ಜಾಮೀನು ಅರ್ಜಿವನ್ನು ಸಹ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ವಜಾಗೊಳಿಸಿ ಆದೇಶ ಹೊರಡಿಸಿದೆ. ಕೆಎಸ್‌ಡಿಎಲ್ ಟೆಂಡರ್‌ಗಾಗಿ ಲಂಚ ಪಡೆದ 3ನೇ ಆರೋಪಿ ಸುರೇಂದ್ರಗೆ ಕೋರ್ಟ್ ಜಾಮೀನು ಮಂಜೂರು ಮಾಡಿದೆ BWSSB ಅಧಿಕಾರಿಯಾಗಿದ್ದ ಮಾಡಾಳ್ ಪ್ರಶಾಂತ್ ಬಿಲ್ಡರ್ ಕಚೇರಿಗೆ ಹೋಗಿದ್ದೇಕೆ ಎಂಬ ವಿಚಾರಗಳಿಗೆ ಮಾಡಾಳ್ ಪ್ರಶಾಂತ್ ತನಿಖೆಗೆ ಸಹಕರಿಸದೇ ಸಾಕ್ಷ್ಯ ಬಚ್ಚಿಟ್ಟಿದ್ದಾರೆ.

ತನಿಖೆಗೆ ಸಹಕರಿಸದ ಮಾಡಾಳ್ ಪ್ರಶಾಂತ್: ಲೋಕಾಯುಕ್ತ ದಾಳಿ ವೇಳೆ ಮಾಡಾಳ್ ಪ್ರಶಾಂತ್ ಚೀಟಿಯೊಂದನ್ನು ನುಂಗಲು ಯತ್ನಿಸಿದ್ದು, ಚೀಟಿ ಕಕ್ಕಿಸಿ ವಶಕ್ಕೆ ಪಡೆಯಲಾಗಿದೆ. ಕಸ್ಟಡಿಯಲ್ಲಿದ್ದಾಗಲೇ ತನಿಖೆಗೆ ಮಾಡಾಳ್ ಪ್ರಶಾಂತ್ ಸಹಕರಿಸಿಲ್ಲ. ಪ್ರಶಾಂತ್‌ಗೆ ಜಾಮೀನು ನೀಡಿದಾಗ ಸಹಕರಿಸುವ ಗ್ಯಾರಂಟಿ ಏನು ಎಂದು ಲೋಕಾಯುಕ್ತ ಎಸ್‌ಪಿಪಿ ಸಂತೋಷ್ ಎಸ್.ನಾಗರಾಳೆ ವಾದ ಮಾಡಿದ್ದಾರೆ. ಹಾಗಾಗಿ ಮಾಡಾಳ್ ಪ್ರಶಾಂತ್ ಜಾಮೀನು ಅರ್ಜಿ ತಿರಸ್ಕರಿಸಿ ನ್ಯಾ.ಬಿ.ಜಯಂತ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ರೋಟರಿ ಅಧ್ಯಕ್ಷರ ಆಯ್ಕೆ ತರಬೇತಿ ಕಾರ್ಯಾಗಾರ



ಮೈಸೂರು, ಏ.10– ರೋಟರಿ ಜಿಲ್ಲೆ 3192 ವತಿಯಿಂದ ಮೈಸೂರಿನ ಸಂದೇಶ್ ಪ್ರಿನ್ಸ್ ಹೋಟೆಲ್‌ನ ಸಭಾಂಗಣದಲ್ಲಿ ದೀಕ್ಷಾ ರೋಟರಿ ಅಧ್ಯಕ್ಷರ ಆಯ್ಕೆ ತರಬೇತಿ ಕಾರ್ಯಾಗಾರ ನಡೆಯಿತು. ಕಾರ್ಯಾಗಾರವನ್ನು ಮೈಸೂರಿನ ಹೆಸರಾಂತ ಉದ್ಯಮಿ ಹಾಗೂ ರೊ. ಆರ್.ಗುರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಸ್ವಾಗತವನ್ನು ರೊ.ಪ್ರಕಾಶ್ ಬೆಳವಾಡಿ ಮಾಡಿದರು. ರೋಟರಿ ಪದಾಧಿಕಾರಿಗಳಾದ ಜಿತೇಂದ್ರ ಅನೇಜಾ, ವಿ. ಶ್ರೀನಿವಾಸಮೂರ್ತಿ, ರೋಟರಿ ತರಬೇತಿದಾರ ಹಾಗೂ ಉದ್ಯಮಿ ಬಿ.ಎಲ್. ನಾಗೇಂದ್ರಪ್ರಸಾದ್, ರೋಟರಿ ಪದಾಧಿಕಾರಿಗಳಾದ ಚಂದ್ರಶೇಖರ ಪಾಟೀಲ್, ಕೆ.ಪಿ.ನಟೇಶ್, ಪ್ರಾಣೇಶ್, ಎಸ್. ನಾಗೇಂದ್ರ ಹಾಗೂ ಸಿ.ಎನ್. ಪಾಟೀಲ್ ಉಪಸ್ಥಿತರಿದ್ದರು.

ಸಮಾರಂಭವನ್ನು ಉದ್ಘಾಟಿಸಿದ ಆರ್.ಗುರು ಮಾತನಾಡಿ, ವಿಶ್ವದಲ್ಲಿ ರೋಟರಿ ಸಂಸ್ಥೆಯ 36 ಸಾವಿರಕ್ಕೂ ಹೆಚ್ಚು ಶಾಖೆಗಳಿವೆ. ಪೋಲಿಯೋ ನಿರ್ಮೂಲನದಲ್ಲಿ ರೋಟರಿ ಮಹತ್ವದ ಪಾತ್ರ ವಹಿಸಿದೆ. ಶಿಕ್ಷಣ, ಆರೋಗ್ಯ, ಸಮಾಜ ಸೇವೆ ಅದರಲ್ಲೂ ಅಂಗವಿಕಲರಿಗೆ ಉಪಕರಣಗಳನ್ನು ನೀಡುವುದು ಸೇರಿದಂತೆ ಮಹತ್ವದ ಪಾತ್ರ ವಹಿಸಿದೆ.

ರೋಟೇರಿಯನ್‌ಗಳು ಉತ್ತಮ ವ್ಯಕ್ತಿತ್ವವನ್ನು ಹೊಂದಿರುವ ವ್ಯಕ್ತಿಗಳನ್ನು ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಬೇಕು. ಇಂತಹ ಪದಾಧಿಕಾರಿಗಳು ಎಲ್ಲರಿಗೂ ಮಾದರಿಯಾಗಬೇಕು. ನೂರಕ್ಕೂ ಹೆಚ್ಚು ರೋಟೇರಿಯನ್‌ಗಳು ಈ ತರಬೇತಿ ಪಡೆಯುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ರೋಟರಿಯ ಧ್ಯೇಯಗಳು ಹಾಗೂ ಅದರ ಸಮಾಜ ಸೇವೆಗಳನ್ನು ಎಲ್ಲರಿಗೂ ತಲುಪುವಂತೆ ರೊಟೇರಿಯನ್‌ಗಳು ಶ್ರಮಿಸಬೇಕೆಂದು ಮನವಿ ಮಾಡಿದರು.

ಮೈಸೂರು, ಬೆಂಗಳೂರು, ಚಿಕ್ಕಬಳ್ಳಾಪುರ, ಮಂಡ್ಯ ಸೇರಿದಂತೆ ನೂರಕ್ಕೂ ಹೆಚ್ಚು ರೊಟೇರಿಯನ್‌ಗಳು ಹಾಗೂ ಪದಾಧಿಕಾರಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ. ನುರಿತ ತಜ್ಞರು ತರಬೇತಿ ನೀಡುತ್ತಿದ್ದಾರೆ.

ಕಾಂಗ್ರೆಸ್ ಹಿಂದುಳಿದ ಘಟಕಕ್ಕೆ ನೇಮಕ



ಮಂಡ್ಯ, ಏ.10– ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡ ಕೊತ್ತತ್ತಿ ಸಿದ್ದಪ್ಪ ಅವರನ್ನು ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡರಾದ ಸಿದ್ದಪ್ಪ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅನುಮೋದನೆ ಮೇರೆಗೆ ನೇಮಕ ಮಾಡಿ ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಆದೇಶ ಹೊರಡಿಸಿದ್ದಾರೆ.

ತೆಂಗಿನ ಸಸಿಗಳ ಮಾರಾಟ

ಮಂಡ್ಯ, ಏ.10– ತೋಟಗಾರಿಕೆ ಇಲಾಖೆ ವತಿಯಿಂದ ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿ ಹಾಗೂ ನರ್ಸರಿಗಳಲ್ಲಿ ತೆಂಗಿನ ಗಿಡಗಳು ಮಾರಾಟಕ್ಕೆ ಲಭ್ಯವಿದ್ದು, ಒಂದು ತೆಂಗಿನ ಗಿಡಕ್ಕೆ 40 ರೂ. ನಿಗದಿಪಡಿಸಲಾಗಿದೆ. ಆಸಕ್ತ ರೈತ ಬಾಂಧವರು ನೇರವಾಗಿ ಖರೀದಿಸಬಹುದಾಗಿದೆ ಖರೀದಿ ಸಮಯದಲ್ಲಿ ಪಹಣಿ ಮತ್ತು ಆಧಾರ್ ಕಾರ್ಡ್‌ಗಳನ್ನು ಕಡ್ಡಾಯವಾಗಿ ನೀಡುವಂತೆ ಪ್ರಕಟಣೆ ತಿಳಿಸಿದೆ.

ನಾನು ವರುಣಾದಿಂದ ಸ್ಪರ್ಧಿಸುವುದಿಲ್ಲ, ಅದು ಮುಗಿದ ಅಧ್ಯಾಯ

ಬೆಂಗಳೂರು: ನಾನು ವರುಣಾ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ, ಅದು ಮುಗಿದ ಅಧ್ಯಾಯ, ನಾನು ಕೇಳಿರೋದು ಚಾಮರಾಜನಗರ, ಗೋವಿಂದರಾಜ ನಗರ ಎಂದು ಸಚಿವ ವಿ. ಸೋಮಣ್ಣ ತಿಳಿಸಿದರು. ಚಾಮರಾಜನಗರ, ಗೋವಿಂದರಾಜನಗರದಲ್ಲಿ ಒಂದನ್ನು ಕೊಟ್ಟರೆ ಸ್ಪರ್ಧೆ ಮಾಡುತ್ತೇನೆ. ವರುಣಾದಿಂದ ಸ್ಪರ್ಧೆ ಇಲ್ಲ. ಇದು ಹೈಕಮಾಂಡ್‌ಗೆ ಕೂಡ ಗೊತ್ತಿದೆ. ಹೈಕಮಾಂಡ್ ಏನು ಮಾಡುತ್ತೋ ನೋಡೋಣ ಎಂದು ಹೇಳಿದರು.



ಬೇರೆಯವರ ಮಕ್ಕಳಿಗೆ ಟಿಕೆಟ್ ಕೊಟ್ಟರೆ ನನ್ನ ಮಗನಿಗೂ ಟಿಕೆಟ್ ಕೊಡಿ, ಸಾಕಷ್ಟು ನಾಯಕರ ಮಕ್ಕಳು ಟಿಕೆಟ್ ಕೇಳುತ್ತಿದ್ದಾರೆ. ಅದಕ್ಕೆ ನಾನು ಕೇಳಿದ್ದೀನಿ, ಕೇಳೋದ್ರಲ್ಲಿ ಏನು ತಪ್ಪಿಲ್ಲ. ಹೈಕಮಾಂಡ್ ನಾಯಕರ ಭೇಟಿ ಮಾಡಿದ್ದೀನಿ. ಯಾರ್‍ಯಾರಿಗೆ ಮನವರಿಕೆ ಮಾಡಬೇಕೋ ಅವರಿಗೆ ಮನವರಿಕೆ ಆಗಿದೆ. ಏನು ಮಾಡ್ತಾರೋ ನೋಡೋಣ. ನನ್ನ ಮಗನಿಗೂ ಕೊಡ್ತಾರಾ ನೋಡ್ತೀನಿ. ಬೇರೆಯವರಿಗೆ ಕೊಡೋದ್ರಿಂದ ನಾನು ಗುಬ್ಬಿಗೆ ಟಿಕೆಟ್ ಕೊಡಿ ಅಂತ ಕೇಳಿದ್ದೀನಿ ಎಂದರು.

ವಿಜಯೇಂದ್ರ ಅವರಿಗೆ ಟಿಕೆಟ್ ಕೊಡ್ತಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ವಿಜಯೇಂದ್ರ ಅಂತ ಪ್ರತ್ಯೇಕವಾಗಿ ಬೊಟ್ಟು ಮಾಡೋದು ಬೇಡ. ಎಲ್ಲಾ ನಾಯಕರ ಮಕ್ಕಳ ಲೆಕ್ಕದಲ್ಲಿ ನಾನು ಟಿಕೆಟ್ ಕೇಳಿದ್ದೀನಿ ಅಷ್ಟೇ ಎಂದು ತಿಳಿಸಿದರು.

ಪಿಹೆಚ್‌ಡಿ ವಿದ್ಯಾರ್ಥಿ ಆತ್ಮಹತ್ಯೆ

ಶ್ರೀರಂಗಪಟ್ಟಣ, ಏ.10– ಪಿಹೆಚ್‌ಡಿ ವಿದ್ಯಾರ್ಥಿಯೋರ್ವ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೆಆರ್‌ಎಸ್ ಹಿನ್ನೀರಿನ ಹೊಸ ಕನ್ನಂಬಾಡಿ ಗ್ರಾಮದ ವೇಣುಗೋಪಾಲಸ್ವಾಮಿ ದೇವಸ್ಥಾನದ ಬಳಿ ನಡೆದಿದೆ.

ಮೂಲತಃ ಕೊಳ್ಳೇಗಾಲ ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ನಿವಾಸಿ ಮುತ್ತಯ್ಯ ಎಂಬುವರ ಪುತ್ರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್‌ಡಿ ವಿದ್ಯಾರ್ಥಿ ಪ್ರಸಾದ್(32) ಆತ್ಮಹತ್ಯೆ ಮಾಡಿಕೊಂಡವರು. ಮೈಸೂರು ವಿವಿಯಲ್ಲಿ ಇತಿಹಾಸ ವಿಷಯದಲ್ಲಿ ಪಿಹೆಚ್‌ಡಿ ಮಾಡುತ್ತಿದ್ದ ಪ್ರಸಾದ್ ತಾಯಿ ಕಳೆದ 2 ವರ್ಷಗಳ ಹಿಂದೆ ನಿಧನರಾಗಿದ್ದರು. ಅಂದಿನಿಂದ ಪ್ರಸಾದ್ ತೀವ್ರ ಮನನೊಂದಿದ್ದರು. ಶನಿವಾರ ಸಂಜೆ ಪ್ರಸಾದ್ ಕೆಆರ್‌ಎಸ್ ಹಿನ್ನೀರಿನ ಹೊಸ ಕನ್ನಂಬಾಡಿ ಗ್ರಾಮದ ವೇಣುಗೋಪಾಲಸ್ವಾಮಿ ದೇವಸ್ಥಾನಕ್ಕೆ ಬಂದಿದ್ದರು. ಈ ವೇಳೆ ಸ್ನೇಹಿತನೋರ್ವ ಕರೆ ಮಾಡಿ ವಿಚಾರಿಸಲಾಗಿ ಸಂಜೆ ವೇಳೆಗೆ ಮೈಸೂರಿಗೆ ಬರುವುದಾಗಿ ತಿಳಿಸಿದ್ದರು. ಬಳಿಕ ಪ್ರಸಾದ್ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಈ ಸಂಬಂಧ ಸ್ನೇಹಿತರು ಕೆ.ಆರ್.ಸಾಗರ ಪೊಲೀಸರಿಗೆ ಮಾಹಿತಿ ನೀಡಿದ್ದರು. ಈ ಹಿನ್ನಲೆಯಲ್ಲಿ ಪೊಲೀಸರು ಕೆಆರ್‌ಎಸ್ ಹಿನ್ನೀರಿನ ಕಾವೇರಿ ನದಿ ಬಳಿ ಪ್ರಸಾದ್ ಬೈಕ್ ಹಾಗೂ ಚಪ್ಪಲಿ ಸಿಕ್ಕಿತ್ತು. ಬಳಿಕ ನದಿನಲ್ಲಿ ನುರಿತ ಈಜುಗಾರರ ನೆರವಿನಿಂದ ಶವಕ್ಕಾಗಿ ಪರಿಶೀಲನೆ ನಡೆಸಿದರೂ ಶವ ಪತ್ತೆಯಾಗಿರಲಿಲ್ಲ. ಸೋಮವಾರ ಬೆಳಗ್ಗೆ ನದಿಯಲ್ಲಿ ಪ್ರಸಾದ್ ಶವ ದೊರೆತಿದ್ದು, ಆತನ ಸಂಬಂಧಿಕರು ಶವವನ್ನು ಗುರುತಿಸಿ ದೂರು ನೀಡಿದ ಮೇರೆಗೆ ಕೆ.ಆರ್.ಸಾಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಏ. 10–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ. 13 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ದೂ. 0821–4259259 ಸಂಪರ್ಕಿಸಬಹುದು.

ಊಟಿಯಲ್ಲಿ ಏ.16ರಿಂದ ಜೀವನೋತ್ಸಾಹ ಶಿಬಿರ

ಮೈಸೂರು, ಏ. 10– ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 16 ರಿಂದ 23 ರವರೆಗೆ ಊಟಿಯಲ್ಲಿ ಸಾರ್ವಜನಿಕರಿಗಾಗಿ ಜೀವನೋತ್ಸಾಹ ಶಿಬಿರವನ್ನು ಏರ್ಪಡಿಸಲಾಗಿದೆ. ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸಗಳು, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ.

ಈ ಜೀವನೋತ್ಸಾಹ ಶಿಬಿರದ ಸಂದರ್ಭದಲ್ಲಿ ಪರ್ಯಾಯವಾಗಿ ಯುವಕರು ಮತ್ತು ಮಕ್ಕಳಿಗೂ ಪ್ರತ್ಯೇಕ ಶಿಬಿರಗಳನ್ನು ನಡೆಸಲು ಉದ್ದೇಶಿಸಲಾಗಿದೆ. ವಯಸ್ಕರ ಶಿಬಿರಕ್ಕೆ ಕನಿಷ್ಠ 50 ಶಿಬಿರಾರ್ಥಿಗಳು, ಯುವಕರು ಮತ್ತು ಮಕ್ಕಳ ಶಿಬಿರಗಳಿಗೆ ಕನಿಷ್ಠ 30 ಶಿಬಿರಾರ್ಥಿಗಳು ನೋಂದಾಯಿಸಿದರೆ ಶಿಬಿರಗಳ ವ್ಯವಸ್ಥೆ ಮಾಡಲಾಗುವುದು. ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಿ. ರಾಜೇಶ್ ಅವರನ್ನು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದಲ್ಲಿ ನೇರವಾಗಿ ಅಥವಾ 0821–2548212, Extn. 223/224 ದೂರವಾಣಿ ಅಥವಾ ಮೊ: 9964141560 ಮೂಲಕ ಹಾಗೂ ಶಿಬಿರದ ಸಂಚಾಲಕರಾದ ಎಚ್.ಕೆ. ಬಸವಣ್ಣ (9489044575), ಎಸ್.ಹೇಮಂತಕುಮಾರ್ (9343582337) ಎನ್.ಎಂ.ಶಿವಕುಮಾರ್ (9448280666) ಮತ್ತು ಸೋಮಶೇಖರ ಬಸವರಾಜ ಮಗದುಂ (9448111244)ಅವರನ್ನು ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ. www.jssonline.org ಯಿಂದ ವಿವರ ಪಡೆಯಬಹುದು. ಇ–ಮೇಲ್ (jsspublications @gmail.com) ಮೂಲಕವೂ ನೊಂದಾಯಿಸಿಕೊಳ್ಳಬಹುದಾಗಿದೆ.

ನಂದಿನಿ ನಮ್ಮವಳು, ನಮ್ಮ ಹಾಲು ನಮ್ಮ ಬದುಕು

ನಂದಿನಿ ಉತ್ಪನ್ನಗಳನ್ನು ಖರೀದಿಸುವ ಮೂಲಕ ಅಮುಲ್‌ಗೆ ಡಿಕೆಶಿ ವಿರೋಧ

ಹಾಸನ: ಕನ್ನಡಿಗರ ಅಸ್ಮಿತೆಯಾದ ನಂದಿನಿ ಹಾಲು ಮತ್ತು ನಂದಿನಿ ಹಾಲಿನ ಉತ್ಪನ್ನಗಳನ್ನು ಬದಿಗೆ ತಳ್ಳಿ ಗುಜರಾತ್ ಮೂಲದ ಅಮುಲ್ ಹಾಲು ಕರ್ನಾಟಕದಲ್ಲಿ ಪಾರುಪತ್ಯ ಸ್ಥಾಪಿಸಲು ನೋಡುತ್ತಿದೆ. ಇದಕ್ಕೆ ಬಿಜೆಪಿ ಸರ್ಕಾರ ಸಹಕಾರ ನೀಡುತ್ತಿದೆ ಎಂದು ಪ್ರತಿಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ನಾಯಕರು ಹಾಗೂ ಜನಸಾಮಾನ್ಯರ ಒಂದು ವರ್ಗ ಭಾರೀ ವಿರೋಧ ವ್ಯಕ್ತಪಡಿಸುತ್ತಿದೆ.



ನಂದಿನಿ ವರ್ಸಸ್ ಅಮುಲ್ ಕುರಿತಂತೆ ಸೋಷಿಯಲ್ ಮೀಡಿಯಾದಲ್ಲಿ ಭಾರೀ ಜಟಾಪಟಿ ನಡೆಯುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ ಸೇರಿದಂತೆ ಸರ್ಕಾರದ ಸಚಿವರುಗಳು ಸ್ಪಷ್ಟನೆ ನೀಡಿದರೂ ವಿರೋಧ ಪಕ್ಷದ ನಾಯಕರು ಕೇಳುವ ಸ್ಥಿತಿಯಲ್ಲಿಲ್ಲ. ಇಂದು ಹಾಸನದ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟ ಕೇಂದ್ರವೊಂದಕ್ಕೆ ಭೇಟಿ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಖರೀದಿಸಿ ಅಮುಲ್‌ಗೆ ವಿರೋಧ ವ್ಯಕ್ತಪಡಿಸಿದರು.



ಕರ್ನಾಟಕದ ಹಾಲು ಉತ್ಪಾದಕರ ಪ್ರಶ್ನೆ: ಡಿ.ಕೆ.ಶಿವಮಕುಮಾರ್ ಹಾಲು, ತುಪ್ಪ, ಮಜ್ಜಿಗೆ, ಮೈಸೂರು ಪಾಕ್ ಸೇರಿ ಎರಡೂವರೆ ಸಾವಿರ ಮೌಲ್ಯದ ನಂದಿನಿ ಉತ್ಪನ್ನ ಖರೀದಿಸಿದರು. ನಂತರ ಅವುಗಳನ್ನು ಸ್ಥಳದಲ್ಲಿದ್ದವರಿಗೆ ಹಂಚಿದ್ದಾರೆ. ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ನಂದಿನಿ ಅಳಿವು–ಉಳಿವಿನ ಪ್ರಶ್ನೆಯಾಗಿದೆ. ಹಾಗೇ ಕರ್ನಾಟಕದ ಹಾಲು ಉತ್ಪಾದಕರ ಪ್ರಶ್ನೆಯಾಗಿದೆ. ನಂದಿನಿ ಉಳಿಸಿಕೊಳ್ಳೋದು ಕರ್ನಾಟಕ ರೈತರ ಬದುಕಿನ ಪ್ರಶ್ನೆಯಾಗಿದೆ ಎಂದರು.

ಸುಮಾರು 80 ಲಕ್ಷ ರೈತರು ಹಾಲು ಉತ್ಪಾದನೆ ಮಾಡುತ್ತಾರೆ. ಎಲ್ಲರೂ ಕೆಎಂಎಫ್ ಹಾಲು ಒಕ್ಕೂಟಕ್ಕೆ ಹಾಲು ಹಾಕುತ್ತಾರೆ, ರೈತರು ಕಟ್ಟಿದ ನಂದಿನಿ ಇದು. ಲೀಟರ್‌ಗೆ 27–28 ರೂ ಕೊಡುತ್ತಾರೆ. ಸರ್ಕಾರ 5 ರೂಪಾಯಿ ಸಹಾಯಧನ ಕೊಡುತ್ತಿದೆ. ಅಮುಲ್ ಗುಜರಾತ್‌ನದ್ದು, ಅದು ಕೂಡ ರೈತರದ್ದು ನಮ್ಮದೇನು ತಕರಾರಿಲ್ಲ. ಆದರೆ ನಮ್ಮನ್ನು ಹಿಂದಕ್ಕೆ ಹಾಕಿ, ಅದನ್ನು ಮುಂದೆ ಮಾಡುತ್ತಿರೋದು ಸರ್ಕಾರದ ಕ್ರಮ ಸರಿಯಿಲ್ಲ. ನಂದಿನಿ ನಮ್ಮವಳು, ನಮ್ಮ ಹಾಲು ನಮ್ಮ ಬದುಕು ಎಂದು ಹೇಳಿದರು.

ನಮ್ಮ ರೈತರು ಬೆಲೆ ಏರಿಕೆ ನಡುವೆ ಹಾಲು ಉತ್ಪಾದನೆ ಮಾಡುತ್ತಾರೆ ಅವರಿಗೆ ಸರ್ಕಾರ ಏನೂ ಸಹಾಯ ಮಾಡಿಲ್ಲ. ನಮ್ಮ ಹಾಲನ್ನೇ ಮಾರಾಟ ಮಾಡಲು ಅಗುತ್ತಿಲ್ಲ. ಹಾಗಾಗಿ ನಾವೇ ಪ್ರೋತ್ಸಾಹ ಕೊಟ್ಟು ಹಾಲು ಉತ್ಪಾದನೆ ಮಾಡಬೇಕು. ಹಾಲಿನ ಉತ್ಪನ್ನಗಳಾದ ಮೈಸೂರು ಪಾಕ್, ಪೇಡಾ, ಬಿಸ್ಕೆಟ್, ಚಾಕಲೇಟ್‌ನ್ನು ಪಕ್ಷದ ಅಧ್ಯಕ್ಷನಾಗಿ ಖರೀದಿ ಮಾಡಿದ್ದೇನೆ. ನಮ್ಮ ರೈತರನ್ನು ಉಳಿಸಿಕೊಳ್ಳಬೇಕು, ನಮ್ಮ ನಂದಿನಿಯನ್ನು ಉಳಿಸಿಕೊಳ್ಳಬೇಕು ಎಂದು ಕರೆ ನೀಡಿದರು.



ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ಯಶಸ್ವಿಯಾಗಿ ತರಬೇತಿ ಮುಗಿಸಿ ಮುಖ್ಯವಾಹಿನಿ ಶಾಲೆಯಲ್ಲಿ ಶಿಕ್ಷಣ ಮುಂದುವರಿಸಲು ಯೋಗ್ಯ ಮಕ್ಕಳಾದ ಋತುರಾಜ ಗೌಡ, ಗೌತಮ್, ವಿನಯ್, ಅನನ್ಯ ಹರಿ, ವೇದಾಂತ್, ಅನ್ವಿತ್, ನೇಹಾ, ದರ್ಶನ್, ಕೀರ್ತನ, ಮುಸ್ಕಾನ್, ಫೈಸಲ್ ಮೊಹಮ್ಮದ್ ಅವರನ್ನು ಅಭಿನಂದಿಸಿ ಶುಭ ಕೋರಲಾಯಿತು. ಚಿತ್ರದಲ್ಲಿ ಶಿಕ್ಷಕಿಯರು, ಶ್ರವಣದೋಷ ಮಕ್ಕಳು ಹಾಗೂ ತಾಯಂದಿರು ಇದ್ದಾರೆ.

ಗೇಲ್ ಪೈಪ್‌ಲೈನ್ ಗ್ಯಾಸ್, ಸಿಎನ್‌ಜಿ ಬೆಲೆ ಕಡಿತ; ಪ್ರತಿ ಯೂನಿಟ್‌ಗೆ 7 ರೂ. ಇಳಿಕೆ

ಬೆಂಗಳೂರು: ಹೊಸ ದೇಶೀಯ ಅನಿಲ ಬೆಲೆಯ ಪ್ರಯೋಜನಗಳನ್ನು ಗ್ರಾಹಕರಿಗೆ ವರ್ಗಾಯಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ, ಗೇಲ್ ಗ್ಯಾಸ್ ಲಿಮಿಟೆಡ್ ತನ್ನ ಬೆಲೆ ಕಡಿತ ಮಾಡಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳು ಮತ್ತು ದಕ್ಷಿಣ ಕನ್ನಡದಲ್ಲಿ ಗೇಲ್ ಕಂಪನಿಯು ತನ್ನ ಡೊಮೆಸ್ಟಿಕ್ (ಗೃಹಬಳಕೆ) ಪೈಪ್ಡ್ ನ್ಯಾಚುರಲ್ ಗ್ಯಾಸ್ ಮತ್ತು ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (ಸಿಎನ್‌ಜಿ) ಬೆಲೆಗಳನ್ನು ಪ್ರತಿ ಯೂನಿಟ್‌ಗೆ 7 ರೂ.ಗಳಷ್ಟು ಕಡಿತಗೊಳಿಸುವುದಾಗಿ ಭಾನುವಾರ ಪ್ರಕಟಿಸಿದೆ.

ಪರಿಷ್ಕೃತ ಬೆಲೆಗಳು ಭಾನುವಾರದಿಂದಲೇ ಜಾರಿಗೆ ಬಂದಿದ್ದು, ಪ್ರತಿ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್‌ಗೆ(ಎಸ್‌ಸಿಎಂ) ಪಿಎನ್‌ಜಿಗೆ 51.50 ಮತ್ತು ಸಿಎನ್‌ಜಿಗೆ ಕೆಜಿಗೆ 82.50 ರೂ. ಹೊಸ ಮಾರ್ಗಸೂಚಿಗಳು ಗ್ರಾಹಕರಿಗೆ ಸ್ಥಿರವಾದ ಬೆಲೆ ವ್ಯವಸ್ಥೆಯನ್ನು ಸ್ಥಾಪಿಸುವ ಗುರಿಯನ್ನು ಹೊಂದಿವೆ. ಸಿಎನ್‌ಜಿ ಮತ್ತು ಪಿಎನ್‌ಜಿಯನ್ನು ಆದ್ಯತೆಯ ಇಂಧನವಾಗಿ ಬಳಸುವುದರಿಂದ ಇಂಗಾಲದ ಹೆಜ್ಜೆ ಗುರುತನ್ನು ಕಡಿಮೆ ಮಾಡಲು ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಭಾಷೆಯಲ್ಲೂ CRPF ಪರೀಕ್ಷೆ ಬರೆಯಲು ಅವಕಾಶ ನೀಡಿ

ಬೆಂಗಳೂರು: ಕನ್ನಡ ಭಾಷೆಯಲ್ಲೂ ಸಿಆರ್‌ಪಿಎಫ್ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಪ್ರಧಾನಿ ನರೇಂದ್ರಮೋದಿ ಅವರನ್ನು ಮಾಜಿ ಸಿಎಂ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಿದ್ದ ರಾಮಯ್ಯ, ಕೇಂದ್ರ ಮೀಸಲು ಪೊಲೀಸ್ ಪಡೆಯ ನೇಮಕಾತಿ ಪರೀಕ್ಷೆಯಲ್ಲಿ ಭಾಷೆಯ ಸಮಸ್ಯೆಯಿಂದಾಗಿ ಜ್ಞಾನ, ಅರ್ಹತೆ ಇರುವ ಕನ್ನಡಿಗರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಪ್ರಧಾನಿ ಮೋದಿ ಅವರು ಕೂಡಲೇ ಮಧ್ಯಪ್ರವೇಶಿಸಿ ಈ ಅನ್ಯಾಯವನ್ನು ಸರಿಪಡಿಸಬೇಕು ಎಂದು ವಿಪಕ್ಷ ನಾಯಕರಾದ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.



ಕೇಂದ್ರ ಮೀಸಲು ಪೊಲೀಸ್ ಪಡೆಯ ನೇಮಕಾತಿ ಪರೀಕ್ಷೆಯನ್ನು ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬರೆಯುವುದನ್ನು ಕಡ್ಡಾಯಗೊಳಿಸಿರುವುದನ್ನು ತಕ್ಷಣ ಸಡಿಲಿಸಿ, ಕನ್ನಡ ಭಾಷೆಯಲ್ಲಿಯೂ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟು ಈ ಅನ್ಯಾಯವನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ. ಭಾಷೆಯೇ ಜ್ಞಾನ ಅಲ್ಲ, ಅದು ಜ್ಞಾನದ ಸಂವಹನ ಸಾಧನ ಅಷ್ಟೇ. ಕನ್ನಡ ಭಾಷಾ ಮಾಧ್ಯಮದಲ್ಲಿ ಓದಿದ ನಮ್ಮ ಯುವಜನರು ಜ್ಞಾನಿಗಳಾಗಿದ್ದರೂ ಭಾಷೆಯ ಸಮಸ್ಯೆಯಿಂದಾಗಿ ಕೇಂದ್ರ ಸರ್ಕಾರ ನಡೆಸುವ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ. ಇದು ಅನ್ಯಾಯ ಎಂದು ದೂರಿದ್ದಾರೆ. ಅಲ್ಲದೆ ರಾಜ್ಯದ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದಾಗಿ ರಾಜ್ಯದಲ್ಲಿ ಮತ್ತು ಕೇಂದ್ರದ ಬಿಜೆಪಿ ಸರ್ಕಾರದ ಭಾಷಾ ನೀತಿಯಿಂದಾಗಿ ಕೇಂದ್ರದಲ್ಲಿ ಕನ್ನಡಿಗ ಯುವಜನರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಇದರಿಂದ ರಾಜ್ಯದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಾಗುತ್ತಿದೆ, ಯುವಜನರ ಭವಿಷ್ಯ ಮಂಕಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯ ಭಾಷೆಗಳನ್ನು ಮೂಲೆಗೆ ತಳ್ಳಿ ಹಿಂದಿ ಭಾಷೆಯನ್ನು ನಮ್ಮ ತಲೆ ಮೇಲೆ ಹೇರುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಉದ್ಯಮ, ಉದ್ಯೋಗ, ಶಿಕ್ಷಣ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹಿಂದಿ ಭಾಷೆಯ ಯಜಮಾನಿಕೆ ಹೆಚ್ಚಾಗುತ್ತಿದೆ. ಇದನ್ನು ಸಹಿಸಲು ಸಾಧ್ಯ ಇಲ್ಲ ಎಂದು ಎಚ್ಚರಿಸಿದ್ದಾರೆ. ಅಂತೆಯೇ ಈಗಲೂ ಕಾಲ ಮಿಂಚಿಲ್ಲ ಪ್ರಧಾನಿ ನರೇಂದ್ರ ಮೋದಿ ಅವರು ತಕ್ಷಣ ಮಧ್ಯೆ ಪ್ರವೇಶಿಸಿ ಸಿಆರ್‌ಪಿಎಫ್ ಪರೀಕ್ಷೆಗಳನ್ನು ಕನ್ನಡವೂ ಸೇರಿದಂತೆ ರಾಜ್ಯ ಭಾಷೆಗಳಲ್ಲಿ ಬರೆಯಲು ಅನುಕೂಲ ಮಾಡಿಕೊಡಬೇಕು. ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮತ್ತು ಬಿಜೆಪಿ ಸಂಸದರು ಇದಕ್ಕಾಗಿ ಪ್ರಧಾನಿಗಳ ಮೇಲೆ ಒತ್ತಡ ಹೇರಬೇಕು ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಸಿಆರ್‌ಪಿಎಫ್ ನೇಮಕಾತಿಗೆ ಸ್ಥಳೀಯ ಭಾಷೆಯಲ್ಲಿಯೇ ಮರುಪರೀಕ್ಷೆ

ಬೆಂಗಳೂರು: ಕೇಂದ್ರೀಯ ಮೀಸಲು ರಕ್ಷಣಾ ಪಡೆ (ಸಿಆರ್‌ಪಿಎಫ್) ನೇಮಕಾತಿ ಪರೀಕ್ಷೆಯನ್ನು ಸ್ಥಳೀಯ ಭಾಷೆಯಲ್ಲಿ ಬರೆಯಲು ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸದ ಅಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿರುವ ಜೆಡಿಎಸ್, ಮರು ಪರೀಕ್ಷೆ ನಡೆಸಬೇಕು ಎಂದು ಸೋಮವಾರ ಒತ್ತಾಯಿಸಿದೆ.

ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದು, ಕೇಂದ್ರ ಸರ್ಕಾರ ಮತ್ತೊಮ್ಮೆ ಕನ್ನಡಿಗರಿಗೆ ಮೋಸ ಮಾಡಿದೆ. ಸಿಆರ್‌ಪಿಎಫ್‌ಗೆ ಭಾನುವಾರ ನಡೆದ ಕಂಪ್ಯೂಟರ್ ಪರೀಕ್ಷೆಯಲ್ಲಿ ಸ್ಥಳೀಯ ಭಾಷೆಗೆ ಅವಕಾಶವಿರಲಿಲ್ಲ. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರ ಪರೀಕ್ಷೆಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆ. ಇದು ಅತ್ಯಂತ ಖಂಡನೀಯ ಎಂದು ಹೇಳಿದರು.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, 9212 ಹುದ್ದೆಗಳಿಗೆ ಈ ಪರೀಕ್ಷೆ ನಡೆಸಲಾಗಿದ್ದು, ಅದರಲ್ಲಿ ಕರ್ನಾಟಕದ 466 ಹುದ್ದೆಗಳೂ ಸೇರಿವೆ. ದುರಂತವೆಂದರೆ, ಇಷ್ಟು ಹುದ್ದೆಗಳನ್ನು ಬಯಸುವ ಅಭ್ಯರ್ಥಿಗಳು ಹಿಂದಿ, ಇಂಗ್ಲಿಷ್‌ನಲ್ಲಿ ಪರೀಕ್ಷೆ ಬರೆದಿದ್ದಾರೆ. ಈ ಭಾಷೆಯಲ್ಲೇ ಬರೆಯುವ ಅನಿವಾರ್ಯ ಸೃಷ್ಟಿಸಲಾಗಿದೆ. ಮಾತೃಭಾಷೆಯಲ್ಲಿ ಬರೆಯುವುದನ್ನು ನಿರಾಕರಿಸುವುದು ಎಂದರೆ ಸಂವಿಧಾನಕ್ಕೆ ಎಸಗಿದ ಅಪಚಾರ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರ ತನ್ನ ಸುಪರ್ದಿಯಲ್ಲಿ ನಡೆಸುವ ಎಲ್ಲ ನೇಮಕಾತಿ ಪರೀಕ್ಷೆಗಳನ್ನು ಹಿಂದಿ, ಇಂಗ್ಲಿಷಿನಲ್ಲೇ ನಡೆಸುತ್ತಿದೆ.




ಕೇವಲ ಹಿಂದಿ ಕೇಂದ್ರಿತ ನೇಮಕಾತಿ ಪ್ರಕ್ರಿಯೆ ಇತರೆ ಭಾಷಿಕರನ್ನು ಉದ್ಯೋಗ ವಂಚಿತರನ್ನಾಗಿಸುವುದು ಮಾತ್ರವಲ್ಲ, ಅನ್ಯಭಾಷೆಗಳನ್ನು ಹತ್ತಿಕ್ಕಿ ಹಿಂದಿ ಹೇರಿಕೆ ಮಾಡುವುದಷ್ಟೇ ದುರುದ್ದೇಶ. ಇದು ಸ್ಪಷ್ಟ ಎಂದಿದ್ದಾರೆ. ಈ ಪರೀಕ್ಷೆಯಲ್ಲಿ ಅನೇಕ ಪ್ರಶ್ನೆಗಳು ಹಿಂದಿ ಭಾಷೆಗೆ ಸಂಬಂಧಿಸಿದವು. ಅಲ್ಲಿಗೆ, ಹಿಂದಿಯೇತರ ಅಭ್ಯರ್ಥಿಗಳು ಈ ನೇಮಕಾತಿಯಲ್ಲಿ ಆಯ್ಕೆ ಆಗಲೇ ಬಾರದು ಎಂದು, ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಲಾಗಿದೆ. ಒಕ್ಕೂಟ ವ್ಯವಸ್ಥೆಗೆ ಇದು ಕೇಂದ್ರವೇ ಕೊಟ್ಟ ಮಾರಣಾಂತಿಕ ಪೆಟ್ಟು, ತಮ್ಮ ರಾಜ್ಯಗಳಲ್ಲಿ ಉದ್ಯೋಗ ಪಡೆಯಲು ಅನ್ಯಭಾಷೆಯಲ್ಲಿ ಪರೀಕ್ಷೆ ಬರೆಯಬೇಕಾದ ಕರ್ಮ ದಕ್ಷಿಣ ಭಾರತ ರಾಜ್ಯಗಳ ಜನರದ್ದು. ಕನ್ನಡಿಗರೂ ಸೇರಿ ದಕ್ಷಿಣದ ಎಲ್ಲ ಭಾಷಿಕರು ಈ ಬಗ್ಗೆ ವಿರೋಧ ಮಾಡುತ್ತಲೇ ಇದ್ದರೂ ಕೇಂದ್ರ ಸರ್ಕಾರ ಹಿಂದಿ ಹೇರಿಕೆಯನ್ನು ಮುಂದುವರಿಸಿದೆ ಎಂದು ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮುಲಾಜಿಲ್ಲದೆ ಸಿಆರ್‌ಪಿಎಫ್ ನೇಮಕಾತಿಯ ಮರು ಪರೀಕ್ಷೆ ನಡೆಸಬೇಕು ಹಾಗೂ ಕನ್ನಡ ಸೇರಿ ದೇಶದ ಎಲ್ಲ ಭಾಷೆಗಳಲ್ಲೂ ಬರೆಯಲು ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕು ಎಂದರು.

ಮಕ್ಕಳಲ್ಲಿ ಸದ್ಗುಣ ಬೆಳೆಯಲು ಅವರಲ್ಲಿ ಧಾರ್ಮಿಕ ಅರಿವು ಮೂಡಿಸಬೇಕು

ಚಂಡೆ ಮೇಳ ಕಲಾ ಸಂಘದ ಅಧ್ಯಕ್ಷ ಚಂದ್ರಶೇಖರ್ ಸಲಹೆ



ಮೈಸೂರು, ಏ. 10– ಗುಡಿಯೊಳಗಿನ ದೇವರಲ್ಲಿನ ನಂಬಿಕೆಯಂತೆ ದೇಹದ ಆತ್ಮದೊಳಗಿನ ನಂಬಿಕೆಯು ಪವಿತ್ರವಾದದ್ದು. ಧಾರ್ಮಿಕ ಆಚರಣೆಗಳಲ್ಲಿ ಪರಿಶುದ್ಧತೆ ಅವಶ್ಯ. ಮಕ್ಕಳಿಗೆ ಶಿಕ್ಷಣದ ಆವಶ್ಯಕತೆಯಂತೆ ಧಾರ್ಮಿಕತೆಯ ಅರಿವು ಮೂಡಿಸುವ ಕಾರ್ಯವಾಗಬೇಕು ಎಂದು ಚಂಡೆ ಮೇಳ ಕಲಾಸಂಘದ ಅಧ್ಯಕ್ಷ ಚಂದ್ರಶೇಖರ್ ಹೇಳಿದರು.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಉಡುಪಿ ಶ್ರೀ ಕೃಷ್ಣ ಮಂದಿರದಲ್ಲಿ ಚಂಡೆ ಮೇಳ ಕಲಾಸಂಘದ ವತಿಯಿಂದ ಹತ್ತು ದಿನಗಳ ಕಾಲ ನಿರಂತರವಾಗಿ, 12 ವರ್ಷದ ಒಳಗಿನ ಮಕ್ಕಳಿಗೆ ನಡೆದ ಉಚಿತ ಧಾರ್ಮಿಕ ಶಿಕ್ಷಣ ಶಿಬಿರದ ಸಮಾರೋಪ ಸಮಾರಂಭದಲ್ಲಿ ಗುರುಗಳಿಗೆ ಗುರುಕಾಣಿಕೆ ಹಾಗೂ ಭಗವದ್ಗೀತಾ ಪುಸ್ತಕ ನೀಡಿ ಗುರುವಂದನೆ ಸಲ್ಲಿಸಿ, ಧಾರ್ಮಿಕ ಪ್ರವಚನ ನೀಡಿ ಮಾತನಾಡಿದರು. ಹಿಂದೂ ಧರ್ಮ ಶ್ರೇಷ್ಠವಾದದ್ದು. ಮಕ್ಕಳಲ್ಲಿ ಧಾರ್ಮಿಕತೆಯ ವಾಸ್ತವದ ವಿಚಾರಗಳ ಅರಿವಿನ ಕೊರತೆಯಿಂದ, ಧರ್ಮಕ್ಕೆ ಹಿನ್ನಡೆಯಾಗುತ್ತಿದೆ. ಹಿಂದೆ ವೃದ್ಧಾಶ್ರಮಗಳಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಜನತೆಯಲ್ಲಿ ಸಂಸ್ಕಾರ ಹಾಗೂ ಜೀವನ ಮೌಲ್ಯಗಳ ಕೊರತೆಯಿಂದಾಗಿ ಹಿರಿಯರ ಬಗ್ಗೆ ಗೌರವವಿಲ್ಲದೆ. ಇದರ ಪರಿಣಾಮ ಹಿರಿಯರನ್ನು ವೃದ್ಧಾಶಮಕ್ಕೆ ಸೇರಿಸುತ್ತಿರುವುದು ವಿಷಾದನೀಯ. ದೇವಸ್ಥಾನಗಳು ಕೇವಲ ಪೂಜೆ ಹಾಗೂ ಧಾರ್ಮಿಕ ಆಚರಣೆಗಳಿಗೆ ಸಿಮೀತವಾಗದೆ, ಸಾಮಾಜಿಕ ಕ್ಷೇತ್ರಗಳ ಅಭಿವೃದ್ಧಿಯ ಚಟುವಟಿಕೆಗಳೊಂದಿಗೆ ಸಮಾಜದ ಕುಂದು ಕೊರತೆಗಳಿಗೆ ಸ್ಪಂದಿಸುವ ಕೇಂದ್ರಗಳಾಗಬೇಕು ಎಂದು ಹೇಳಿದರು.

ವಿಶೇಷವಾಗಿ ಧಾರ್ಮಿಕ ಶಿಕ್ಷಣ ಶಿಬಿರದಲ್ಲಿ 150ಮಕ್ಕಳಿಗೆ ಸಂಧ್ಯಾವಂದನೆ, ದೇವರ ಪೂಜೆ, ಸ್ತೋತ್ರ, ಸುಕ್ತಾದಿಗಳ ಪಾಠಗಳು ವಿಷ್ಣು ಸಹಸ್ರನಾಮ, ಹಾಗೂ ಹೆಣ್ಣು ಮಕ್ಕಳಿಗೆ ಭಜನೆ ಲಕ್ಷ್ಮಿ ಶೋಭಾನ, ಧಾರ್ಮಿಕ ವಿಧಿಗಳ ಆಚರಣೆ ಬಗ್ಗೆ ಶಿಕ್ಷಣ ನೀಡಲಾಯಿತು, ವಿಶೇಷವಾಗಿ ಕರಾವಳಿಯ ಪ್ರಸಿದ್ಧವಾದ ಚೆಂಡೆಯನ್ನು ಕಲಿಸಿಕೊಡಲಾಯಿತು, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಡಾ. ಚಕ್ರಪಾಣಿ, ಸುಚಿತ್ರ, ವಿಘ್ನೇಶ್ವರ ಭಟ್, ಚೇತನ್, ನಾಗಶ್ರೀ, ಚಿತ್ರ, ರಾಮಕೃಷ್ಣರಾವ್, ಗುರುರಾಜ್, ಕುಶಾಲ್ ರಾವ್ ,ಕಾರ್ತಿಕ್ ರಾವ್, ಸುದರ್ಶನ್ ರಾವ್, ಪ್ರಜ್ವಲ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಶಿಕ್ಷಣದಿಂದ ಮಾತ್ರ ಉತ್ತಮ ಭವಿಷ್ಯ: ಡಿ.ಟಿ.ಪ್ರಕಾಶ್

ಮೈಸೂರು, ಏ. 10– ಪಾಲಕರು ತಮ್ಮ ಮಕ್ಕಳು ಎಲ್ಲದರಲ್ಲೂ ಅತ್ಯುತ್ತಮರಾಗಬೇಕೆಂದು ಕನಸು ಕಟ್ಟಿಕೊಂಡಿರುತ್ತಾರೆ. ಅವರ ಕನಸು ನನಸು ಮಾಡಲು ವಿದ್ಯಾರ್ಥಿಗಳು ನಿರಂತರ ಅಧ್ಯಯನ, ಕಠಿಣ ಪರಿಶ್ರಮಪಡಬೇಕು. ಜೀವನದಲ್ಲಿ ಉತ್ತಮ ಸಾಧನೆ ಮಾಡಿದರೆ ಉಜ್ವಲ ಭವಿಷ್ಯ ಕಾಣಲು ಸಾಧ್ಯವಾಗುತ್ತದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹೇಳಿದರು.



ವಿದ್ಯಾರಣ್ಯಪುರಂನಲ್ಲಿರುವ ವಿದ್ಯಾರಣ್ಯ ಟ್ರಸ್ಟ್ ಹಾಗೂ ವಿದ್ಯಾರಣ್ಯ ಕೋಚಿಂಗ್ ಸೆಂಟರ್ 10ನೇ ವರ್ಷದ ವಾರ್ಷಿಕೋತ್ಸವ ಹಾಗೂ 2023–24ನೇ ಸಾಲಿನ ಶೈಕ್ಷಣಿಕ ಪ್ರವಾಸದ ಪ್ರಾರಂಭದಲ್ಲಿ ಮಕ್ಕಳಿಗೆ ಟಿ–ಶರ್ಟ್ ಹಾಗೂ ನೋಟ್‌ಬುಕ್, ಲೇಖನಿ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಅವರು, ಆಸ್ತಿ, ಅಧಿಕಾರ ಹಾಗೂ ಅಂತಸ್ತನ್ನು ಕಸಿದುಕೊಳ್ಳಬಹುದು. ಆದರೆ ನಾವು ಪಡೆದಿರುವ ವಿದ್ಯೆಯನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ಅದಕ್ಕಾಗಿ ಮಕ್ಕಳಿಗೆ ಆತ್ಮ ವಿಶ್ವಾಸ ಮೂಡಿಸುವಂತಹ ಶಿಕ್ಷಣವನ್ನು ನೀಡಿ ಎಂದು ಹೇಳಿದರು. ಹಿರಿಯ ಸಮಾಜ ಸೇವಕರಾದ ಕೆ.ರಘುರಾವ್ ವಾಜಪೇಯಿ ಮಾತನಾಡಿ, ಮಕ್ಕಳಿಗೆ ಒಳ್ಳೆಯ ವಿದ್ಯೆ, ಸಂಸ್ಕಾರ ನೀಡುವುದು ಪಾಲಕರ ಕರ್ತವ್ಯವಾಗಿದ್ದಂತೆ, ಗುರುಗಳಾದವರು ಮಕ್ಕಳ ಅಜ್ಞಾನವನ್ನು ತಿದ್ದಿ ಸುಜ್ಞಾನಿಗಳನ್ನಾಗಿ ಮಾಡುವುದು ಜವಾಬ್ದಾರಿಯಾಗಿದೆ. ಅದಕ್ಕಾಗಿ ಸಮಾಜದಲ್ಲಿರುವ ಎಲ್ಲ ವ್ಯಕ್ತಿಗಳು ಮಕ್ಕಳು ತಪ್ಪುಗಳನ್ನು ಮಾಡದಂತೆ ತಿಳುವಳಿಕೆ ನೀಡಬೇಕು. ವಿದ್ಯೆ ಸಂಸ್ಕಾರ ಕೊಡುವುದು ಎಲ್ಲರ ಜವಾಬ್ದಾರಿಯಾಗಿದ್ದು, ನೈತಿಕ ಶಿಕ್ಷಣ ಹಾಗೂ ಜವಾಬ್ದಾರಿ ನಿರ್ವಹಿಸುವ ಕಲೆಯನ್ನು ಕಲಿಸಿಕೊಡಬೇಕು ಎಂದು ಕಿವಿಮಾತು ಹೇಳಿದರು. ನಗರಪಾಲಿಕ ಸದಸ್ಯ ಮಾ.ವಿ. ರಾಮ್ ಪ್ರಸಾದ್, ಮನೋರೋಗ ತಜ್ಞರಾದ ಡಾ. ರೇಖಾ ಮನಃಶಾಂತಿ, ಸಮಾಜ ಸೇವಕರಾದ ಡಾ. ಚಕ್ರಪಾಣಿ, ವಿದ್ಯಾರಣ್ಯ ಟ್ರಸ್ಟ್ ಅಧ್ಯಕ್ಷ ಡಾ. ಜಿ ವಿ ರವಿಶಂಕರ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

ರಾಜ 3ನೇ ಚಾರ್ಲ್ಸ್‌ಗೆ ಮೇ 6ಕ್ಕೆ ಪಟ್ಟಾಭಿಷೇಕ

ಲಂಡನ್: ಹವಾನಿಯಂತ್ರಿತ ಸಾರೋಟು, ರಾಜಮನೆತನದ ಐತಿಹಾಸಿಕ ಆಭರಣಗಳು, ಸಾಮಾಜಿಕ ಜಾಲತಾಣಗಳಿಗಾಗಿಯೇ ಸಿದ್ಧಪಡಿಸಿರುವ ಇಮೋಜಿ ಇವು ಮೇ 6ರಂದು ನಡೆಯಲಿರುವ ರಾಜ ಮೂರನೇ ಚಾರ್ಲ್ಸ್ ಹಾಗೂ ರಾಣಿ ಕೆಮೇಲಿಯಾ ಅವರ ಪಟ್ಟಾಭಿಷೇಕದ ಕುರಿತು ಬಕಿಂಗ್ ಹ್ಯಾಮ್ ಅರಮನೆ ಸೋಮವಾರ ಬಿಡುಗಡೆ ಮಾಡಿರುವ ವಿವರಗಳು. ಲಂಡನ್‌ನ ವೆಸ್ಟ್‌ಮಿನ್‌ಸ್ಟರ್ ಅಬೇ ಚರ್ಚ್‌ನಲ್ಲಿ ಪಟ್ಟಾಭಿಷೇಕ ಸಮಾರಂಭ ನಡೆಯಲಿದೆ. ಚಾರ್ಲ್ಸ್ ಅವರ ತಾಯಿ, ರಾಣಿ ಎರಡನೇ ಎಲಿಜಬೆತ್ ಅವರಿಗೆ 1953ರಲ್ಲಿ ಪಟ್ಟಾಭಿಷೇಕ ನಡೆದಿತ್ತು. ಅದಾದ ಬಳಿಕ ಒರೋಬ್ಬರಿ 70 ವರ್ಷದ ಬಳಿಕ ಇಂಥ ಸಮಾರಂಭವನ್ನು ಜಗತ್ತು ಮತ್ತೊಮ್ಮೆ ಕಣ್ತುಂಬಿಕೊಳ್ಳಲಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ರಾಣಿ ಎರಡನೇ ಎಲಿಜಬತ್ ಮೃತಪಟ್ಟಿದ್ದರು.



ಮೇ 6ರಂದು ರಾಜ ಮೂರನೇ ಚಾರ್ಲ್ಸ್ ಹಾಗೂ ಅವರ ಪತ್ನಿ ಕೆಮೇಲಿಯಾ ಅವರು ರಾಜ ಮೆರವಣಿಗೆಯಲ್ಲಿ ಬಕಿಂಗ್‌ಹ್ಯಾಮ್ ಅರಮನೆಯಿಂದ ವೆಸ್ಟ್‌ಮಿನ್‌ಸ್ಟರ್ ಅಬೇ ಚರ್ಚ್‌ಗೆ ಬರಲಿದ್ದಾರೆ ಎಂದು ಅರಮನೆ ಪ್ರಕಟಣೆ ತಿಳಿಸಿದೆ.

ಸೇಂಟ್ ಎಡ್ವರ್ಡ್ ಕಿರೀಟವನ್ನು ಹೋಲುವ ಇಮೋಜಿಯನ್ನು ಅರಮನೆ ಬಿಡುಗಡೆ ಮಾಡಿದೆ. ಟ್ವಿಟ್ಟರ್‌ನಲ್ಲಿ ಇದೇ ಇಮೋಜಿಯನ್ನು ಬಳಸಿ ಹ್ಯಾಷ್‌ಟ್ಯಾಗ್ ಸಿದ್ಧಪಡಿಸಲಾಗಿದೆ. ಪಟ್ಟಾಭಿಷೇಕ ಸಮಾರಂಭಕ್ಕೆ ಭಾರತ ಮೂಲದ ಬಾಣಸಿಗರಾದ ಹಾಗೂ ಬ್ರಿಟಿಷ್ ಎಂಪೈರ್ ಮೆಡಲ್‌ನ ವಿಜೇತೆಯಾದ ಮಂಜು ಮಾಲ್ಹಿ ಅವರನ್ನು ಆಹ್ವಾನಿಸಲಾಗಿದೆ. ಸಮಾರಂಭಕ್ಕೆ ಸುಮಾರು ಎರಡು ಸಾವಿರ ಮಂದಿಯನ್ನು ಅರಮನೆ ಆಹ್ವಾನಿಸಿದೆ.

ಸಂಬಂಧಗಳನ್ನು ಬೆಸೆಯುವ ಶಕ್ತಿ ಸಾಹಿತ್ಯ ಸಂಸ್ಕೃತಿಗಿದೆ

- ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ವೈ.ಎಸ್.ಸಿದ್ದೇಗೌಡ ಅಭಿಮತ
- ಯುಗಾದಿ ಕಾವ್ಯ ಮೇಳದ ಸಮಾರೋಪ; ಯುವ ಚೇತನ ಪ್ರಶಸ್ತಿ ಪ್ರದಾನ

ಮೈಸೂರು, ಏ.10–ಮೊಬೈಲ್, ಟಿವಿ, ಸಿನಿಮಾಗಳ ಅಬ್ಬರದ ನಡುವೆಯೂ ತಲೆಮಾರುಗಳನ್ನು, ಸಂಬಂಧಗಳನ್ನು ಬೆಸೆಯುವ ಶಕ್ತಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಇದೆ ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಕರ್ನಲ್ ಪ್ರೊ.ವೈ.ಎಸ್.ಸಿದ್ದೇಗೌಡ ಅಭಿಪ್ರಾಯಪಟ್ಟರು.

ಸ್ಪಂದನಾ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಸ್ಮಯ ಪ್ರಕಾಶನದ ಸಂಯುಕ್ತ ಆಶ್ರಯದಲ್ಲಿ ನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ನಡೆದ ರಾಜ್ಯ ಮಟ್ಟದ ಯುಗಾದಿ ಕಾವ್ಯ ಮೇಳದ ಸಮಾರೋಪ ಹಾಗೂ ಯುವ ಚೇತನ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕವಿಗಳು ಮೌಲ್ಯಾಚರಣೆಯ ದ್ಯೋತಕವಾಗಿದ್ದಾರೆ. ತಮ್ಮ ಸಾಹಿತ್ಯದ ಮೂಲಕ ಜನರಲ್ಲಿ ಮೌಲ್ಯಗಳನ್ನು ಬೆಳೆಸುತ್ತಾರೆ. ಋಣಾತ್ಮಕ ಮನೋಭಾವ ಹೋಗಲಾಡಿಸಿ, ಧನಾತ್ಮಕ ಚಿಂತನೆಗಳನ್ನು ಬಿತ್ತಿ ಸದ್ಗುಣಗಳನ್ನು ರೂಪಿಸುವಲ್ಲಿ ಕವಿ ಮತ್ತು ಕಾವ್ಯ ಗುರುತರ ಪಾತ್ರ ವಹಿಸುತ್ತದೆ ಎಂದರು. ಇದು ಜ್ಞಾನದ ಯುಗ.



ಆ ಕಾರಣಕ್ಕೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಜ್ಞಾನ ಮತ್ತು ಕೌಶಲ್ಯದ ಜೊತೆಗೆ ಮೌಲ್ಯಾಚರಣೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಭಾರತವನ್ನು ಜ್ಞಾನದ ಉತ್ತುಂಗ ಶಿಖರಕ್ಕೆ ಹೊಯ್ದು, ಸಾಂಸ್ಕೃತಿಕವಾಗಿ ಏಳಿಗೆ ಸಾಧಿಸುತ್ತದೆ. ಜೊತೆಗೆ ಸುಖೀ ಸಮಾಜ ನೆಲೆಗೊಳ್ಳುತ್ತದೆ ಎಂದು ವಿಶ್ಲೇಷಿಸಿದರು. 'ಯುವ ಚೇತನ ಪ್ರಶಸ್ತಿ' ಪ್ರದಾನ ಮಾಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಸ್ತ್ರೀವಾದಿ ಚಿಂತಕಿ ಪ್ರೊ. ಪದ್ಮಾ ಶೇಖರ್, ವರ್ತಮಾನದ ಸಂಕೀರ್ಣ ಸಂದರ್ಭದಲ್ಲಿ ಪ್ರಶಸ್ತಿಗಳು ದಿನೇ ದಿನೆ ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಅರ್ಹ ಸಾಧಕರಿಗಿಂತ ಅನರ್ಹರ, ಲಾಬಿಕೋರರ ಪಾಲಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ನಗರಾಧ್ಯಕ್ಷೆ ಹೇಮ ನಂದೀಶ್, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ರೇವಣ್ಣ, ಸಮಾಜ ಸೇವಕಿ ಪುಷ್ಪಾ ಅಯ್ಯಂಗಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಪಿ.ಶಾಂತರಾಜು, ಪದಾಧಿಕಾರಿಗಳಾದ ಟಿ.ಲೋಕೇಶ್, ಡಾ.ಬಿ. ಬಸವರಾಜು, ಡಾ.ಡಿ.ಕೆ. ಉಷಾ, ಚಂದ್ರು ಮಂಡ್ಯ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಮೈಸೂರು ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಜೆ.ಎಂ. ರಘುನಾಥ್, ಕೋಲಾರದ ರೋಟರಿ ಕ್ಲಬ್ ಅಧ್ಯಕ್ಷ ಬಿ. ಶಿವಕುಮಾರ್, ಮಂಡ್ಯದ ಮಡಿಲು ಸೇವಾ ಟ್ರಸ್ಟಿನ ರಾಜ್ಯ ಸಂಯೋಜಕ ಅರಸು ಮಡಿಲು, ಮೈಸೂರಿನ ಕವಯಿತ್ರಿ ಹಾಗೂ ರಂಗಕರ್ಮಿ ಡಾ. ಬಿ.ಎಸ್. ದಿನಮಣಿ, ಬೆಂಗಳೂರಿನ ಹೂವಿನಹೊಳೆ ಪ್ರತಿಷ್ಠಾನದ ಅಧ್ಯಕ್ಷ ನಂದಿ ಜೆ. ಹೂವಿನಹೊಳೆ, ಸಾಹಿತಿ ಮತ್ತು ಸಂಘಟಕ ಮೈಸೂರಿನ ಎಸ್. ಶಿಶಿರಂಜನ್ ಅವರಿಗೆ 'ಯುವ ಚೇತನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಇದಕ್ಕೂ ಮುನ್ನ ನಡೆದ ರಾಜ್ಯ ಮಟ್ಟದ ಯುಗಾದಿ ಕಾವ್ಯ ಮೇಳದಲ್ಲಿ 72 ಮಂದಿ ವಿವಿಧ ಜಿಲ್ಲೆಗಳ ಕವಿಗಳು ಕವನ ವಾಚಿಸಿದರು.

ಒನ್ ರ್‍ಯಾಂಕ್ ಒನ್ ಪೆನ್ಷನ್‌ನಿಂದ ಮಾಜಿ ಸೈನಿಕರಿಗೆ ಅನ್ಯಾಯ

ನ್ಯೂನ್ಯತೆ ಸರಿಪಡಿಸಲು ಮಾಜಿ ಸೈನಿಕರ ಸಂಘ ಆಗ್ರಹ



ಮಡಿಕೇರಿ, ಏ.10– ರಾಷ್ಟ್ರದ ಗಡಿಗಳನ್ನು ಕಾಯ್ದು ನಿವೃತ್ತರಾಗಿರುವ ಮಾಜಿ ಸೈನಿಕರು ಒನ್ ರ್‍ಯಾಂಕ್ ಒನ್ ಪೆನ್ಶನ್ (ಒಆರ್‌ಒಪಿ) ಯೋಜನೆಯ ನ್ಯೂನ್ಯತೆಗಳಿಂದ ಅನ್ಯಾಯಕ್ಕೆ ಒಳಗಾಗಿದ್ದು, ಯೋಜನೆಯ ಲೋಪಗಳನ್ನು ಸರಿಪಡಿ ಸುವಂತೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಘಟಕದ ಅಧ್ಯಕ್ಷ ಕೊಟ್ಟುಕತ್ತೀರ ಸೋಮಣ್ಣ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿ, ಪ್ರಧಾನ ಮಂತ್ರಿ ಮತ್ತು ರಕ್ಷಣಾ ಸಚಿವರಿಗೆ ಮನವಿ ಮಾಡಿಕೊಳ್ಳಲಾಗಿದೆ. ಒಆರ್‌ಒಪಿ ಯೋಜನೆಯಡಿ ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುವ ಯೋಧ ಮತ್ತು ಉನ್ನತ ಹುದ್ದೆಗಳನ್ನು ಅಲಂಕರಿಸಿರುವವರ ಪಿಂಚಣಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಅದನ್ನು ಸರಿಪಡಿಸುವ ಮೂಲಕ ತಾರತಮ್ಯ ನೀಗಿಸಬೇಕೆಂದು ಮನವಿ ಮಾಡಿದರು.

ರಕ್ಷಣಾ ಪಡೆಗಳ ಮಾಜಿ ಸೈನಿಕರುಗಳಿಗೆ ಒಆರ್‌ಒಪಿ 2 ಅನ್ನು ಕೇಂದ್ರ ಸರ್ಕಾರ 2019ರ ಜುಲೈ1ರಿಂದ ಜಾರಿಗೆ ತಂದಿದೆ. ಇದರಲ್ಲಿ ರಕ್ಷಣಾ ಪಡೆಗಳಲ್ಲಿ ಕೆಳಸ್ತರದಲ್ಲಿ ಕಾರ್ಯನಿರ್ವಹಿಸಿದ ಸೈನಿಕರ ಪಿಂಚಣಿಯಲ್ಲಿ ಯಾವುದೇ ಏರಿಕೆಯಾಗಿಲ್ಲ. ಸೈನ್ಯದಲ್ಲಿ 15ರಿಂದ 20 ವರ್ಷ ಸೈನಿಕನಾಗಿ ಸೇವೆ ಸಲ್ಲಿಸಿದಾತ ನಿವೃತ್ತರಾಗಿ ಪಡೆಯುತ್ತಿರುವ ಪಿಂಚಣಿಯ ಮೊತ್ತ ಸರಿ ಸುಮಾರು 13 ಸಾವಿರಗಳಷ್ಟೆ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ರಕ್ಷಣಾ ಪಡೆಗಳಲ್ಲಿ ಸೈನಿಕನಾಗಿ ಸೇರುವಾತ ಸುದೀರ್ಘ ಸೇವೆಯನ್ನು ಒಂದೇ ಹುದ್ದೆಯಲ್ಲಿ ಕಳೆಯುತ್ತಾನೆ ಮತ್ತು ಸೇವೆ ಸೇರುವ ಹಂತದಲ್ಲೆ ಈತನ ಪಿಂಚಣಿಯನ್ನು ನಿಗದಿಪಡಿಸಲಾಗುತ್ತದೆ. ಅದೇ ರಕ್ಷಣಾ ಪಡೆಯ ಅಧಿಕಾರಿಯಾಗಿ ಸೇವೆಗೆ ಭರ್ತಿಯಾಗುವವರಿಗೆ ಆರಂಭದಲ್ಲಿ ನಿಗದಿಪಡಿಸಲಾದ ಪಿಂಚಣಿ, ಅವರು ಪದೋನ್ನತಿ ಹೊಂದುವ ಹಂತಗಳಲ್ಲೆಲ್ಲ ಹೆಚ್ಚುತ್ತಾ ಸಾಗುತ್ತದೆ. ಪದೋನ್ನತಿ ಹೊಂದಿ ನಿವೃತ್ತರಾಗುವ ಅಧಿಕಾರಿ ಮಾಸಿಕ ಪಿಂಚಣಿಯಾಗಿ ಸೇವೆಗೆ ಭಡ್ತಿಯಾಗುವ ಹಂತದಲ್ಲಿ ನಿಗದಿಯಾದ ಪಿಂಚಣಿ ಮೊತ್ತಕ್ಕಿಂತ ಶೇ.300ಕ್ಕೂ ಹೆಚ್ಚಿನ ಅಂದರೆ 1 ಲಕ್ಷಕ್ಕೂ ಹೆಚ್ಚಿನ ಮಾಸಿಕ ಪಿಂಚಣಿ ಪಡೆಯುತ್ತಾರೆ. ಪ್ರಸ್ತುತ ಒಆರ್‌ಒಪಿ ಅಡಿ ಸೈನಿಕನ ಪಿಂಚಣಿ ಕೇವಲ ಸುಮಾರು ಶೇ.38ರಷ್ಟು ಮಾತ್ರ ಹೆಚ್ಚಳವಾಗಿದೆಯಷ್ಟೆ. ಇದನ್ನು ಅಧಿಕಾರಿ ವರ್ಗಕ್ಕೆ ಹೆಚ್ಚಿಸಿದ ಅನುಪಾತದಂತೆ ಹೆಚ್ಚಿಸಿ ನೀಡಬೇಕು. ಇದರಿಂದ ಕೇವಲ 13 ಸಾವಿರ ಪಿಂಚಣಿ ಪಡೆಯುವ ಸೈನಿಕ ಕನಿಷ್ಟ 60 ಸಾವಿರದ ಆಸುಪಾಸಿನಲ್ಲಿ ಪಿಂಚಣಿಯ ಸೌಲಭ್ಯ ಹೊಂದುವ ಮೂಲಕ ಆತನ ಬದುಕು ಹಸನಾಗುತ್ತದೆಂದು ಕಳಕಳಿಯಿಂದ ನುಡಿದರು.

ಒಆರ್‌ಒಪಿ ಯೋಜನೆಯ ಲೋಪಗಳಿಂದ ಸುಬೇದಾರ್, ಸುಬೇದಾರ್ ಮೇಜರ್, ಹಾನರರಿ ಕ್ಯಾಪ್ಟನ್‌ಗಳ ಮಾಸಿಕ ಪಿಂಚಣಿ ಕಡಿಮೆಯಾಗಿದೆ ಎಂದು ಕೊಟ್ಟುಕತ್ತೀರ ಸೋಮಣ್ಣ ಕಳವಳ ವ್ಯಕ್ತಪಡಿಸಿದರು. ಪಿಂಚಣಿಯ ಮೊತ್ತ ಕಡಿಮೆಯಾದರು ಈ ಬಗ್ಗೆ ಅಗತ್ಯ ತಿಳುವಳಿಕೆಗಳಿಲ್ಲದೆ ಅವರು ಇಂದಿಗೂ ಧ್ವನಿ ಎತ್ತಿಲ್ಲವೆಂದು ವಿಷಾದಿಸಿದರು.

ಎಂಎಸ್‌ಪಿಯಲ್ಲಿ ತಾರತಮ್ಯ: ರಕ್ಷಣಾ ಪಡೆಗಳಲ್ಲಿ ಮಿಲಿಟರಿ ಸರ್ವೀಸ್ ಪೇ (ಎಂಎಸ್‌ಪಿ) ಎನ್ನುವ ಯೋಜನೆ ಇದ್ದು, ಇದರಡಿ ರಾಷ್ಟ್ರ ರಕ್ಷಣೆಯ ಮಹತ್ತರ ಕಾರ್ಯ ನಡೆಸುವ ಸಂದರ್ಭ, ಅತ್ಯಂತ ಕಠಿಣ ಕಾರ್ಯಗಳಲ್ಲಿ ಅಪಾಯಕ್ಕೆ ಎದೆಗೊಟ್ಟು ಕಾರ್ಯನಿರ್ವಹಿಸುವವರು ಅಂಗ ವೈಕಲ್ಯತೆಗೆ ಒಳಗಾದರೆ ನೆರವನ್ನು ಒದಗಿಸಲಾಗುತ್ತದೆ. ಇದರಲ್ಲಿ ಸೈನ್ಯದಲ್ಲಿ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುವ ಸೈನಿಕರಿಗೆ 5200 ರೂ. ನಿಗದಿಪಡಿಸಲಾಗಿದ್ದರೆ, ಅಧಿಕಾರಿಗಳಿಗೆ 10,800 ರೂ. ನಿಗದಿಯಾಗಿದೆ. ಅಂಗವೈಕಲ್ಯತೆಯಲ್ಲು ಸೈನಿಕ ಮತ್ತು ಅಧಿಕಾರಿ ಎಂಬುದಿದೆಯೇ ಎಂದು ಬೇಸರದಿಂದ ಪ್ರಶ್ನಿಸಿದ ಅವರು, ಎಂಎಸ್‌ಪಿಯಡಿ ಅಂಗ ವೈಕಲ್ಯತೆಗೆ ಒಳಗಾದವರಿಗೆ ಸಮಾನ ನೆರವನ್ನು ನೀಡುವ ಅಗತ್ಯವಿದೆ ಎಂದು ದೃಢವಾಗಿ ನುಡಿದರು.

ದೊರಕದ ಸವಲತ್ತು: ಮಾಜಿ ಸೈನಿಕರಿಗೆ ಹತ್ತು ಹಲವು ಸವಲತ್ತುಗಳು ಸಮಾನವಾಗಿ ದೊರಕುತ್ತಿಲ್ಲ. ಈ ಹಿನ್ನೆಲೆ ಪ್ರಸಕ್ತ ಸಾಲಿನ ಫೆಬ್ರವರಿಯಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ಬೃಹತ್ ಧರಣಿ ನಡೆಸಲಾಗಿತ್ತು. ಆದರೆ, ಇದಕ್ಕೆ ಸ್ಪಂದನೆ ದೊರಕದ ಹಿನ್ನೆಲೆ ಇದೀಗ ಸಂಘದ ಮೂಲಕ ಪ್ರತಿ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿ ಸೇರಿದಂತೆ ಉನ್ನತ ಸ್ಥಾನದಲ್ಲಿರುವವರಿಗೆ ಮನವಿ ಸಲ್ಲಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಅ.ಕ.ಮಾಜಿ ಸೈನಿಕರ ಸಂಘದ ಕೊಡಗು ಘಟಕದ ಸಂಚಾಲಕರಾದ ವಾಸು ಪಿ.ಎಸ್, ಸುನಿಲ್, ಪ್ರಭಾಕರ್, ಜಂಟಿ ಕಾರ್ಯದರ್ಶಿ ಅರುಣ ಪಿ.ಜಿ, ಮಹಿಳಾ ಸಂಚಾಲಕಿ ಭವಾನಿ ಉಪಸ್ಥಿತರಿದ್ದರು.

ಏ.17, ಮಂಥರ್‌ಗೌಡ ನಾಮಪತ್ರ ಸಲ್ಲಿಕೆ

ಕಾಂಗ್ರೆಸ್ ಮುಖಂಡರಿಂದ ಒಗ್ಗಟ್ಟಿನ ಮಂತ್ರ



ಕುಶಾಲನಗರ, ಏ.10– ಮಡಿಕೇರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್ ಗೌಡ ಅವರಿಗೆ ಸಂಪೂರ್ಣ ಬೆಂಬಲ ನೀಡುವ ಮೂಲಕ ಅವರ ಗೆಲುವಿಗೆ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆಪಿಸಿಸಿ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಮಂಥರ್‌ಗೌಡ ಅವರಿಗೆ ಯಾವುದೇ ಅಪೇಕ್ಷೆಯಿಲ್ಲದೆ ಮನಃಪೂರ್ವಕವಾಗಿ ಬೆಂಬಲಿಸುತ್ತೇವೆ ಎಂದರು. ಯುವ ಜನಾಂಗವನ್ನು ಪಕ್ಷಾತೀತವಾಗಿ ಸೆಳೆಯುತ್ತಿರುವ ಮಂಥರ್ ಗೌಡ ಅವರ ಆಯ್ಕೆಯನ್ನು ನಾನು ಸ್ವಾಗತಿಸುತ್ತೇನೆ ಎಂದರು. ಜಿಲ್ಲೆಯಲ್ಲಿ ಈ ಬಾರಿ ಬದಲಾವಣೆ ಅಲೆ ಕಂಡುಬರುತ್ತಿದ್ದು, ಮಂಥರ್ ಗೌಡ ಅವರನ್ನು ಗೆಲ್ಲಿಸುವ ಭರವಸೆ ಹೊಂದಿದ್ದೇವೆ. ಜಿಲ್ಲೆಯ ಎರಡು ಕ್ಷೇತ್ರಗಳ ಪಕ್ಷದ ಅಭ್ಯರ್ಥಿಗಳ ಗೆಲುವು ನಿಶ್ಚಿತ ಎಂದು ತಿಳಿಸಿದರು.

ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಮಡಿಕೇರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಏ17 ರಂದು ಡಾ.ಮಂಥರ್ ಗೌಡ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಹೇಳಿದರು. ಈ ಬಾರಿ ಕೊಡಗು ಜಿಲ್ಲೆಯ 2 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲ್ಲುವ ವಾತಾವರಣ ನಿರ್ಮಾಣವಾಗಿದೆ. ಅನೇಕ ಕಾರ್ಯಕರ್ತರಿಗೆ ಈಗ ಮಂಥರ್‌ಗೌಡ ಕಾಂಗ್ರೆಸ್‌ನ ಹವಾ ನಿರ್ಮಾಣ ಮಾಡಿದ್ದಾರೆ. ಅಂತಹ ಒಬ್ಬ ಸಮರ್ಥ ಅಭ್ಯರ್ಥಿಯನ್ನು ಗುರುತಿಸಿ ಸ್ಪರ್ಧೆಗೆ ಅವಕಾಶ ನೀಡಿರುವುದನ್ನು ಸ್ವಾಗತಿಸುತ್ತಿದ್ದೇವೆ ಎಂದು ವಿ.ಪಿ.ಶಶಿಧರ್ ಹೇಳಿದರು.

ಕ್ಷೇತ್ರ ಚುನಾವಣಾ ಉಸ್ತುವಾರಿ ಬಿ.ಜಿ.ಮಂಜುನಾಥ್ ಮಾತನಾಡಿ, ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಉತ್ತಮ ವಾತಾವರಣ ನಿರ್ಮಾಣವಾಗಿದೆ. ಟಿಕೆಟ್ ಘೋಷಣೆಯಾದ ನಂತರ ಕೆಲವು ಟಿಕೆಟ್ ಆಕಾಂಕ್ಷಿಗಳು ಅಸಮಾಧಾನಗೊಂಡಿದ್ದಾರೆ. ಅಂತಹ ನಾಯಕರುಗಳೊಂದಿಗೆ ಹಿರಿಯ ನಾಯಕರು ಮಾತುಕತೆ ನಡೆಸಿ ಸಮಾಧಾನ ಪಡಿಸಲಿದ್ದಾರೆ ಎಂದರು. ಜಿಲ್ಲೆಯ ಎಲ್ಲಾರೂ ಒಗ್ಗಟ್ಟಾಗಿ ಕೆಲಸ ಮಾಡಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲುಸುವುದಾಗಿ ಹೇಳಿದರು. ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಡಿಸಿಸಿ ಸದಸ್ಯ ಅಬ್ದುಲ್ ಖಾದರ್, ಮಾಜಿ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್ ಇದ್ದರು.

ಚುನಾವಣಾ ನಿಯಂತ್ರಣ ಕೊಠಡಿ ಆರಂಭ

ಮಡಿಕೇರಿ, ಏ.10– ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023 ರ ಸಂಬಂಧ 209–ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಅಥವಾ ದೂರಿನ ಬಗ್ಗೆ ಕ್ರಮವಹಿಸಲು ಚುನಾವಣಾಧಿಕಾರಿಗಳ ಕಚೇರಿಯಲ್ಲಿ 24x7 ನಿಯಂತ್ರಣಾ ಕೊಠಡಿ(ದೂರವಾಣಿ ಸಂಖ್ಯೆ 08274–256328) ತೆರೆಯಲಾಗಿದ್ದು, ಚುನಾವಣಾ ಸಂಬಂಧ ಯಾವುದೇ ದೂರುಗಳು, ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳ ಮಾಹಿತಿ ನೀಡಬಹುದಾಗಿದೆ ಎಂದು 209–ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಅವರು ತಿಳಿಸಿದ್ದಾರೆ.

ಹೃದಯಾಘಾತದಿಂದ ದಿನಪತ್ರಿಕೆ ಸಾಗಣಿಕೆ ವಾಹನ ಚಾಲಕ ಸಾವು



ಕುಶಾಲನಗರ, ಏ.10– ದಿನಪತ್ರಿಕೆಯನ್ನು ಸಾಗಾಟ ಮಾಡುತ್ತಿದ್ದ ವಾಹನದ ಚಾಲಕನೊರ್ವ ಹೃದಯಾಘಾತದಿಂದ ಮೃತಪಟ್ಟ ಘಟನೆ ಸೋಮವಾರ ನಡೆದಿದೆ.

ಮಡಿಕೇರಿ ಬಳಿಯ ಮದೆನಾಡು ಗ್ರಾಮದ ನಿವಾಸಿ ರಿಜ್ವಾನ್ (43) ಮೃತಪಟ್ಟ ದುರ್ದೈವಿಯಾಗಿದ್ದಾರೆ. ಮೃತರು ಪತ್ನಿ ಸೇರಿದಂತೆ ಇಬ್ಬರು ಮಕ್ಕಳು ಹಾಗೂ ಬಂಧುಮಿತ್ರರನ್ನು ಅಗಲಿದ್ದಾರೆ. ರಿಜ್ವಾನ್ ಅವರು ಸೋಮವಾರ ಬೆಳಗ್ಗೆ ಮಂಗಳೂರಿನಿಂದ ಪತ್ರಿಕೆಗಳನ್ನು ತೆಗೆದುಕೊಂಡು ಬಂದು ಎಲ್ಲಾ ಕೇಂದ್ರಗಳಿಗೆ ವಿತರಣೆ ಮಾಡಿ ಇಲ್ಲಿನ ಬೈಪಾಸ್ ರಸ್ತೆಯಲ್ಲಿರುವ ಮನೆಗೆ ತೆರಳಿದ ಸಂದರ್ಭ ಎದುನೋವು ಕಾಣಿಕೊಂಡು ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಸಂಬಂಧಿಕರು ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗುತ್ತಿದ್ದ ವೇಳೆ ಮೃತಪಟ್ಟರು ಎಂದು ಕುಟುಂಬದ ಮೂಲಗಳಿಂದ ತಿಳಿದು ಬಂದಿದೆ. ಮೃತರ ಅಂತ್ಯಸಂಸ್ಕಾರವನ್ನು ಸ್ವಗ್ರಾಮ ಮದೆನಾಡುವಿನಲ್ಲಿ ನೆರವೇರಿಸಲಾಯಿತು.

ಕಂದಾಯ ನಿಗದಿಗಾಗಿ ಬಾಣೆ ಜಮೀನು ಸರ್ವೆಗೆ ಎಸಿ ಆದೇಶ

ಮಾಹಿತಿ ನೀಡದೆ ಸರ್ವೆ ಕಾರ್ಯ; ಸೇವ್ ಕೊಡಗು ವೇದಿಕೆ ಆರೋಪ



ಮಡಿಕೇರಿ, ಏ.10– ಮಡಿಕೇರಿ ತಾಲೂಕಿನ ಭಾಗಮಂಡಲ ಹೋಬಳಿಯ ಬೇಂಗೂರು ಗ್ರಾಮದಲ್ಲಿ ಪ್ರಾಯೋಗಿಕವಾಗಿ ಬಾಣೆ ಜಮೀನುಗಳಿಗೆ ಕಂದಾಯ ನಿಗದಿ ಮಾಡಲು ಸರ್ವೆ ಕಾರ್ಯ ನಡೆಸುವಂತೆ ಉಪವಿಭಾಗಾಧಿಕಾರಿಗಳ ಕಚೇರಿ ಮೂಲಕ ಹೊರಡಿಸಲಾಗಿರುವ ಆದೇಶಕ್ಕೆ 'ಸೇವ್ ಕೊಡಗು ವೇದಿಕೆ' ಆಕ್ಷೇಪ ವ್ಯಕ್ತಪಡಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಪದಾಧಿಕಾರಿ ಕೆ.ಬಿ.ಬೋಪಣ್ಣ, ಜನರನ್ನು ಕತ್ತಲೆಯಲ್ಲಿಟ್ಟು ಸರ್ವೆ ಕಾರ್ಯ ನಡೆಸಿದರೆ ತಡೆಯೊಡ್ಡುವುದಾಗಿ ಎಚ್ಚರಿಕೆ ನೀಡಿದರು. ಬಾಣೆ ಜಮೀನಿಗೆ ಕಂದಾಯ ನಿಗದಿ ಮಾಡುವ ಕ್ರಮ ಸ್ವಾಗತಾರ್ಹ. ಆದರೆ ಜಿಲ್ಲೆಯ ಜನರಿಗೆ ಯಾವುದೇ ಮಾಹಿತಿಯನ್ನು ನೀಡದೆ ಮತ್ತು ಸರ್ವೆ ಪ್ರಕ್ರಿಯೆ ಬಗ್ಗೆ ವಿವರಿಸದೆ ಏಕಾಏಕಿ ಚುನಾವಣೆ ಸಂದರ್ಭದಲ್ಲಿ ಏ.10ರಿಂದಲೇ ಸರ್ವೆ ಕಾರ್ಯ ಆರಂಭಿಸಬೇಕೆಂದು ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಆದೇಶ ಮಾಡಿರುವುದು ಸರಿಯಲ್ಲ. ಇದರ ಹಿಂದೆ ನಕಲಿ ಪರಿಸರವಾದಿಗಳ ಒತ್ತಡವಿರುವ ಬಗ್ಗೆ ಸಂಶಯ ವ್ಯಕ್ತವಾಗುತ್ತಿದೆ ಎಂದು ಆರೋಪಿಸಿದರು.

ಕಂದಾಯ ಇಲಾಖೆ ಕಂದಾಯ ಅದಾಲತ್ ನಡೆಸುವ ಮೂಲಕ ಕಂದಾಯ ನಿಗದಿ ಮತ್ತು ಸರ್ವೆ ಕಾರ್ಯದ ಬಗ್ಗೆ ಬಾಣೆ ಜಮೀನು ಹೊಂದಿರುವವರಿಗೆ ಸಂಪೂರ್ಣ ಮಾಹಿತಿ ಒದಗಿಸಬೇಕು. ಸರ್ವೆ ಸಂದರ್ಭ ಸಂಬಂಧಿಸಿದ ಕುಟುಂಬದ ಎಲ್ಲಾ ಸದಸ್ಯರನ್ನು ಆಹ್ವಾನಿಸಬೇಕು. ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸರ್ವೆ ಕಾರ್ಯಕ್ಕೆ ಮುಂದಾದರೆ ತಡೆಯೊಡ್ಡುವುದಾಗಿ ತಿಳಿಸಿದರು.

ಯಾರ ಹೆಸರಿನಲ್ಲಿ ಬಾಣೆ ಜಾಗ ಇದೆಯೋ ಅವರ ಹೆಸರಿನಲ್ಲಿ ಕಂದಾಯ ನಿಗದಿಯಾಗಬೇಕು. ಆದರೆ ಈಗ ಪಟ್ಟೆದಾರನ ಹೆಸರಿಗೆ ಕಂದಾಯ ನಿಗದಿಯಾಗುತ್ತದೆ. ಇದರಿಂದ ಬಾಣೆ ಜಾಗದ ಪಾಲು ಹೊಂದಿರುವ ಕುಟುಂಬದ ಇತರ ಸದಸ್ಯರಿಗೆ ಅನ್ಯಾಯವಾಗುತ್ತದೆ. ಪಟ್ಟೆದಾರ ಒಬ್ಬನ ಹೆಸರಿಗೆ ಮಾತ್ರ ಕಂದಾಯ ನಿಗದಿಯಾದರೆ ದುರುಪಯೋಗವಾಗುವ ಸಾಧ್ಯತೆಗಳೇ ಹೆಚ್ಚು. ಮೊದಲು ಆರ್‌ಟಿಸಿಯಲ್ಲಿ ಕುಟುಂಬದ ಸದಸ್ಯರುಗಳ ಹೆಸರು ಬರುತ್ತಿತ್ತು. ಆದರೆ ಈಗ ಪಟ್ಟೆದಾರನ ಹೆಸರು ಮಾತ್ರ ಬರುತ್ತಿದ್ದು, ಇತರ ಸದಸ್ಯರ ಹೆಸರಿಗೆ ಕಂದಾಯ ನಿಗದಿ ಮಾಡುತ್ತಿಲ್ಲ. ಅಧಿಕಾರಿಗಳು ಯಾರದ್ದೋ ಒತ್ತಡಕ್ಕೆ ಮಣಿದು ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಕೆ.ಬಿ.ಬೋಪಣ್ಣ ಆರೋಪಿಸಿದರು.

2013ರಲ್ಲಿ ಬಾಣೆ ಜಾಗಕ್ಕೆ ಕಂದಾಯ ನಿಗದಿ ಮಾಡಲು ರಾಷ್ಟ್ರಪತಿಗಳು ಅಂಕಿತ ಹಾಕಿದರು. ಇಲ್ಲಿಯವರೆಗೆ ಕಂದಾಯ ನಿಗದಿಯಾಗದೆ ಇದ್ದ ಪ್ರಕರಣಕ್ಕೆ ಚುನಾವಣೆ ಸಂದರ್ಭದಲ್ಲಿ ಚಾಲನೆ ನೀಡಿದ ಉದ್ದೇಶವಾದರು ಏನು ಎಂದು ಪ್ರಶ್ನಿಸಿದ ಅವರು, ಸರ್ವಾಧಿಕಾರಿ ಧೋರಣೆಯ ಮೂಲಕ ಜನರನ್ನು ಮೂರ್ಖರನ್ನಾಗಿ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ ಎಂದರು. ಭಾಗಮಂಡಲ ಹೋಬಳಿಯ ಬೇಂಗೂರು ಗ್ರಾಮದಲ್ಲಿ ಸರ್ವೆ ಕಾರ್ಯ ನಡೆಸಲು ಉಪವಿಭಾಗಾಧಿಕಾರಿಗಳು ನೀಡಿರುವ ಆದೇಶವನ್ನು ವಾಪಾಸ್ಸು ಪಡೆಯಬೇಕು. ಚುನಾವಣೆ ಕಳೆದ ನಂತರ ಜನರಿಗೆ ಸಂಪೂರ್ಣ ಮಾಹಿತಿ ಯನ್ನು ಒದಗಿಸಿ ಕಂದಾಯ ನಿಗದಿ ಮತ್ತು ಸರ್ವೆ ಕಾರ್ಯ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಪದಾಧಿಕಾರಿಗಳಾದ ಬಿ.ಟಿ.ದಿನೇಶ್ ಜಿನ್ನು ನಾಣಯ್ಯ, ಉದಯ ಶಂಕರ್, ಬೇಂಗೂರು ಗ್ರಾಮಸ್ಥರಾದ ಸತೀಶ್ ಬೆಳ್ಯಪ್ಪ ಹಾಗೂ ಸಂತೋಷ್ ಉಪಸ್ಥಿತರಿದ್ದರು.

ಇಂದಿನಿಂದ ಮಾರಮ್ಮ ದೇವರ ವಾರ್ಷಿಕೋತ್ಸವ

ಗೋಣಿಕೊಪ್ಪ, ಏ.10– ತೂಚಮಕೇರಿ ಕೊಮ್ಮಾಡು ಮಾರಮ್ಮ ದೇವರ ವಾರ್ಷಿಕ ಉತ್ಸವವು ಏ.11 ರಿಂದ 14 ರವರೆಗೆ ಜರುಗಲಿದೆ. ಏ. 14ರಂದು ವಾರ್ಷಿಕ ಉತ್ಸವಕ್ಕೆ ತೆರೆ ಬೀಳಲಿದೆ ಎಂದು ಕೊಮ್ಮಾಡು ಶ್ರೀ ಮಾರಮ್ಮ ದೇವ ಸ್ಥಾನದ ಆಡಳಿತ ಮಂಡಳಿ ಕಾರ್ಯದರ್ಶಿ ವಿ. ಆರ್. ಹರೀಶ್ ಪಿಳ್ಳೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಏ.15, ಹಿರಿಯ ನಾಗರಿಕರ ವೇದಿಕೆಯ ಸಾಮಾನ್ಯ ಸಭೆ

ಮಡಿಕೇರಿ, ಏ.10– ಹಿರಿಯ ನಾಗರಿಕರ ವೇದಿಕೆಯ 2022–23 ನೇ ಸಾಲಿನ ಸಾಮಾನ್ಯ ಸಭೆಯು ಏಪ್ರಿಲ್, 15 ರಂದು ಬೆಳಗ್ಗೆ 10 ಗಂಟೆಗೆ ಕಡಗದಾಳು ರಸ್ತೆಯ 'ಕ್ಯಾಪಿಟಲ್ ವಿಲೇಜ್' ನಲ್ಲಿ ಸಂಸ್ಥೆಯ ಅಧ್ಯಕ್ಷ ಕೊಂಗಾಂಡ ತಿಮ್ಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ ತಿಳಿಸಿದ್ದಾರೆ.

ಚಾ.ನಗರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮತ್ತೊಂದು ಅವಕಾಶ ಕೊಡಿ

ಶಾಸಕ ಸಿ. ಪುಟ್ಟರಂಗಶೆಟ್ಟಿ ಮನವಿ



ಚಾಮರಾಜನಗರ, ಏ.10– ಚಾಮರಾಜ ನಗರ ವಿಧಾನಸಭಾ ಕ್ಷೇತ್ರದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ವ್ಯಾಪಕ ಪ್ರಚಾರ ನಡಸಿದರು.

ಕ್ಷೇತ್ರದ ವ್ಯಾಪ್ತಿಯ ಬೋಗಾಪುರ, ಕೆ.ಬಸವನಪುರ, ಕೆಲ್ಲಂಬಳ್ಳಿ, ಕಲ್ಲಹಳ್ಳಿ, ಸಪ್ಪಯ್ಯನಪುರ ಗ್ರಾಮಗಳಲ್ಲಿ ಮನಮನೆಗೆ ತೆರಳ ವ್ಯಾಪಕ ಪ್ರಚಾರ ಮಾಡಿದ ಅವರನ್ನು ಬೋಗಾಪುರ ಎಪಿಎಂಸಿ ಮಾಜಿ ಅಧ್ಯಕ್ಷ ಡಿ.ನಾಗೇಂದ್ರ ಬೆಂಬಲಿಗರ ಬಾರಿ ಗಾತ್ರದ ಹಾರ ಹಾಕಿ ಶಾಲು ಹೊದಿಸಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಕ್ಷೇತ್ರದಲ್ಲಿ 3 ಬಾರಿ ಶಾಸಕನಾಗಿದ್ದು, ಸಾಕಷ್ಟು ಜನ ಪರ ಕೆಲಸ ಮಾಡಿದ್ದೇನೆ. ವಿಶೇಷವಾಗಿ ಭೋಗಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಮೂಲಸೌಲಭ್ಯ ಕಲ್ಪಿಸಲಾಗಿದ್ದು, ಗುಣಮಟ್ಟದ ರಸ್ತೆ ನಿರ್ಮಾಣ, ಸಮುದಾಯ ಭವನಗಳ ನಿರ್ಮಾಣ, ಕುಡಿಯುವ ನೀರಿಗೆ ಆದ್ಯತೆ, ಅರ್ಹ ಕುಟುಂಬಗಳಿಗೆ ವಿವಿಧ ಯೋಜನೆಗಳಡಿ ಸಾಲಸೌಲಭ್ಯ ನೀಡಲಾಗಿದ್ದು, ಕ್ಷೇತ್ರದ ಸಮಗ್ರ ಅಭಿವೃದ್ದಿಗಾಗಿ ಮತ್ತೊಂದು ಅವಕಾಶ ಮಾಡಿಕೊಡಬೇಕು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಎಸ್ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಎಪಿಎಂಸಿ ಮಾಜಿ ಅಧ್ಯಕ್ಷ ಡಿ.ನಾಗೇಂದ್ರ, ತಾಪಂ ಮಾಜಿ ಸದಸ್ಯ ಮಹಾಲಿಂಗು, ಗ್ರಾಪಂ ಸದಸ್ಯರಾದ ಮಹೇಶ್, ಮಧು ಆಚಾರ್, ಎನ್.ಮಹೇಶ್, ಮುಖಂಡರಾದ ಜಾನ್ ವಿಲಿಯಂ, ಮಲ್ಲಿಕಾರ್ಜುನ, ಶ್ರೀನಿವಾಸ ಉಪ್ಪಾರ್, ಕೋಡಿಮೋಳೆ ಪ್ರಕಾಶ್, ರಾಜೇಶ್, ಎಸ್.ಪ್ರಕಾಶ್, ಮಹದೇವ ನಾಯಕ, ಮಹದೇವೇಗೌಡ, ಡೈರಿ ದೊರೆಸ್ವಾಮಿ, ಮಲ್ಲುಗೌಡ, ನಾಗನಾಯಕ, ರಾಮಚಂದ್ರಯ್ಯ, ಮಂಜುಗೌಡ, ಕೆ.ಗುರುಸ್ವಾಮಿ, ರಮೇಶ್ ಹಾಜರಿದ್ದರು.

ಇಂದಿನಿಂದ ಅರಿಶಿನ ಖರೀದಿ ಕೇಂದ್ರ ಆರಂಭ

ಕ್ವಿಂಟಾಲ್ ಅರಿಶಿನಕ್ಕೆ 6694 ರೂ. ನಿಗದಿ

ಚಾಮರಾಜನಗರ, ಏ.10– ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಜಿಲ್ಲೆಯ ರೈತರಿಂದ ಅರಿಶಿನ ಖರೀದಿಸಲು ಏಪ್ರಿಲ್ 11 ರಿಂದ ಜಿಲ್ಲೆಯ ವಿವಿಧೆಡೆ ಖರೀದಿ ಕೇಂದ್ರ ಪ್ರಾರಂಭವಾಗಲಿದೆ.

ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ಆಯಾ ತಾಲೂಕಿನ ರೈತರ ನೊಂದಣಿ ಹಾಗೂ ಖರೀದಿ ಕೇಂದ್ರವು ಪ್ರಾರಂಭವಾಗುತ್ತಿದೆ. ಚಾಮರಾಜನಗರ ಮತ್ತು ಯಳಂದೂರು ತಾಲೂಕಿನ ರೈತರು ಚಾಮರಾಜನಗರದ ಸಂತೇಮರಹಳ್ಳಿ ವೃತ್ತದ ಬಳಿಯ ಆಕ್ಸಿಸ್ ಬ್ಯಾಂಕ್ ಹಿಂಭಾಗದ ಆಂಜನೇಯ ಸ್ವಾಮಿ ಫ್ಲೋರ್ ಹತ್ತಿರವಿರುವ ನಗರಖಾನೆ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಚೇರಿಯಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಖರೀದಿ ಕೇಂದ್ರವನ್ನು ಚಾಮರಾಜನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ತೆರೆಯಲಾಗುತ್ತದೆ.

ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾ ಮಂಡಳವನ್ನು ಖರೀದಿ ಏಜೆನ್ಸಿಯಾಗಿ ನೇಮಕ ಮಾಡಲಾಗಿದೆ. ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಸಂಸ್ಕರಿಸಿ ಶುದ್ದೀಕರಿಸಿದ ಪಾಲಿಶ್ ಮಾಡಿದ ಅರಿಶಿನವನ್ನು ಕ್ವಿಂಟಾಲ್‌ಗೆ 6,694 ರೂ. ರಂತೆ ಖರೀದಿಸಲಾಗುವುದು. ಎಫ್.ಎ.ಕ್ಯೂ ಗುಣಮಟ್ಟವನ್ನು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಂದ ನಿಗದಿಪಡಿಸಿದ ಮಾರ್ಗಸೂಚಿಯನ್ವಯ ದೃಢೀಕರಿಸಲಾಗುವುದು. ಶುದ್ದೀಕರಿಸಿ ಪಾಲಿಶ್ ಮಾಡಿದ ಅರಿಶಿನವನ್ನು ಮಾತ್ರ ಖರೀದಿ ಕೇಂದ್ರಕ್ಕೆ ತರಬೇಕು.

ಪ್ರತೀ ಎಕರೆಗೆ 20 ಕ್ವಿಂಟಾಲ್ ಹಾಗೂ ಪ್ರತೀ ರೈತರಿಂದ ಗರಿಷ್ಠ 40 ಕ್ವಿಂಟಾಲ್ ಮಾತ್ರ ಖರೀದಿಸಲಾಗುವುದು. ರೈತರ ಹೆಸರಿನ ಆಧಾರ್ ಸಂಖ್ಯೆಗೆ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಮಾತ್ರ ಡಿಬಿಟಿ ಮುಖಾಂತರ ಹಣ ಪಾವತಿಸಲಾಗುವುದು.

ನೊಂದಣಿಗಾಗಿ ರೈತರು ಪಹಣಿ/ಆರ್.ಟಿಸಿ, ಆಧಾರ್, ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ (ಆಧಾರ್ ಜೋಡಣೆ ಕಡ್ಡಾಯ) ಭಾವಚಿತ್ರ ಹಾಗೂ ಫ್ರೂಟ್ಸ್ (FRUITS) ತಂತ್ರಾಂಶದ ರೈತರ ನೊಂದಣಿ ಸಂಖ್ಯೆ (FID) ಯನ್ನು ಕಡ್ಡಾಯವಾಗಿ ತರಬೇಕು. ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರ ಅಥವಾ ತಾಲೂಕಿನ ತೋಟಗಾರಿಕೆ/ಕೃಷಿ ಇಲಾಖೆಯಿಂದ ಫ್ರೂಟ್ಸ್ ತಂತ್ರಾಂಶದ ರೈತರ ನೊಂದಣಿ ಸಂಖ್ಯೆ ಪಡೆಯಬೇಕು. ಕಳೆದ ಸಾಲಿನಲ್ಲಿ ಅರಿಶಿಣ ಬೆಳೆದು ಬೆಳೆ ಸಮೀಕ್ಷೆಯಲ್ಲಿ ಅರಿಶಿಣ ಬೆಳೆ ಎಂದು ಆರ್‌ಟಿಸಿ ವಾರು ನಮೂದಾಗಿರುವ ರೈತರು ಮಾತ್ರ ಯೋಜನೆಗೆ ಅರ್ಹರಾಗಿರುತ್ತಾರೆ.

ನೊಂದಣಿ ಹಾಗೂ ಖರೀದಿ ಕೇಂದ್ರವು ಸರ್ಕಾರಿ ರಜೆ ದಿನಗಳಂದು ಕಾರ್ಯನಿರ್ವಹಿಸುವುದಿಲ್ಲ. ಏಪ್ರಿಲ್ 20ರಂದು ಖರೀದಿ ಕೇಂದ್ರವು ಮುಕ್ತಾಯವಾಗಲಿದೆ. ಜಿಲ್ಲೆಯ ರೈತರು ಯೋಜನೆಯ ಸದುಪಯೋಗ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ತಾಲೂಕಿನ ತೋಟಗಾರಿಕೆ/ಕೃಷಿ ಮಾರಾಟ ಇಲಾಖೆ ಅಧಿಕಾರಿಗಳು (ಎಪಿಎಂಸಿ), ಸಹಕಾರ ಇಲಾಖೆಯ ಉಪನಿಬಂಧಕರು, ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸುವಂತೆ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಚಾಮರಾಜನಗರ, ಏ.10– ಡಾ ಬಾಬಾ ಸಾಹೇಬ್ ಅಂಬೇಡ್ಕರ್‌ರವರ 132 ಜನ್ಮ ದಿನಾಚರಣೆ ಅಂಗವಾಗಿ ರಾಮ ಸಮುದ್ರದ ವಾರ್ಡ್ ನಂಬರ್ 27ರಲ್ಲಿ ಅಂಬೇಡ್ಕರ್ ಕಪ್–2023 ಕ್ರಿಕೆಟ್ ಪಂದ್ಯಾವಳಿಗೆ ಯಜಮಾನರಾದ ಚೆನ್ನಂಜಯ್ಯ ಚಾಲನೆ ನೀಡಿದರು.


ರಾಮಸಮುದ್ರದ ಡಾ. ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ವತಿಯಿಂದ ಆಯೋಜಿಸಿದ್ದ ಈ ಪಂದ್ಯಾವಳಿಗೆ ರಾಮಸಮುದ್ರದ ಪಣ್ಣದಕೇರಿ ಪಂಟರ್ಸ್, ಹೊಸ ಸೈಟ್ ಟೀಮ್, ಫ್ರೆಂಡ್ಸ್ ಟೀಮ್, ದೊಡ್ಡ ಇಸ್ಕೂಲ್ ಟೀಮ್ ಎಂಬ ನಾಲ್ಕು ತಂಡಗಳು ಭಾಗವಹಿಸಿದ್ದು, ಐಪಿಎಲ್ ಮಾದರಿಯಲ್ಲಿ ನಾಲ್ಕು ತಂಡಗಳಿಗೂ ಮೂರು ಪಂದ್ಯಗಳಿದ್ದು, ಅದರಲ್ಲಿ ಹೆಚ್ಚು ಅಂಕ ಗಳಿಸಿದ ಮೊದಲೆರಡು ತಂಡಗಳಿಗೆ ಫೈನಲ್ ನಡೆಸಿ ಗೆದ್ದ ತಂಡಕ್ಕೆ ಸಂಘದ ವತಿಯಿಂದ ಪಾರಿತೋಷಕ ನೀಡಿ ಗೌರವಿಸಲಾಗುವುದು ಎಂದು ಸಂಘದ ಅಧ್ಯಕ್ಷ ಸುಹಾಸ್ ಹೇಳಿದರು.

ಕಲೆ, ಸಾಹಿತ್ಯ, ಶಿಕ್ಷಣ ಎಲ್ಲಾ ರಂಗದಲ್ಲೂ ರಾಮಸಮುದ್ರ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದ್ದು, ಕ್ರೀಡೆಗೆ ಹೆಚ್ಚು ಒಲವು ತೋರುವ ನಿಟ್ಟಿನಲ್ಲಿ ಕ್ರಿಕೆಟ್ ಆಟದ ಜೊತೆ ಮಹಿಳೆಯರಿಗೂ ಆಟೋಟಗಳನ್ನು ಅಂಬೇಡ್ಕರ್ ಜಯಂತಿಯ ಅಂಗವಾಗಿ ಆಯೋಜಿಸಲಾಗುವುದು ಎಂದು ಅಂಬೇಡ್ಕರ್ ಯುವಕ ಸಂಘದ ಕಾರ್ಯದರ್ಶಿ ಮನೋಜ್ ಮಸು ಹೇಳಿದರು.

ಈ ಸಂದರ್ಭದಲ್ಲಿ ಯಜಮಾನರುಗಳಾದ ರೇವಣ್ಣ ಮಹದೇವಯ್ಯ, ಫೋಲ್ಸ್, ಶಿವರಾಜು, ಬಿ. ಮಹದೇವಯ್ಯ, ಮಲ್ಲಯ್ಯ, ಮಹದೇವಸ್ವಾಮಿ ಹಾಗೂ ಅಂಬೇಡ್ಕರ್ ಸಂಘದ ಉಪಾಧ್ಯಕ್ಷ ಕಾರ್ತಿಕ್ ಬಿ ಪದಾಧಿಕಾರಿಗಳಾದ ನಿತಿನ್, ಕಾರ್ತಿಕ್ ಆರ್.ಸಿ, ಕಿರಣ್, ರಾಜೇಂದ್ರ, ಪ್ರಸಾದ್, ಆರ್.ಎಸ್. ಮೋಹನ್ ಹಾಗೂ ಕ್ರಿಕೆಟ್ ಆಟಗಾರರಾದ ಸಾಗರ್, ಮನೋಹರ್, ಮುಜಿ, ಶಿವು, ರವಿಚಂದ್ರನ್, ರಾಜೀವ್, ಪ್ರದೀಪ್, ಮೈಕಲ್, ಗುಂಡ, ನಿತಿನ್, ಪ್ರಮೋದ್, ರಮೇಶ್, ಹೇಮಂತ್ ಇನ್ನಿತರರಿದ್ದರು.

ಗುಂಡ್ಲುಪೇಟೆ ಕ್ಷೇತ್ರದಲ್ಲಿ ಬಿಜೆಪಿಗೆ ಉತ್ತಮ ಪ್ರತಿಕ್ರಿಯೆ

ಶಾಸಕ ನಿರಂಜನ್‌ಕುಮಾರ್ ವಿಶ್ವಾಸ




ಗುಂಡ್ಲುಪೇಟೆ, ಏ.10– ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಬಿ.ಜೆ.ಪಿ. ಪರ ಕ್ಷೇತ್ರದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಸೋಮವಾರ ತಾಲೂಕಿನ ಯಡವನ ಹಳ್ಳಿ ಸಮೀಪ ಓಂಕಾರ ಸಿದ್ದೇಶ್ವರ ದೇವ ಸ್ಥಾನದಲ್ಲಿ ಪೂಜೆ ಸಲ್ಲಿಸಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮತಯಾಚನೆ ಮಾಡಿ ಅವರು ಮಾತನಾಡಿದರು. ಕಳೆದ ಎಂಟು ವರ್ಷಗಳಿಂದ ನರೇಂದ್ರ ಮೋದಿ ದೇಶದ ಅಭಿವೃದ್ಧಿಗಾಗಿ ಮಾಡುತ್ತಿರುವ ಕಾರ್ಯಗಳು ಜನರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ತಾವು ಶಾಸಕರಾಗಿ ಆಯ್ಕೆಯಾದ ನಂತರ 800 ಕೋಟಿ ವೆಚ್ಚದಲ್ಲಿ ರಸ್ತೆ, ಹಿಂದುಳಿದ ವರ್ಗಗಳ ಜನರ ಬಡಾವಣೆಗಳ ಅಭಿವೃದ್ದಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಎಲ್ಲಾ ವರ್ಗಗಳ ಜನರಿಗೂ ಬೇಡಿಕೆಗನುಸಾರ ಸಮುದಾಯ ಭವನಗಳು, ಸಿಸಿ ರಸ್ತೆ, ಚರಂಡಿ ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ತಾಲೂಕಿನ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಲ್ಲಿ ನದಿ ನೀರು ತುಂಬಿಸಿದ್ದು ಹಾಗೂ ಈ ಬಾರಿ ಉತ್ತಮ ಮಳೆ ಬಿದ್ದಿದ್ದರಿಂದ ಕೆರೆಕಟ್ಟೆಗಳು ತುಂಬಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಬಿ.ಜೆ.ಪಿ. ಪರ ಕ್ಷೇತ್ರದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಆದ್ದರಿಂದಲೇ ತಾಲೂಕಿನಲ್ಲಿಯೂ ವಿವಿಧ ಪಕ್ಷಗಳ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಯಾಗುತ್ತಿದ್ದಾರೆ ಎಂದು ಹೇಳಿದರು.

ಸೇರ್ಪಡೆ: ತಾಲೂಕಿನ ಸೋಮಹಳ್ಳಿ ಗ್ರಾಮದ ಮುಖಂಡ ಎಸ್.ಎಸ್.ಗುರು ಪ್ರಸಾದ್ ಶಾಸಕ ಸಿ.ಎಸ್.ನಿರಂಜನಕುಮಾರ್ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲಾಧ್ಯಕ್ಷ ಡಿ.ಪಿ.ಜಗದೀಶ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹೇಶ್, ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಾಗರಾಜಪ್ಪ, ಮುಖಂಡರಾದ ಕೊಡಸೋಗೆ ಶಿವಬಸಪ್ಪ, ಕಮರಹಳ್ಳಿ ಶ್ರೀಕಂಠಪ್ಪ, ಹಂಗಳ ನಂದೀಶ್ ಸೇರಿದಂತೆ ಹಲವರು ಇದ್ದರು.

ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಆಲೂರು ಪ್ರದೀಪ್



ಚಾಮರಾಜನಗರ, ಏ.10– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ಆಲೂರು ಎ.ಎಸ್. ಪ್ರದೀಪ್ ಅವರನ್ನು ನೇಮಕ ಮಾಡಲಾಗಿದೆ. ಜಿಲ್ಲಾ ಪ್ರಚಾರ ಸಮಿತಿಯ ಅಧ್ಯಕ್ಷರಾದ ಎಸ್. ಶಿವಕುಮಾರ್ ಅವರು ಪ್ರದೀಪ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ತಮಗೆ ವಹಿಸಿರುವ ಈ ಜವಾಬ್ದಾರಿಯನ್ನು ವಹಿಸಿಕೊಂಡು ಪಕ್ಷದ ಸೂಚನೆ ಹಾಗೂ ಸ್ಥಳೀಯ ನಾಯಕರುಗಳ ಸಹಕಾರದೊಂದಿಗೆ ಪಕ್ಷದ ಸಬಲೀಕರಣದಲ್ಲಿ ತಮ್ಮನ್ನು ತೊಡಗಿಸಿಕೊಂಡು ಪಕ್ಷದ ಸಂಘಟನೆಗೆ ಶ್ರಮಿಸಲು ಆದೇಶದಲ್ಲಿ ತಿಳಿಸಲಾಗಿದೆ. ಎಪಿಎಂಸಿ ನಿರ್ದೇಶಕರಾಗಿರುವ ಆಲೂರು ಎ.ಎಸ್. ಪ್ರದೀಪ್ ಅವರು ಕಾಂಗ್ರೆಸ್ ಅಸಂಘಟಿತ ಕಾರ್ಮಿಕ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ಈ ಹಿಂದೆ ಸೇವೆ ಸಲ್ಲಿಸಿದ್ದರು. ಪಕ್ಷ ನಿಷ್ಠೆಯಿಂದ ಇರುವ ಪ್ರದೀಪ್ ಅವರನ್ನು ಗುರುತಿಸಿ ಅವರಿಗೆ ಈ ಹುದ್ದೆ ನೀಡಲಾಗಿದೆ.

ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ

ಹೆಚ್.ಎಂ. ಗಣೇಶ್‌ಪ್ರಸಾದ್ ವಿಶ್ವಾಸ

ಗುಂಡ್ಲುಪೇಟೆ: ಬಿಜೆಪಿ ದುರಾಡಳಿತದಿಂದ ಬೇಸತ್ತ ಜನತೆ ಇದನ್ನು ಕಿತ್ತು ಹಾಕಲು ನಿರ್ಧರಿಸಿದ್ದರಿಂದ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ.ಗಣೇಶ್‌ಪ್ರಸಾದ್ ಹೇಳಿದರು.

ತಾಲೂಕಿನ ಲಕ್ಕೂರು, ಗುರುವಿನಪುರ ಮುಂತಾದ ಗ್ರಾಮಗಳಲ್ಲಿ ಮತಯಾಚನೆ ನಡೆಸಿ ಅವರು ಮಾತನಾಡಿದರು. ಬಿಜೆಪಿ ತನ್ನ ಜನವಿರೋಧಿ ನೀತಿಗಳಿಂದ ಶ್ರೀಸಾಮಾನ್ಯರ ಬದುಕನ್ನು ನರಕವಾಗಿಸಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ತಾನು ಭರವಸೆ ನೀಡಿದಂತೆ ಪ್ರತಿ ಕುಟುಂಬಕ್ಕೆ 10 ಕೆಜಿ ಅಕ್ಕಿ, ಮಹಿಳೆಯರಿಗೆ 2 ಸಾವಿರ ಮಾಸಿಕ ಧನ, ಉಚಿತ ವಿದ್ಯುತ್ ನೀಡಲಿದೆ. ಆದ್ದರಿಂದ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಮತನೀಡಿ ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಲಕ್ಕೂರು ಗ್ರಾಮದಲ್ಲಿ ಸುಮಾರು 75ಕ್ಕೂ ಹೆಚ್ಚಿನ ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡಪ್ರಸಾದ್, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಎಪಿಎಂಸಿ ಮಾಜಿ ಸದಸ್ಯ ಮೃತ್ಯುಂಜಯಪ್ಪ, ಮುಖಂಡ ಚಂದ್ರು ಸೇರಿದಂತೆ ಹಲವರು ಇದ್ದರು.



ಗುಂಡ್ಲುಪೇಟೆ ತಾಲೂಕಿನ ಲಕ್ಕೂರು ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾದರು.

ಒಂದನೇ ಪುಟದಿಂದ

ಕಬ್ಬಿಣದ ಕಡಲೆಯಾಗಿರುವ 40 ಕ್ಷೇತ್ರ

ಮಾನ್ಯತೆ ದೊರೆತಿಲ್ಲ. ಅಷ್ಟೇ ಅಲ್ಲ, ಸಂಸದೀಯ ಮಂಡಳಿ ಸದಸ್ಯರಾಗಿರುವ ಬಿ.ಎಸ್. ಯಡಿಯೂರಪ್ಪ ಅವರು 25 ಕ್ಷೇತ್ರಗಳಲ್ಲಿ ತಮ್ಮ ಬೆಂಬಲಿಗರಿಗೆ ಟಿಕೆಟ್ ದೊರಕಿಸಲು ನಡೆಸಿದ ಯತ್ನಕ್ಕೂ ಶಾ ಅವಕಾಶ ನೀಡಿಲ್ಲ. ಯಡಿಯೂರಪ್ಪ ಅವರನ್ನು ಹೊರಗಿಟ್ಟು, ಅಭ್ಯರ್ಥಿಗಳ ಆಯ್ಕೆ ಕಸರತು ನಡೆಸಿದ ಶಾ, ಪ್ರತ್ಯೇಕವಾಗಿ ಯಡಿಯೂರಪ್ಪ ಅವರ ಜತೆ ಮುಖಾಮುಖಿ ಸಮಾಲೋಚನೆ ನಡೆಸಿ, ಕೆಲವು ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದಾರೆ. ಪಟ್ಟಿ ಹೊರಬಿದ್ದ ನಂತರ ಉಂಟಾಗಬಹುದಾದ ಬಂಡಾಯ ಶಮನಕ್ಕೆ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚೆಯಾಗಿದೆ.

ಸಿದ್ಧಗೊಂಡಿರುವ ಪಟ್ಟಿಯನ್ನು ಯಾವುದೇ ಕ್ಷಣದಲ್ಲಿ ಬಿಡುಗಡೆ ಮಾಡಬಹುದು. ಆದರೆ, 40 ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕ್ಷಿಪ್ರ ಸಮೀಕ್ಷೆ ನಡೆಸಿ ಅಭ್ಯರ್ಥಿಗಳ ಆಯ್ಕೆ ಮಾಡೋಣ ಎಂಬ ತೀರ್ಮಾನಕ್ಕೆ ವರಿಷ್ಠರು ಬಂದಿದ್ದಾರೆ.

ನಾನಾ ದೃಷ್ಟಿಕೋನಗಳನ್ನು ಮುಂದಿಟ್ಟುಕೊಂಡು ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಮೂರು ಹಂತದಲ್ಲಿ ಅಭ್ಯರ್ಥಿಗಳ ಆಯ್ಕೆ ನಡೆದಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಎರಡು ಹಂತದಲ್ಲಿ 18 ಗಂಟೆಗಳ ಕಾಲ ಸಭೆ ನಡೆಸಿ ಅಭ್ಯರ್ಥಿಗಳ ಮೊದಲ ಪಟ್ಟಿ ಸಿದ್ಧಪಡಿಸಿದರು. ಆ ಪಟ್ಟಿಗೆ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ನಿನ್ನೆ ನಡೆದ ಸಂಸದೀಯ ಮಂಡಳಿ ಸಭೆಯಲ್ಲಿ ಕೆಲ ಬದಲಾವಣೆ ಬಗ್ಗೆ ಪ್ರಸ್ತಾಪವಾದುದಲ್ಲದೆ, ಗೃಹ ಸಚಿವ ಅಮಿತ್ ಶಾಗೆ ಪಟ್ಟಿ ಅಂತಿಮಗೊಳಿಸುವ ಅಧಿಕಾರ ನೀಡಿತು. ಪ್ರಧಾನಿ ಅವರ ಸೂಚನೆ ಮೇರೆಗೆ ಶಾ, ಇಂದು ಇಡೀ ದಿನ ರಾಜ್ಯ ವಿಧಾನಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಕುರಿತ ಕಸರತ್ತು ನಡೆಸಿದರು. ಇದರ ನಡುವೆ ನಡ್ಡಾ ಅವರು, ಮತ್ತೊಂದು ಸಭೆ ನಡೆಸಿ ಅಭ್ಯರ್ಥಿಗಳ ಬಗ್ಗೆ ಪರಾಮರ್ಶಿಸಿದ್ದಾರೆ. ಇದರ ನಡುವೆಯೇ ಕೆಲ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯ ಸಂಬಂಧ ಯಡಿಯೂರಪ್ಪ ಮತ್ತು ಸಂತೋಷ್ ನಡುವೆ ಭಿನ್ನಾಭಿಪ್ರಾಯ ಮೂಡಿದೆ. ಇದನ್ನು ಸರಿಪಡಿಸಲೆಂದೇ ಶಾ, ಯಡಿಯೂರಪ್ಪ ಅವರೊಂದಿಗೆ ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿದರೆಂದು ಹೇಳಲಾಗಿದೆ.

15 ವರ್ಷದ ಹಿಂದೆಯೇ ಷಡ್ಯಂತರ ನಡೆದಿತ್ತು...

ಪೋಷಾಕು ಧರಿಸುವ ಅವರ ಬಗ್ಗೆ ಮಾತಾಡಿದರೆ, ನನಗೆ ಅವರ ಧಿರಿಸಿನ ಬಗ್ಗೆ ಗೊತ್ತೇ ಇಲ್ಲ ಎನ್ನುವುದು ಸಚಿವ ಅಶ್ವತ್ಥನಾರಾಯಣ ಅವರ ಕುಹಕದ ಮಾತು ಎಂದು ಕುಮಾರಸ್ವಾಮಿ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಇನ್ನೊಬ್ಬರು; ಸಿಟಿ ರವಿ. ಈ ಮಹಾಶಯರು, ಮೋದಿ ಅವರ ಬಗ್ಗೆ ಟೀಕೆ ಮಾಡಿದರೆ ಅವರ ಎತರಕ್ಕೆ ಏರಲು ಸಾಧ್ಯವಿಲ್ಲ ಎಂದು ಆಣಿಮುತ್ತು ಉದುರಿಸಿದ್ದಾರೆ. ನಾವು ಅವರ ಮಟ್ಟಕ್ಕೆ ಏರುವುದೂ ಇಲ್ಲ, ಸಿ.ಟಿ.ರವಿ ಅವರ ಮಟ್ಟಕ್ಕೆ ಇಳಿಯುವುದೂ ಇಲ್ಲ. ಆದರೆ, ಕರ್ನಾಟಕವನ್ನು ಗುಜರಾತಿಗಳಿಗೆ ಒತ್ತೆ ಇಡುವ ಪಾಪದ ಕೆಲಸವನ್ನಂತೂ ನಾವು ಮಾಡುತ್ತಿಲ್ಲ ಎಂದು ಕಾಲೆಳೆದಿದ್ದಾರೆ.

ಅಸಲಿ ವಿಷಯ ಅದಲ್ಲ! ಈಗಲ್ಲ, ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗಲೇ ಕೆಎಂಎಫ್ ಅನ್ನು ಮುಗಿಸಲು ಸುಪಾರಿ ಕೊಡಲಾಗಿತ್ತು!! ಅಂದರೆ 2008ರಲ್ಲೇ ಕನ್ನಡಿಗರ ಮೇಲೆ ಅಮುಲ್ ಅನ್ನು ಹೇರಿ, ನಂದಿನಿಯ ಕತ್ತು ಹಿಸುಕುವ ಕರಾಳ ಪ್ರಯತ್ನ ನಡೆದಿತ್ತು. ಆಗ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಅಮುಲ್ ಮಾರಾಟ ಘಟಕ ಸ್ಥಾಪಿಸಲು ಹೊರಟಿತ್ತು ಅಂದಿನ ರಾಜ್ಯ ಬಿಜೆಪಿ ಸರಕಾರ. ಅಂದರೆ, 15 ವರ್ಷಗಳ ಹಿಂದೆಯೇ ಅಮುಲ್ ಅನ್ನು ಉದ್ಧರಿಸಲು, ನಂದಿನಿಯ ಕತ್ತು ಕತ್ತರಿಸಲು ಬಿಜೆಪಿ ಹೊರಟಿತ್ತು!! ಎಂದು ಅವರು ಹೇಳಿದ್ದಾರೆ. ಅಂದು ಅಮುಲ್ ಘಟಕದ ಬಗ್ಗೆ ಜೆಡಿಎಸ್ ಪಕ್ಷ ಭಾರೀ ವಿರೋಧ ವ್ಯಕ್ತಪಡಿಸಿತ್ತು, ಕೆಎಂಎಫ್‌ನ ಅಂದಿನ ಅಧ್ಯಕ್ಷರಾಗಿದ್ದ ಹೆಚ್.ಡಿ.ರೇವಣ್ಣ ಅವರು, "ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಅಮುಲ್ ಹಾಲು ಮಾರಾಟಕ್ಕೆ ಅವಕಾಶ ಕೊಡುವುದಿಲ್ಲ" ಎಂದು ಕಡ್ಡಿತುಂಡು ಮಾಡಿದಂತೆ ಹೇಳಿದ್ದರು.

ಅಂದು ಬಿಜೆಪಿಗರು ಮೋದಿ ಅವರನ್ನು ಮೆಚ್ಚಿಸಲು ಅಮುಲ್ ಪರ ವಕಾಲತ್ತು ವಹಿಸಿ,ನಂದಿನಿಯನ್ನು ಮುಗಿಸಲು ಹೊರಟಿದ್ದರು. ಅಂದಿನ ಮುಖ್ಯಮಂತ್ರಿಗಳೂ ಸೇರಿ ಬಿಜೆಪಿ ಮುಂಚೂಣಿ ನಾಯಕರು ಅಮುಲ್ ಪರ ಬ್ಯಾಟ್ ಬೀಸಿದ್ದರು.ಈಗ ಪಾತ್ರಗಳು ಬದಲಾಗಿವೆ. ಸಿಟಿ ರವಿ, ಸಚಿವರಾದ ಸುಧಾಕರ್, ಅಶ್ವತ್ಥನಾರಾಯಣ ಇತರರು ರಂಗದ ಮೇಲಿದ್ದಾರಷ್ಟೇ ಎಂದು ಮಾಜಿ ಮುಖ್ಯಮಂತ್ರಿ ಅವರು ಟಾಂಗ್ ನೀಡಿದ್ದಾರೆ.

ಕರ್ನಾಟಕವನ್ನು ಗುಜರಾತಿನ ವಸಾಹತು ಮಾಡುವ ಬಿಜೆಪಿಯ ಹುನ್ನಾರ ಇಂದು ನಿನ್ನೆಯದಲ್ಲ. ವೈಬ್ರೆಂಟ್ ಗುಜರಾತಿನ ಮಹತ್ವಾಕಾಂಕ್ಷೆಯ ಹಿಂದೆಯೇ ಕರ್ನಾಟಕವನ್ನು ಕೆಳಕ್ಕೆ ಕೆಡಹುವ ಬಿಜೆಪಿಯ ಧೂರ್ತ ಅಜೆಂಡಾ ಈ ಚುನಾವಣೆ ಹೊತ್ತಿನಲ್ಲಿ ಬಟಾ ಬಯಲಾಗಿದೆ. 15 ವರ್ಷಗಳ ಹಳೆಯ ಸಂಚಿಗೆ ಮತ್ತೆ ಜೀವ ನೀಡಲಾಗಿದೆ. ಕರ್ನಾಟಕದ ಬ್ಯಾಂಕುಗಳು ಹೋದವು, ಭದ್ರಾವತಿಯ ವಿಐಎಸ್‌ಎಲ್ ಇನ್ನೇನು ಯಾರೋ ಗುಜರಾತಿ ಉದ್ದಿಮೆದಾರನ ಪಾಲಾಗುವ ಹಂತದಲ್ಲಿದೆ. ಈಗ ನಂದಿನಿ... ಲಾಭದಾಯಕವಾಗಿರುವ ರಾಜ್ಯದ ಒಂದೊಂದೇ ಉದ್ಯಮವನ್ನು ಮುಗಿಸಲು ಬಿಜೆಪಿ ಹೊಂಚು ಹಾಕಿರುವುದು ಸ್ಪಷ್ಟ ಎಂದು ಕುಮಾರಸ್ವಾಮಿ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಕೈಗಾರಿಕೆ,ಐಟಿಬಿಟಿ,ವಿಜ್ಞಾನ,ಆವಿಷ್ಕಾರ,ಉದ್ಯೋಗ ಸೃಷ್ಟಿ ಸೇರಿ ಜಿಎಸ್ ಟಿ ಕಟ್ಟುವುದರಲ್ಲಿಯೂ ಮುಂಚೂಣಿಯಲ್ಲಿರುವ ಕರ್ನಾಟಕವು, ಭಾರತವೇ ಹೆಮ್ಮೆಪಡುವ ರಾಜ್ಯ. ಇಂಥ ರಾಜ್ಯವನ್ನು ಆರ್ಥಿಕವಾಗಿ ದಿವಾಳಿಯೆಬ್ಬಿಸಿ ಶಾಶ್ವತವಾಗಿ ದಿಲ್ಲಿಯ ಮುಂದೆ ಭಿಕ್ಷಾಪಾತ್ರೆ ಹಿಡಿದು ನಿಲ್ಲುವಂತೆ ಮಾಡುವುದೇ ಬಿಜೆಪಿಯ ಕುಟಿಲ ನೀತಿ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿಯೊಂದನ್ನೂ ಪ್ರಶ್ನಿಸುವ, ನ್ಯಾಯ ಕೇಳುವ ಕನ್ನಡಿಗರನ್ನು ದುರ್ಬಲಗೊಳಿಸುವುದೂ ಎಂದರೆ, ಆರ್ಥಿಕವಾಗಿ ಕರ್ನಾಟಕದ ಬೆನ್ನುಮೂಳೆ ಮುರಿಯುವುದು. ಉತ್ತರಕ್ಕೆ ಬೆಣ್ಣೆ, ದಕ್ಷಿಣಕ್ಕೆ ಸುಣ್ಣ ಎಂಬ ನೀತಿ ಅನುಸರಿಸುವ ಬಿಜೆಪಿ ಡಬಲ್ ಎಂಜಿನ್ ಸರಕಾರವು, ದಕ್ಷಿಣದ ರಾಜ್ಯಗಳ ಜತೆ ಡಬಲ್ ಗೇಮ್ ಆಡುತ್ತಿದೆ. ಇಂದು ಕರ್ನಾಟಕ; ನಾಳೆ ತಮಿಳುನಾಡು, ನಾಡಿದ್ದು ಆಂಧ್ರ ಪ್ರದೇಶ ಮತ್ತು ತೆಲಂಗಾಣ, ಆಚೆ ನಾಡಿದ್ದು ಕೇರಳ!! ಬಿಜೆಪಿಯ ಸುಪಾರಿ ಆಟ ಶುರುವಾಗಿದೆ!!! ಎಂದು ಕುಮಾರಸ್ವಾಮಿ ಅವರು ಮಾರ್ಮಿಕವಾಗಿ ಹೇಳಿದ್ದಾರೆ.

ಸಿದ್ಧವಾಗಿದೆ; ಒಂದೆರಡು ದಿನದಲ್ಲಿ ಬಿಡುಗಡೆ

ನಂದಿನಿ ಬ್ರ್ಯಾಂಡ್ ಮುಗಿಸಲು ಬಿಜೆಪಿಯವರು ಮುಂದಾಗಿದ್ದಾರೆ. ಅಮುಲ್ ಉಂಟು ಮಾಡುವ ಪರಿಣಾಮ ಅವರಿಗೆ ಗೊತ್ತಿಲ್ಲ. ಅವರ ಕಣ್ಣಿಗೆ ಮೋದಿ ಬಿಟ್ಟರೆ ಬೇರೆ ಏನೂ ಕಾಣುತ್ತಿಲ್ಲ. ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳದಿದ್ದರೆ ನಂದಿನಿ ಮುಳುಗಲಿದೆ ಎಂದರು. ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಳ್ಳಲು ಕುಮಾರಸ್ವಾಮಿ ಹೆಲಿಕಾಪ್ಟರ್‌ನಲ್ಲಿ ಬಂದಿಳಿದರು. ಚುನಾವಣಾಧಿಕಾರಿಗಳು ಹಾಗೂ ಪೊಲೀಸರು ಹೆಲಿಕಾಪ್ಟರ್ ತಪಾಸಣೆ ಮಾಡಿದರು. ಸಮಾವೇಶದಲ್ಲಿ ಪಾಲ್ಗೊಳ್ಳಲು ಹೊರಟ ಜೆಡಿಎಸ್ ಕಾರ್ಯಕರ್ತರ ದ್ವಿಚಕ್ರ ವಾಹನಗಳಿಗೆ ಇಲ್ಲಿನ ಬಂಕ್‌ನಲ್ಲಿ 100 ರೂ. ಪೆಟ್ರೋಲ್ ಉಚಿತವಾಗಿ ಹಾಕುತ್ತಿದ್ದದ್ದು ಕಂಡುಬಂತು. ಬಂಕ್‌ನ ಸೀಲ್ ಇದ್ದ ಚೀಟಿ ಕೊಟ್ಟವರಿಗೆ ಈ ಸೌಲಭ್ಯ ಕಲ್ಪಿಸಿದ್ದು, ಕಾರ್ಯಕರ್ತರು ಮುಗಿಬಿದ್ದಿದ್ದರು.

ಜೆಡಿಎಸ್ ಅಭ್ಯರ್ಥಿ ಸಮೃದ್ಧಿ ಮಂಜುನಾಥ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಕಾರ್ಯಕರ್ತರು ಕುಮಾರಸ್ವಾಮಿ ಅವರಿಗೆ ಎರಡು ಕುರಿ, ಕಂಬಳಿ ಹಾಗೂ ಬೆಳ್ಳಿ ಗದೆಯನ್ನು ಉಡುಗೊರೆಯಾಗಿ ನೀಡಿದರು.

ಕುಟುಂಬದ ವಿರುದ್ಧ ಕೇಸ್ ದಾಖಲು

ಬೆಂಗಳೂರಿನಲ್ಲಿ ಮನೆ ಕೊಡಿಸುವಂತೆ ಒತ್ತಾಯಿಸುತ್ತಿದ್ದರು. ದೈಹಿಕ ಹಲ್ಲೆ ಮಾಡಿದ್ದಲ್ಲದೇ, ಅವಾಚ್ಯ ಪದಗಳಿಂದ ನಿಂದಿಸುತ್ತಿದ್ದರು. ಕೊನೆಗೆ ಆಕಾಶ್ ಮಡಿಕೇರಿಯಲ್ಲಿರುವ ತನ್ನ ಸರ್ಕಾರಿ ಅತಿಥಿ ಗೃಹದಿಂದ ನನ್ನನ್ನು ಹೊರ ಹಾಕಿದ್ದಲ್ಲದೇ, ವಿಚ್ಛೇಧನಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಈ ಸಂಬಂಧ ಮೈಸೂರಿನ ಶಾದನಹಳ್ಳಿಯಲ್ಲಿರುವ ಅವರ ಕುಟುಂಬದವರನ್ನು ಭೇಟಿ ಮಾಡಿ ಸಂಧಾನ ನಡೆಸಲು ಇದೇ ಮಾರ್ಚ್ 5ರಂದು ನಿವೃತ್ತ ಐಪಿಎಸ್ ಅಧಿಕಾರಿಯಾಗಿರುವ ತಮ್ಮ ತಂದೆ ಹಾಗೂ ಕುಟುಂಬದವರು ನನ್ನನ್ನು ಕರೆದುಕೊಂಡು ಹೋದಾಗ ಎಲ್ಲಾ ನಾಲ್ವರು ಆರೋಪಿಗಳು ಅವಾಚ್ಯ ಪದಗಳಿಂದ ನಿಂದಿಸಿ ಮನೆಯಿಂದ ಹೊರ ಹಾಕಿದ್ದಾರೆ ಎಂದು ವಂದನಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವರ್ಣರಂಜಿತ ಮತದಾರರ ಗುರುತಿನ ಚೀಟಿ

ಈ ಹೊಸ ಮತ ದಾರರ ಗುರುತಿನ ಚೀಟಿಯು ವರ್ಣ ರಂಜಿತವಾಗಿದ್ದು, ಪ್ಲಾಸ್ಟಿಕ್‌ನಿಂದ ತಯಾ ರಾಗುತ್ತಿದೆ. ಪಾನ್ ಇಂಡಿಯಾ ಮಟ್ಟದ ಈ ಕಾರ್ಡ್ ಉದ್ದುದ್ದದ ಬದಲು ಅಗಲ ವಾಗಿದ್ದು, ಪರ್ಸ್‌ನಲ್ಲಿ ಸುರಕ್ಷಿತವಾಗಿರಿಸಿ ಕೊಳ್ಳ ಬಹುದಾಗಿದೆ. ಬಾರ್‌ಕೋಡ್ ವಿನ್ಯಾಸ, ಡಿಜಿಟಲ್ ಸಹಿ, ಸ್ಪೈರಲ್ ಆಕಾರದ ಚುನಾವಣಾ ಕಾರ್ಡ್ ಸಂಖ್ಯೆ ಹೊಂದಿ ರುವ ಹೊಸ ಮಾದರಿ ಕಾರ್ಡ್ ಸುದೀರ್ಘ ಕಾಲದವರೆಗೆ ಬಾಳಿಕೆ ಬರಲಿದ್ದು, ಕಲರ್ ಫೋಟೋ ಇರುವುದರಿಂದ ಮತದಾರ ರನ್ನು ಸ್ಪಷ್ಟವಾಗಿ ಗುರುತಿಸಬಹುದಾ ಗಿದೆ. ಸಫ್ರಾನ್, ಹಸಿರು ಮತ್ತು ಬಿಳಿ ಸೇರಿ ತ್ರಿವರ್ಣದಿಂದ

ಕೂಡಿದ ಈ ಮತದಾರರ ಗುರುತಿನ ಚೀಟಿಯಲ್ಲಿ ಮತದಾರರ ಹೆಸರು, ತಂದೆ ಹೆಸರು, ಲಿಂಗ, ಜನ್ಮ ದಿನಾಂಕ, ವಿಳಾಸ, ಮತದಾರರ ವಿಧಾನಸಭಾ ಕ್ಷೇತ್ರವನ್ನು ನಮೂದಿಸಲಾಗಿದೆ. ಮತದಾರರ ನೋಂದಣಿ ಅಧಿಕಾರಿ (Electoral Registration Office) ಸಹಿಯು ಎಲೆಕ್ಟ್ರಾನಿಕ್ ಸಹಿಯಾಗಿದ್ದು, ವಿಶೇಷ ಮಾದರಿಯಲ್ಲಿರುವರಿಂದ ನೋಡಲು ಆಕರ್ಷಕವಾಗಿದೆ. ಹಳೆಯ ಕಾರ್ಡ್‌ಗಳನ್ನು ಬಿಳಿ ಹಾಳೆಯಲ್ಲಿ ಮುದ್ರಿಸಿ ಅದಕ್ಕೆ ಪ್ಲಾಸ್ಟಿಕ್ ಶೀಟಿನಿಂದ ಲ್ಯಾಮಿನೇಷನ್ ಮಾಡಲಾಗಿದೆ ಹಾಗೂ ಕಪ್ಪು-ಬಿಳುಪು ಫೋಟೋ ಸ್ಕ್ಯಾನ್ ಮಾಡಿರುವುದರಿಂದ ಮತದಾರರೇ ತಮ್ಮ ಭಾವಚಿತ್ರ ಗುರುತಿಸಲು ಸಾಧ್ಯವಾಗುವುದಿಲ್ಲ.

ಏ.15ರಿಂದ ಮುಕ್ತ ವಿವಿಯಿಂದ 'ಪ್ಲೇಸ್‌ಮೆಂಟ್ ಉತ್ಸವ'

● ಮೊದಲ ಹಂತದಲ್ಲಿ ಬಿ.ಕಾಂ, ಎಂಬಿಎ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ● ವಿದ್ಯಾರ್ಥಿಗಳಿಗೆ ಅನುಕೂಲ ಆಗುವಂತೆ ಆನ್‌ಲೈನ್ ಮೂಲಕ ಸಂದರ್ಶನ ● 15 ದಿನಗಳ ಈ ಉತ್ಸವದಲ್ಲಿ ಬಡ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ವಿಶ್ವಾಸ



ಮೈಸೂರು,ಏ.10(ಎಂಟಿವೈ)- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬಿ.ಕಾಂ, ಕಾಮರ್ಸ್ ಹಾಗೂ ಎಂಬಿಎ ವಿದ್ಯಾರ್ಥಿಗಳಿಗೆ ಏ.15ರಿಂದ 30 ರವರೆಗೆ ಆನ್‌ಲೈನ್ ಮೂಲಕ ಬೃಹತ್ 'ಪ್ಲೇಸ್‌ಮೆಂಟ್ ಉತ್ಸವ್' ಆಯೋಜಿಸಲಾಗಿದೆ ಎಂದು ಮುಕ್ತ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.

ಮುಕ್ತ ವಿವಿ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಕ್ತ ವಿವಿಯಲ್ಲಿ ಶಿಕ್ಷಣ ಪಡೆದಿರುವ ಹಾಗೂ ಪಡೆಯುತ್ತಿರುವ ವಿದ್ಯಾರ್ಥಿಗಳ ಹಿತ ಕಾಯಲು ಮುಕ್ತ ವಿವಿ ಹಲವು ಕಾರ್ಯಕ್ರಮ ರೂಪಿಸಿದೆ. ಈ ಬಾರಿ ನಡೆಸಲು ಉದ್ದೇಶಿಸಿರುವ ಉದ್ಯೋಗ ಮೇಳಕ್ಕೆ 'ಪ್ಲೇಸ್‌ಮೆಂಟ್ ಉತ್ಸವ್' ಹೆಸರಿಡಲಾಗಿದ್ದು, ರಾಜ್ಯದಾದ್ಯಂತ ಅಭ್ಯರ್ಥಿಗಳು ಬರಲು ಕಷ್ಟವಾಗುವುದರಿಂದ ಆನ್‌ಲೈನ್ ಮೂಲಕ ಸಂದರ್ಶನ ಎದುರಿಸಲು ಅವಕಾಶ ಮಾಡಿಕೊಡಲಾಗಿದೆ. ಈ ಬಾರಿ ಬಿ.ಕಾಂ, ಕಾಮರ್ಸ್ ಹಾಗೂ ಎಂಬಿಎ ವಿದ್ಯಾರ್ಥಿಗಳಿಗಾಗಿ ಉದ್ಯೋಗ ಮೇಳವನ್ನು ಸೀಮಿತಗೊಳಿಸಲಾಗಿದೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉದ್ದಿಮೆ- ಸಂಸ್ಥೆ ಸಮನ್ವಯ ಘಟಕ ಹಾಗೂ ಉದ್ಯೋಗ ಘಟಕ, ಪ್ರೊಫೈಲ್.ಇನ್ ಸಂಸ್ಥೆ ಸಹಯೋಗದೊಂದಿಗೆ ಪ್ಲೇಸ್‌ಮೆಂಟ್ ಉತ್ಸವ ನಡೆಸಲಾಗುತ್ತಿದೆ ರಾಜ್ಯದಾದ್ಯಂತ ಇರುವ ಮುಕ್ತ ವಿವಿ ವಿದ್ಯಾರ್ಥಿಗಳು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಬಹುದಾಗಿದೆ. 10ಕ್ಕೂ ಹೆಚ್ಚು ಕಂಪನಿಗಳಿಂದ 2 ಸಾವಿರಕ್ಕೂ ಅಧಿಕ ಉದ್ಯೋಗಾವಕಾಶಗಳಿವೆ. ಮೂರು ಹಂತಗಳಲ್ಲಿ ಉತ್ಸವ ಹಮ್ಮಿಕೊಳ್ಳಲಾಗಿದೆ ಮೊದಲ ಹಂತದಲ್ಲಿ ಡಿಜಿಟಲ್ ಬಯೋಡಾಟ ಸಿದ್ಧಪಡಿಸುವುದು. ವಿವಿಧ ಉದ್ಯೋಗಾವಕಾಶಗಳ ಮಾಹಿತಿ ಹಾಗೂ ಡಿಜಿಟಲ್ ಬಯೋಡಾಟ ಸಿದ್ಧಪಡಿಸಲು ಸಹಾಯ ನೀಡಲಾಗುವುದು. 2ನೇ ಹಂತದಲ್ಲಿ ದಾಖಲೆ ಪರಿಶೀಲನೆ ಹಾಗೂ ಎಚ್‌ಆರ್ ಸುತ್ತು. ಕಂಪನಿಗಳಿಗೆ ಅವಶ್ಯವಿರುವ ವಿದ್ಯಾರ್ಥಿಗಳ ದಾಖಲೆಗಳನ್ನು ಪರಿಶೀಲನೆ ಮಾಡಲಾಗುವುದು ಹಾಗೂ ಪ್ರಾಥಮಿಕ ಹಂತದ ಸಂದರ್ಶನ ನಡೆಸಲಾಗುವುದು ಎಂದು ತಿಳಿಸಿದರು.

ಮೂರನೇ ಹಂತದಲ್ಲಿ ನೇರ ಸಂದರ್ಶನ ಪ್ರಾಥಮಿಕ ಹಂತದ ಸಂದರ್ಶನಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅವರ ಹತ್ತಿರದ ಸ್ಥಳದಲ್ಲಿ ಮುಖಾಮುಖಿ ಸಂದರ್ಶನ ನಡೆಸಲಾಗುವುದು. ವಿದ್ಯಾರ್ಥಿಗಳು ಗೂಗಲ್ ಪ್ಲೇಸ್ಟೋರ್‌ನಿಂದ ಪ್ರೊಫೈಲ್.ಇನ್ ಡೌನ್‌ಲೌಡ್ ಮಾಡಿಕೊಳ್ಳಬಹುದು. ವಿವರಗಳಿಗೆ 9513373737 ಸಹಾಯವಾಣಿ ಸಂಪರ್ಕಿಸುವಂತೆ ತಿಳಿಸಿದರು.

ಮುಕ್ತ ವಿವಿಯದಲ್ಲಿ ಯುಜಿ ಮತ್ತು ಪಿಜಿ ಸೇರಿ 67 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಈ ಶೈಕ್ಷಣಿಕ ವರ್ಷದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. 1 ಲಕ್ಷ ಪ್ರವೇಶಾತಿ ಗುರಿ ಮುಟ್ಟುವ ನಿರೀಕ್ಷೆ ಇದೆ ಎಂದು ಹೇಳಿದರು.

ಪ್ರೊಫೈಲ್.ಇನ್ ವೆಂಕಟೇಶ್ ಮಾತನಾಡಿ, ಎಂಬಿಎ, ಎಂ.ಕಾಂ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳಿವೆ. ಮುತ್ತೂಟ್ ಫೈನಾನ್ಸ್, ಪೇಟಿಎಂ ಕಂಪನಿಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳಿವೆ. ವರ್ಕ್ ಫ್ರಂ ಹೋಂ ಅವಕಾಶವೂ ಕಂಪನಿಗಳು ನೀಡುತ್ತವೆ. ಅಲ್ಲದೆ ಉತ್ತಮ ಪ್ಯಾಕೇಜ್ ನೀಡುವುದಕ್ಕೆ ಕಂಪನಿಗಳು ಮುಂದೆ ಬಂದಿವೆ. ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಸುತ್ತಿನಲ್ಲಿ ಕಂಪನಿಗಳಿಗೆ ಸುಲಭವಾಗಲೆಂದು ಪ್ರೊಫೈಲ್.ಇನ್ ಸಂಸ್ಥೆ ಕ್ರಮ ಕೈಗೊಂಡಿದೆ ಎಂದರು.

ಉದ್ಯೋಗ ಘಟಕದ ನಿರ್ದೇಶಕಿ ಡಾ.ಆರ್.ಹೆಚ್.ಪವಿತ್ರಾ ಮಾತನಾಡಿ, 2021ರಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಉದ್ಯೋಗ ಮೇಳ ಆಯೋಜಿಸಲಾಗಿತ್ತು. 20 ಸಾವಿರ ಉದ್ಯೋಗ ಆಕಾಂಕ್ಷಿಗಳ ಮಾಹಿತಿ ಸಂಗ್ರಹಿಸಲಾಗಿದೆ. 2900 ಅಭ್ಯರ್ಥಿಗಳು ಪಾಲ್ಗೊಂಡು 535 ಜನರಿಗೆ ಉದ್ಯೋಗ ದೊರೆತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಕ್ತ ವಿವಿಯ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಹಣಕಾಸು ಅಧಿಕಾರಿ ಡಾ.ಎ.ಖಾದಿರ್ ಪಾಶ, ಅಕಾಡೆಮಿಕ್ ಡೀನ್ ಪ್ರೊ.ಲಕ್ಷ್ಮಿ, ಡೀನ್ ಅಧ್ಯಯನ ವಿಭಾಗ ಡೀನ್ ರಾಮನಾಥಂ ನಾಯ್ಡು, ಉದ್ದಿಮೆ ಸಂಸ್ಥೆಯ ಸಮನ್ವಯ ಘಟಕದ ಸಂಯೋಜಕಿ ಡಾ.ಹೆಚ್. ರಾಜೇಶ್ವರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ರಘು ಆಚಾರ್ ಜೆಡಿಎಸ್ ಸೇರ್ಪಡೆಗೆ ವಿಶ್ವಕರ್ಮ ಸಮಾಜದ ಜೆಡಿಎಸ್ ಮುಖಂಡರ ಸ್ವಾಗತ



ಮೈಸೂರು,ಏ.10(ಪಿಎಂ)- ವಿಶ್ವಕರ್ಮ ಸಮುದಾಯದ ಮುಖಂಡ ಜಿ.ರಘು ಆಚಾರ್ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರುತ್ತಿರುವುದು ಸ್ವಾಗತಾರ್ಹ ಎಂದು ತಿಳಿಸಿದ ವಿಶ್ವಕರ್ಮ ಸಮಾಜದ ಅಧ್ಯಕ್ಷ ಮತ್ತು ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಹುಯಿಲಾಳು ಕುಮಾರ್, ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸುವಂತೆ ತಮ್ಮ ಸಮುದಾಯದಲ್ಲಿ ಕೋರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಘು ಆಚಾರ್ ಸಮುದಾಯದ ಹಿತಕಾಯುವ ನಿಟ್ಟಿನಲ್ಲಿ ಜೆಡಿಎಸ್ ಸೇರ್ಪಡೆಯ ಒಳ್ಳೆಯ ನಿರ್ಧಾರ ಕೈಗೊಂಡಿದ್ದಾರೆ. ಅವರ ಈ ನಿರ್ಧಾರವನ್ನು ರಾಜ್ಯದ ವಿಶ್ವಕರ್ಮ ಸಮುದಾಯ ಗೌರವಿಸಲಿದೆ ಎಂದರು.

ಹಿಂದಿನಿಂದಲೂ ನಮ್ಮ ಸಮುದಾಯ ಕಾಂಗ್ರೆಸ್ ಬೆಂಬಲಿಸಿದೆ ಸಿದ್ದರಾಮಯ್ಯನವರು ಸಿಎಂ ಆಗಲು ನಮ್ಮ ಸಮಾಜದ ಕೊಡುಗೆಯೂ ಇದೆ. ಚಿತ್ರದುರ್ಗದಿಂದ ಸ್ಪರ್ಧಿಸಲು ರಘು ಆಚಾರ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕೆಂದು ಕೋರಲು ಮಾ.20 ರಂದು ಸಿದ್ದರಾಮಯ್ಯನವರ ಮೈಸೂರು ನಿವಾಸಕ್ಕೆ ನಮ್ಮ ಸಮಾಜದ ಶ್ರೀ ಶಿವಸುಜ್ಞಾನತೀರ್ಥ ಸ್ವಾಮೀಜಿ ಭೇಟಿ ನೀಡಿದ್ದರು. ಈ ವೇಳೆ ಶ್ರೀಗಳನ್ನು ಸಾಮಾನ್ಯರು ಕೂರುವಲ್ಲಿ ಕೂರಿಸಿ, ಬಳಿಕ ನಿಲ್ಲಿಸಿ ಕೊಂಡೆ ಮಾತಾಡಿಸುವ ಮೂಲಕ ನಮ್ಮ ಸಮುದಾಯಕ್ಕೆ ಸಿದ್ದರಾಮಯ್ಯ ಅಪಮಾನಿಸಿದ್ದಾರೆ ಎಂದು ಆರೋಪಿಸಿದರು.

ಇದರ ಬೆನ್ನಲ್ಲೇ ರಘು ಆಚಾರ್ ಅವರಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಿದ್ದು, ವಿಶ್ವಕರ್ಮ ಸೇರಿದಂತೆ ತಳಸಮುದಾಯಗಳನ್ನು ಕೇವಲ ಮತ ಹಾಕಿಸಿಕೊಳ್ಳಲು ಮಾತ್ರ ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ. ಏ.14ರಂದು ಬೆಂಗಳೂರಿನ ಜೆಪಿ ಭವನದಲ್ಲಿ ರಘು ಆಚಾರ್ ಜೆಡಿಎಸ್ ಸೇರ್ಪಡೆಯಾಗುತ್ತಿದ್ದಾರೆ. ಇದೇ ವೇಳೆ ಜೆಡಿಎಸ್ ಅಧಿಕಾರಕ್ಕೆ ಬರುವ ವಿಶ್ವಾಸದಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಶೇ.3ರಷ್ಟು ಒಳಮೀಸಲಾತಿ ಕಲ್ಪಿಸುವಂತೆ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಸಮುದಾಯದ ಮುಖಂಡರಾದ ಮಂಜು, ಸೋಮಾಚಾರ್, ಎ.ಎನ್.ಸಿದ್ದಪ್ಪಾಜಿ ಗೋಷ್ಠಿಯಲ್ಲಿದ್ದರು.

ಅಮುಲ್‌ನೊಂದಿಗೆ ಕೆಎಂಎಫ್ ವಿಲೀನ ಪ್ರಸ್ತಾಪ ಖಂಡಿಸಿ
ಕರ್ನಾಟಕ ಸೇನಾ ಪಡೆ ಪ್ರತಿಭಟನೆ



ಮೈಸೂರು, ಏ.10(ಎಸ್‌ಪಿಎನ್)- ರೈತರ ಜೀವನಾಡಿ ಸಂಸ್ಥೆ ಕೆಎಂಎಫ್ ನಂದಿನಿ ಮತ್ತು ಇತರೆ ಉತ್ಪನ್ನಗಳ ಮಾರುಕಟ್ಟೆ ಕತ್ತು ಹಿಸುಕುವ ಪ್ರಯತ್ನ ಖಂಡಿಸಿ, ಗುಜರಾತಿನ ಅಮುಲ್ ಸಂಸ್ಥೆಯ ಉತ್ಪನ್ನಗಳ ಮಾರುಕಟ್ಟೆ ವಿಸ್ತರಣೆಯನ್ನು ವಿರೋಧಿಸಿ ಅಗ್ರಹಾರ ನಂದಿನಿ ಮಳಿಗೆ ಮುಂಭಾಗ ಕರ್ನಾಟಕ ಸೇನಾ ಪಡೆಯ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಂಡ್ಯದ ಕಾರ್ಯಕ್ರಮಕ್ಕೆ ಆಗಮಿಸಿದ್ದಾಗ ಈ ವಿಲೀನದ ಬಗ್ಗೆ ಮಾತನಾಡಿದ್ದರು. ತದನಂತರ ಸಿಎಂ ಬೊಮ್ಮಾಯಿ ಹಾಗೂ ಮತ್ತಿತರ ಬಿಜೆಪಿ ಮುಖಂಡರು ಕೆಎಂಎಫ್ ಅನ್ನು-ಅಮುಲ್‌ನೊಂದಿಗೆ ವಿಲೀನಗೊಳಿಸುವ ಮಾತನಾಡಲು ಆರಂಭಿಸಿದಾಗ ಜನರ ವಿರೋಧದ ನಂತರ ಕೆಎಂಎಫ್ ವಿಲೀನಗೊಳಿಸುವ ಪ್ರಶ್ನೆಯೇ ಇಲ್ಲ ಎಂದಿದ್ದರು. ಆ ಮೇಲೆ ಪರೋಕ್ಷವಾಗಿ ನಂದಿನಿ ಮೊಸರಿನ ಪ್ಯಾಕೇಟ್ ಮೇಲೆ ಹಿಂದಿಯಲ್ಲಿ 'ದಹಿ'ಎಂದು ಮುದ್ರಿಸಬೇಕೆಂದು ಕೇಂದ್ರದಿಂದ ಆದೇಶ ಹೊರಡಿಸಲಾಯಿತು. ಆಗ ಕನ್ನಡಿಗರು ವಿರೋಧ ವ್ಯಕ್ತಪಡಿಸಿದ್ದರಿಂದ ಆ ಆದೇಶವನ್ನು ಹಿಂಪಡೆಯಲಾಯಿತು ಎಂದು ಪ್ರತಿಭಟನಾಕಾರರು ದೂರಿದರು.

ಈ ಹಿಂದೆ ರಾಜ್ಯದಲ್ಲಿ ಲಾಭದಲ್ಲಿದ್ದ ಎಸ್‌ಬಿಎಂ, ಸಿಂಡಿಕೇಟ್ ಬ್ಯಾಂಕ್‌ಗಳನ್ನು ನಷ್ಟದಲ್ಲಿದ್ದ ಉತ್ತರ ಭಾರತದ ಬ್ಯಾಂಕ್‌ಗಳೊಂದಿಗೆ ವಿಲೀನ ಮಾಡಿದ್ದನ್ನು, ಅದರಲ್ಲೂ ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಬ್ಯಾಂಕ್ ಅನ್ನು ಎಸ್‌ಬಿಐ ಜೊತೆ ವಿಲೀನ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಇದೇ ರೀತಿ ನಂದಿನಿಯನ್ನು ಅಮೂಲ್ ಜೊತೆ ವಿಲೀನಗೊಳಿಸಲು ಹುನ್ನಾರ ನಡೆಯುತ್ತಿವೆ ಎಂದು ಆರೋಪಿಸಿದರು.

ಈಗ ಆನ್‌ಲೈನ್‌ನಲ್ಲಿ ಅಮುಲ್ ಹಾಲು-ಮೊಸರು ರಾಜ್ಯ ಮಾರುಕಟ್ಟೆಗೆ ಬಂದಿದ್ದು, ಜತೆಗೆ ಸದ್ದಿಲ್ಲದೆ, ಬೆಂಗಳೂರಿನಲ್ಲಿ ಅಮುಲ್ ಉತ್ಪನ್ನಗಳ ಮಾರಾಟ ಕೇಂದ್ರ ತಲೆಯೆತ್ತುತ್ತಿದೆ. ಗುಜರಾತಿನಲ್ಲಿ ಅಮುಲ್ ದೊಡ್ಡ ಡೈರಿ. ಕರ್ನಾಟಕದ ಮನೆ ಮಾತಾಗಿರುವ ಹಾಗೂ ದೇಶದ 2ನೇ ಅತೀ ದೊಡ್ಡ ಸಂಸ್ಥೆಯಾಗಿರುವ ಕೆಎಂಎಫ್ ಉತ್ಪನ್ನಗಳನ್ನು ಮುಳುಗಿಸಲೆಂದೇ ಅಲ್ಲಲ್ಲಿ ನಂದಿನಿ ಹಾಲು ಮೊಸರಿನ ಕೃತಕ ಅಭಾವ ಸೃಷ್ಟಿಸಿ, ಅಮುಲ್ ಉತ್ಪನ್ನಗಳ ಮಾರಾಟಕ್ಕೆ ರಾಜ್ಯ ಸರ್ಕಾರ ಪರೋಕ್ಷ ಬೆಂಬಲ ನೀಡುತ್ತಿದೆ.

ಕೆಎಂಎಫ್ ವಿಲೀನಗೊಳಿಸಿ, ಒಂದು ದೇಶ-ಒಂದು ಅಮುಲ್ ಎನ್ನುವ ಘೋಷಣೆ ಕೇಂದ್ರದ ಉದ್ದೇಶವಿರಬಹುದು. ಈ ಬೆಳವಣಿಗೆ ಯಾರಿಗೂ ಹಿತಕರವಲ್ಲ. ಇದೊಂದು ಅನಾರೋಗ್ಯಕರ ಪೈಪೋಟಿಯಾಗಿದೆ. ಈ ಕುರಿತು ರಾಜ್ಯಪಾಲರು ಕೆಎಂಎಫ್, ಅಮುಲ್‌ನೊಂದಿಗೆ ವಿಲೀನಗೊಳಿಸುವ ಉದ್ದೇಶಕ್ಕೆ ತಡೆ ನೀಡುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾ ಪಡೆಯ ಮುಖಂಡರಾದ ಸಿ. ಎಚ್ ಕೃಷ್ಣಯ್ಯ, ಡಾ. ಶಾಂತರಾಜೇಅರಸ್, ಪಿ.ಪ್ರಜೀಶ್, ಗೋಲ್ಡ್ ಸುರೇಶ್, ರಾಧಾಕೃಷ್ಣ, ಕುಮಾರ್ ಗೌಡ, ಜೂ. ವಿಷ್ಣುವರ್ಧನ್, ಗಿರೀಶ್ ಗೌಡ, ಡಾ. ನರಸಿಂಹೇಗೌಡ, ಲತಾ ರಂಗನಾಥ್, ಅಂಬಾ ಅರಸ್, ಎಸ್ ಚಂದ್ರು, ಗೊರೂರು ಮಲ್ಲೇಶ್ ಸಿದ್ದರಾಜು, ದರ್ಶನ್ ಗೌಡ, ಹನುಮಂತಯ್ಯ, ಸುಂದರಪ್ಪ ಗ್ರಾ.ಪಂ, ಕೃಷ್ಣಮೂರ್ತಿ, ರಾಮನಾಯಕ, ರವಿ ನಾಯಕ್, ಶ್ರೀಕಂಠೇಗೌಡ ಉಪಸ್ಥಿತರಿದ್ದರು.

ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರಿಗೆ ಸವಲತ್ತು ಕಲ್ಪಿಸುವಲ್ಲಿ ಅನ್ಯಾಯದ ಆರೋಪ



ಮೈಸೂರು,ಏ.10(ಪಿಎಂ)- ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ತಮ್ಮ ಐದು ವರ್ಷಗಳ ಆಡಳಿತಾವಧಿಯಲ್ಲಿ ಸರ್ಕಾರದ ಸವಲತ್ತು ಕಲ್ಪಿಸುವಲ್ಲಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರನ್ನು ಕಡೆಗಣಿಸಿದ್ದಾರೆ ಎಂದು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಕ್ಷೇತ್ರದಲ್ಲಿ ನಿರ್ಮಾಣಗೊಳ್ಳುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಡಾ.ಬಾಬು ಜಗಜೀವನರಾಂ ಭವನದಲ್ಲಿ ತಾಂತ್ರಿಕ ಸಮಸ್ಯೆಯ ಕಾರಣ ನೀಡಿ ಸಾರ್ವಜನಿಕ ಬಳಕೆಗೆ ಅದು ಮುಕ್ತವಾಗಲು ಪ್ರಯತ್ನಿಸಲೇ ಇಲ್ಲ. ಪರಿಶಿಷ್ಟ ಜಾತಿಯವರ ಸಮುದಾಯ ಭವನಗಳಿಗೆ ಕೇವಲ 2 ಲಕ್ಷ ಅನುದಾನ ಕಲ್ಪಿಸಿ, ಮೇಲ್ವರ್ಗದವರ ಸಮುದಾಯ ಭವನಗಳಿಗೆ 8ರಿಂದ 10 ಲಕ್ಷ ಅನುದಾನ ಒದಗಿಸಿದ್ದಾರೆ ಎಂದು ದೂರಿದರು.

ಕೈಲಾಸಪುರ ಸರ್ಕಾರಿ ಶಾಲೆಗೆ ಸರ್ಕಾರದಿಂದ ಮಂಜೂರಾಗಿದ್ದ ಇಂಗ್ಲಿಷ್ ಕೋಚಿಂಗ್ ಸೆಂಟರ್ ಅನ್ನು ತಮ್ಮ ಪ್ರಭಾವದಿಂದ ಮಂಚೇಗೌಡನಕೊಪ್ಪಲು ಸರ್ಕಾರಿ ಶಾಲೆಗೆ ವರ್ಗಾಯಿಸಿಕೊಂಡಿದ್ದಾರೆ. ಎನ್‌ಆರ್ ಕ್ಷೇತ್ರಕ್ಕೆ ಆಶ್ರಯ ನಿವೇಶನಗಳಿಗಾಗಿ 18 ಎಕರೆ ಭೂಮಿ ಮಂಜೂರಾಗಿತ್ತು. ಆದರೆ ಸರ್ಕಾರದ ಮೇಲೆ ಒತ್ತಡ ಹಾಕಿ ಇದಕ್ಕೂ ತಡೆ ಹಿಡಿದಿದ್ದಾರೆ ಎಂದು ಆಪಾದಿಸಿದರು. ಕಾಂಗ್ರೆಸ್ ಮುಖಂಡರಾದ ಎಸ್.ಎ. ರಹಿಮ್, ಪ್ರವೀಣ್‌ಕುಮಾರ್, ಶಿವಕುಮಾರ್, ಪ್ರಕಾಶ್ ಗೋಷ್ಠಿಯಲ್ಲಿದ್ದರು.

ಅಯೂಬ್ ಖಾನ್‌ಗೆ ಎನ್‌ಆರ್ ಕ್ಷೇತ್ರದ ಜೆಡಿಎಸ್ ಟಿಕೆಟ್ ಕೊಟ್ಟರೆ

ಇಡೀ ರಾಜ್ಯದಲ್ಲಿ ಜೆಡಿಎಸ್‌ಗೆ ಐಎನ್‌ಸಿಪಿ ಬೆಂಬಲ



ಮೈಸೂರು,ಏ.10(ಪಿಎಂ)- ಇತ್ತೀಚೆಗೆ ಜೆಡಿಎಸ್ ಸೇರ್ಪಡೆಯಾದ ಅಯೂಬ್ ಖಾನ್ ಅವರಿಗೆ ಮೈಸೂರಿನ ಎನ್‌ಆರ್ ಕ್ಷೇತ್ರದ ಜೆಡಿಎಸ್ ಟಿಕೆಟ್ ನೀಡಿದ್ದಲ್ಲಿ ಇಡೀ ರಾಜ್ಯದಲ್ಲಿ ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿಯಿಂದ (ಐಎನ್‌ಸಿಪಿ) ಜೆಡಿಎಸ್ ಬೆಂಬಲಿಸಲು ನಿರ್ಧಾರಿಸಲಾಗಿದೆ ಎಂದು ಐಎನ್‌ಸಿಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗುರುಲಿಂಗಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಐಎನ್‌ಸಿಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಅಯೂಬ್ ಖಾನ್ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ನಮ್ಮ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಿತ್ತು. ಇದನ್ನು ನಿವಾರಿಸಲು ಸಭೆ ನಡೆಸಿದ್ದು, ಅಯೂಬ್ ಖಾನ್ ಅವರಿಗೆ ಜೆಡಿಎಸ್ ಎನ್‌ಆರ್ ಕ್ಷೇತ್ರದ ಟಿಕೆಟ್ ನೀಡಿದರೆ ಇಡೀ ರಾಜ್ಯದಲ್ಲಿ ನಮ್ಮ ಪಕ್ಷದಿಂದ ಜೆಡಿಎಸ್ ಬೆಂಬಲಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದರು. ಐಎನ್‌ಸಿಪಿ ಮುಖಂಡರಾದ ಗಿರೀಶ್, ಸರ್ದಾರ್ ಅಹಮ್ಮದ್, ಇನಾಯಿತ್ ಉಲ್ಲಾ ಗೋಷ್ಠಿಯಲ್ಲಿದ್ದರು.

ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಳ: ಬಿಜೆಪಿಯ ಐತಿಹಾಸಿಕ ನಿರ್ಣಯ

● ವಿಧಾನ ಪರಿಷತ್ ಸದಸ್ಯರೂ ಆದ ಬಿಜೆಪಿ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಬಣ್ಣನೆ ● ಕಾಂಗ್ರೆಸ್ ಈ ಸಮುದಾಯವನ್ನು ಬರೀ ವೋಟ್ ಬ್ಯಾಂಕ್ ಮಾಡಿಕೊಂಡಿತ್ತು ● ಅಮುಲ್‌ನೊಂದಿಗೆ ಕೆಎಂಎಫ್ ವಿಲೀನ ಪ್ರಸ್ತಾಪ ಬರೀ ಸುಳ್ಳು



ಮೈಸೂರು,ಏ.10(ಎಂಟಿವೈ)- ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿ ಮತ್ತು ಸಮುದಾಯಕ್ಕೆ ಸೂಕ್ತ ರೀತಿ ಮೀಸಲಾತಿ ಹೆಚ್ಚಳ ಮಾಡದೆ ಕೇವಲ ವೋಟ್ ಬ್ಯಾಂಕ್ ರಾಜಕೀಯ ಮಾಡಿಕೊಂಡು ಬರುತ್ತಿತ್ತು. ಆದರೆ, ಬಿಜೆಪಿ ಸರ್ಕಾರ ಐತಿಹಾಸಿಕ ನಿರ್ಣಯ ಕೈಗೊಂಡು ಮೀಸಲಾತಿ ಹೆಚ್ಚಿಸಿದೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸೋಮವಾರ ಚುನಾವಣೆ ಹಿನ್ನೆಲೆಯಲ್ಲಿ ಆರಂಭಿಸಿರುವ ಮಾಧ್ಯಮ ಕೇಂದ್ರ ಉದ್ಘಾಟಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಸಮುದಾಯದ ಬಹುದಿನಗಳ ಬೇಡಿಕೆ ಈಡೇರಿಸುವ ಮೂಲಕ ಬಿಜೆಪಿ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ಹಿಂದುಳಿದ ಸಮುದಾಯಗಳು ಹಲವು ವರ್ಷಗಳಿಂದ ಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದವು. ಕಾಂಗ್ರೆಸ್ ತಳ ಸಮುದಾಯಗಳ ಬೇಡಿಕೆ ಈಡೇರಿಸದೆ ಕಾಲ ತಳ್ಳುತ್ತಿತ್ತು. ಆದರೆ, ಬಿಜೆಪಿ ಸರ್ಕಾರ ಗಟ್ಟಿ ನಿರ್ಧಾರ ತೆಗೆದುಕೊಂಡಿದ್ದು, ಎಸ್ಸಿ ಸಮುದಾಯಕ್ಕೆ ಒಳ ಮೀಸಲಾತಿ ನೀಡಿದೆ. ಅಂತೆಯೇ ಲಿಂಗಾಯತರು, ಒಕ್ಕಲಿಗರಿಗೂ ಮೀಸಲಾತಿ ನೀಡಲಾಗಿದೆ. ಈ ಮೂಲಕ ಎಲ್ಲಾ ಸಮುದಾಯಗಳಿಗೂ ಸಾಮಾಜಿಕ ನ್ಯಾಯ, ಧ್ವನಿ, ಉದ್ಯೋಗ, ಸವಲತ್ತು ನೀಡುವ ಕೆಲಸ ಮಾಡಲಾಗಿದೆ ಎಂದರು.

ರೈತರ ಪರವಾಗಿ ಹಲವು ಮಹತ್ವದ ನಿರ್ಧಾರ ತೆಗೆದುಕೊಳ್ಳಲಾಗಿದೆ. ಹಾಲಿಗೆ ಪ್ರೋತ್ಸಾಹ ಧನ, ಕೆರೆಗೆ ನೀರು ತುಂಬಿಸುವ ಯೋಜನೆ, ಮಹಿಳೆಯರ ಪರವಾದ ಯೋಜನೆ, ಯುವಕರಿಗೆ ಉದ್ಯೋಗ ಆರಂಭಿಸಲು ನೆರವು, 11 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ಕ್ರಮ ಕೈಗೊಳ್ಳಲಾಗಿದೆ. ನಮ್ಮ ಸರ್ಕಾರ ಬಡವರ ಕಣ್ಣೀರು ಒರೆಸುವ ಕೆಲಸ ಮಾಡುತ್ತಿದೆ. ಜಲಜೀವನ ಮಿಷನ್ ಮೂಲಕ 61 ಲಕ್ಷ ಮನೆಗಳಿಗೆ ನಲ್ಲಿ ನೀರು ನೀಡಲಾಗುತ್ತಿದೆ. 50 ಲಕ್ಷ ಕುಟುಂಬಕ್ಕೆ ಕಿಸಾನ್ ಸಮ್ಮಾನ್ ಯೋಜನೆ ಲಾಭ ದೊರೆತಿದೆ. ರೈಲು, ವಿಮಾನ ನಿಲ್ದಾಣಗಳ ಅಭಿವೃದ್ಧಿಯಾಗುತ್ತಿದೆ. ರಾಜ್ಯದಲ್ಲಿ ಮತ್ತೆ ಡಬಲ್ ಇಂಜಿನ್ ಸರ್ಕಾರ ಬಂದರೆ ಅಭಿವೃದ್ಧಿ ಪರ್ವ ಮುಂದುವರಿಯಲಿದೆ ಎಂದರು.

ಸುಳ್ಳು ಆರೋಪ: ಗುಜರಾತ್‌ನ ಅಮುಲ್ ಸಂಸ್ಥೆಯೊಂದಿಗೆ ನಂದಿನಿಯನ್ನು ವಿಲೀನ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕರು ಸುಳ್ಳು ಆರೋಪ ಮಾಡಿ ಬಿಜೆಪಿಗೆ ಕಪ್ಪುಚುಕ್ಕೆ ಇಡಲು ಪ್ರಯತ್ನಿಸುತ್ತಿದ್ದಾರೆ. ಅಮುಲ್‌ಗೆ ಸ್ಪರ್ಧೆ ನೀಡುವ ಸಾಮರ್ಥ್ಯ ಇರುವುದು ನಂದಿನಿಗೆ ಮಾತ್ರ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಕೆಎಂಎಫ್ ಸಾಮರ್ಥ್ಯ ಹೆಚ್ಚಾಗಿದೆ. ಅಮುಲ್‌ನೊಂದಿಗೆ ಕೆಎಂಎಫ್ ವಿಲೀನ ಮಾಡುವ ಪ್ರಶ್ನೆಯೇ ಇಲ್ಲ. ನಂದಿನಿಯನ್ನು ಪ್ರೋತ್ಸಾಹಿಸಿ ಬೆಳೆಸುವ ಕೆಲಸ ಮಾಡಲಾಗುತ್ತಿದೆ. ರೈತರ ಉತ್ಪಾದನೆಗಳು ನಮ್ಮ ರಾಜ್ಯದಲ್ಲೇ ಇರಬೇಕೆ? ಬೇರೆ ರಾಜ್ಯಗಳಿಗೆ ಹೋಗಬೇಕೆ? ಎಂಬುದನ್ನು ಸಿದ್ದರಾಮಯ್ಯ, ಡಿಕೆಶಿ ತಿಳಿಸಲಿ ಎಂದು ಒತ್ತಾಯಿಸಿದರು.

ಮಾಧ್ಯಮ ಕೇಂದ್ರ ಉದ್ಘಾಟನೆ: ಬೆಂಗಳೂರು ಬಿಟ್ಟರೆ ಮೈಸೂರು ಮಾಧ್ಯಮದ ದೊಡ್ಡ ಕೇಂದ್ರ ಟಿವಿ, ಪತ್ರಿಕೆ ಓದುವವರು ಕೋಟ್ಯಾಂತರ ಮಂದಿ ಇದ್ದಾರೆ. ನಮ್ಮ ಸರ್ಕಾರದ ಸಾಧನೆ, ಯೋಜನೆ, ವಿಚಾರಗಳನ್ನು ತಿಳಿಸುವ ಉದ್ದೇಶದಿಂದ ಮಾಧ್ಯಮ ಕೇಂದ್ರ ಸ್ಥಾಪನೆ ಮಾಡಲಾಗಿದೆ. ಇದರಿಂದ ಹಳೆ ಮೈಸೂರು ಭಾಗದ 5 ಜಿಲ್ಲೆಗೆ ನಮ್ಮ ವಿಚಾರಗಳನ್ನು ತಲುಪಿಸಲು ಸಹಕಾರಿಯಾಗುತ್ತದೆ. ಜನತೆಗೆ ಸರಿಯಾದ ಮಾಹಿತಿ ಕೊಡದಿದ್ದರೆ ಉತ್ತಮ ನಿರ್ಧಾರ ತೆಗೆದುಕೊಳ್ಳಲು ಆಗುವುದಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಮೇಯರ್ ಶಿವಕುಮಾರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಸೇರಿದಂತೆ ಹಲವರು ಇದ್ದರು.













ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಲಕ್ನೋ	4	3	1	0	6
ರಾಜಸ್ಥಾನ್	3	2	1	0	4
ಕೋಲ್ಕತ್ತಾ	3	2	1	0	4
ಗುಜರಾತ್	3	2	1	0	4
ಸಿಎಸ್‌ಕೆ	3	2	1	0	4
ಪಂಜಾಬ್	3	2	1	0	4
ಆರ್‌ಸಿಬಿ	3	1	2	0	2
ಎಸ್‌ಆರ್‌ಹೆಚ್	3	1	2	0	2
ಮುಂಬೈ	2	0	2	0	0
ಡೆಲ್ಲಿ	3	0	3	0	0



ಆರ್‌ಸಿಬಿ ವಿರುದ್ಧ ಲಖನೌಗೆ ರೋಚಕ ಜಯ

ಪೂರನ್ ಬಿರುಗಾಳಿ ಬ್ಯಾಟಿಂಗ್‌ಗೆ ಸಾಥ್ ನೀಡಿದ ಸ್ಟೋಯಿನಿಸ್

ಬೆಂಗಳೂರು, ಏ.10– ನಿಕೋಲಸ್ ಪೂರನ್ ಅವರ ಬಿರುಗಾಳಿ ಬ್ಯಾಟಿಂಗ್ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 1 ವಿಕೆಟ್ ರೋಚಕ ಜಯ ಸಾಧಿಸಿದೆ. ಈ ಮೂಲಕ ಲಖನೌ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿದೆ.


ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿಗೆ ನಾಯಕ ಡುಪ್ಲೆಸಿಸ್ ಹಾಗೂ ವಿರಾಟ್ ಕೊಹ್ಲಿ ಉತ್ತಮ ಆರಂಭ ಒದಗಿಸಿದರು. ಇನ್ನಿಂಗ್ಸ್ ಆರಂಭದಿಂದಲೂ ಅಬ್ಬರದ ಬ್ಯಾಟಿಂಗ್ ಮಾಡಿದ ಇವರಿಬ್ಬರು ಮೊದಲ ವಿಕೆಟ್‌ಗೆ 96 ರನ್‌ಗಳ ಜೊತೆಯಾಟವಾಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಕೊಹ್ಲಿ 44 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 61ರನ್ ಗಳಿಸಿ ನಿರ್ಗಮಿಸಿದರು. ನಂತರ ಜೊತೆಗೂಡಿದ ನಾಯಕ ಡುಪ್ಲೆಸಿಸ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಲಖನೌ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಅಲ್ಲದೇ 2ನೇ ವಿಕೆಟ್‌ಗೆ 116ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 200ರ ಗಟಿ ದಾಟಿಸಿದರು. ಆದರೆ 29 ಎಸೆತಗಳಲ್ಲಿ 6 ಸಿಕ್ಸರ್, 3 ಬೌಂಡರಿ ಒಳಗೊಂಡ 59 ರನ್ ಗಳಿಸಿದ್ದ ಮ್ಯಾಕ್ಸ್‌ವೆಲ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಬ್ಬರಿಸಿದ ಡುಪ್ಲೆಸಿಸ್ 46 ಎಸೆತಗಳಲ್ಲಿ ತಲಾ 5 ಸಿಕ್ಸರ್, ಬೌಂಡರಿ ಒಳಗೊಂಡ 79 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 212ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಲಖನೌ ಪರ ಮಾರ್ಕ್ ವುಡ್ ಹಾಗೂ ಅಮಿತ್ ಶರ್ಮಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. 213ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಖನೌ ಸೂಪರ್ ಜೈಂಟ್ ತಂಡದ ಮೊತ್ತ 23ರನ್ ಆಗುವಷ್ಟರಲ್ಲಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಸ್ಕೋರ್ ವಿವರ
ರಾಯಲ್ ಚಾಲೆಂಜರ್ಸ್ 212/2
ಲಕ್ನೋ ಸೂಪರ್ ಜೈಂಟ್ಸ್ 213/9
(ಲಕ್ನೋಗೆ 1 ವಿಕೆಟ್ ಜಯ)

ಈ ವೇಳೆ ಒಂದಾದ ಕೆ.ಎಲ್.ರಾಹುಲ್ ಹಾಗೂ ಮಾರ್ಕಸ್ ಸ್ಟೋಯಿನಿಸ್ 4ನೇ ವಿಕೆಟ್‌ಗೆ 76ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಅಬ್ಬರದ ಆಟವಾಡಿದ ಸ್ಟೋಯಿನಿಸ್ 30 ಎಸೆತಗಳಲ್ಲಿ 5 ಸಿಕ್ಸರ್, 6 ಬೌಂಡರಿ ಒಳಗೊಂಡ 65 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ನಾಯಕ ಕೆ.ಎಲ್.ರಾಹುಲ್ ಕೂಡ 18 ರನ್ ಗಳಿಸಿ ನಿರ್ಗಮಿಸಿದರು.

ಈ ವೇಳೆ ಕ್ರೀಸ್‌ಗೆ ಆಗಮಿಸಿದ ಪೂರನ್ ಬಿರುಗಾಳಿ ಬ್ಯಾಟಿಂಗ್ ನಡೆಸಿದರು. ತಾವೆದುರಿಸಿದ ಕೇವಲ 15 ಎಸೆತಗಳಲ್ಲೇ ಅರ್ಧಶತಕ ಸಿಡಿಸಿದ ಪೂರನ್ ಆರ್‌ಸಿಬಿ ಬೌಲರ್‌ಗಳನ್ನು ಚೆಂಡಾಡಿದರು. ಆದರೆ 19 ಎಸೆತಗಳಲ್ಲಿ 4 ಬೌಂಡರಿ ಹಾಗೂ 7 ಮನಮೋಹಕ ಸಿಕ್ಸರ್ ಮೂಲಕ 62 ರನ್ ಗಳಿಸಿ ಔಟಾದರು.

17ನೇ ಓವರ್‌ನ ಕೊನೆ ಎಸೆತದಲ್ಲಿ ಪೂರನ್ ಔಟಾದಾಗ, ಲಖನೌ ತಂಡದ ಗೆಲುವಿಗೆ 18 ಎಸೆತಗಳಲ್ಲಿ 24 ರನ್ ಬೇಕಿದ್ದವು. ಈ ಹಂತದಲ್ಲಿ ಲಖನೌ ಸುಲಭವಾಗಿ ಗೆಲುವು ಸಾಧಿಸಲಿದೆ ಎಂದುಕೊಳ್ಳಲಾಗಿತ್ತು. ಆದರೆ, ಪಂದ್ಯದ ಕೊನೆ ಎಸೆತದವರೆಗೂ ಹೋರಾಟ ಉಳಿಸಿಕೊಳ್ಳುವಲ್ಲಿ ಆರ್‌ಸಿಬಿ ಯಶಸ್ವಿಯಾದರೂ, ಗೆಲುವು ಕಾಣಲು ಸಾಧ್ಯವಾಗಲಿಲ್ಲ. ಉಳಿದಂತೆ ಆಯುಷ್ ಬಡೋಣಿ 30 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಆರ್‌ಸಿಬಿ ಪರ ಮೊಹಮ್ಮದ್ ಸಿರಾಜ್, ವೇಯ್ನ್ ಪರ್ನೆಲ್ ತಲಾ 3, ಹರ್ಷಲ್ ಪಟೇಲ್ 2, ಕರಣ್ ಶರ್ಮಾ 1 ವಿಕೆಟ್ ಪಡೆದರು. ನಿಕೋಲಸ್ ಪೂರನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಮಾಜಿ ಸಿಎಂ ಸಿದ್ದರಾಮಯ್ಯ ಕುರಿ ಚರ್ಬಿ ತಿಂದು ಕೊಬ್ಬಿದ್ದಾರೆಂಬ ಹೇಳಿಕೆ

ಪ್ರತಾಪ್ ಸಿಂಹ ವಿರುದ್ಧ ಕುರುಬರ ಸಂಘ ಆಕ್ರೋಶ

ಮೈಸೂರು,ಏ.10(ಪಿಎಂ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿ ಚರ್ಬಿ ತಿಂದು ಕೊಬ್ಬಿದ್ದಾರೆ ಎನ್ನುವ ಮೂಲಕ ಸಂಸದ ಪ್ರತಾಪ್ ಸಿಂಹ ಅವರು ಜಾತಿ ಸೂಚಕವಾಗಿಯೇ ಹೀಯ್ಯಾಳಿಸಿದ್ದಾರೆ. ಇದರ ಪರಿಣಾಮವನ್ನು ಪ್ರತಾಪ್ ಸಿಂಹ ಎದುರಿಸಬೇಕಾಗುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಎಚ್ಚರಿಕೆ ನೀಡಿದ್ದಾರೆ.



ಗುಜರಾತಿನರಾದ ನರೇಂದ್ರ ಮೋದಿಯವರನ್ನು ಮೆಚ್ಚಿಸಲು ಕನ್ನಡಿಗರನ್ನು ಹೀಯ್ಯಾಳಿಸುವ ಪ್ರವೃತ್ತಿಯನ್ನು ಪ್ರತಾಪ್ ಸಿಂಹ ಸೇರಿದಂತೆ ಇತರೆ ಬಿಜೆಪಿ ನಾಯಕರೂ ರೂಢಿಸಿಕೊಂಡಿದ್ದಾರೆ. ಚಾಮರಾಜನಗರದಲ್ಲಿ 34 ಮಂದಿ ಆಕ್ಸಿಜನ್ ಇಲ್ಲದೆ ಸತ್ತರೂ ಒಂದು ಬಾರಿಯೂ ಬಾರದ ಪ್ರಧಾನಿ, ಕೇವಲ ಹುಲಿ ನೋಡಲು ಈ ಕಡೆ ಬರುತ್ತಾರೆ ಎಂದರೆ ಇವರು ಅಧಿಕಾರವನ್ನು ಯಾವ ರೀತಿ ದುರುಪಯೋಗ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಇಂತಹವರಿಗೆ ಈ ಬಾರಿ ಕರ್ನಾಟಕದ ಜನ ಸರಿಯಾದ ಉತ್ತರ ನೀಡಲಿದ್ದಾರೆ.

ಬಂಡೀಪುರ ಅರಣ್ಯವು ಸಂರಕ್ಷಿತ ಪ್ರದೇಶವೆಂಬುದು ಸ್ವತಃ ಮೋದಿಯವರಿಗೆ ಗೊತ್ತಿಲ್ಲವೆ. ಒಬ್ಬ ಸಾಮಾನ್ಯನೂ ಅನಧಿಕೃತವಾಗಿ ಪ್ರವೇಶಿಸುವಂತಿಲ್ಲ. ರಸ್ತೆಯಲ್ಲಿ ನಿಂತು ಶಬ್ಧ ಮಾಲಿನ್ಯ ಉಂಟು ಮಾಡುವ ಹಾಗಿಲ್ಲ. ವನ್ಯಜೀವಿಗಳಿಗಾಗಿ ಅರಣ್ಯವಾಸಿಗಳಾದ ಜೇನು ಕುರುಬ, ಬೆಟ್ಟ ಕುರುಬ, ಸೋಲಿಗರನ್ನು ಒಕ್ಕಲೆಬ್ಬಿಸುವಂತಹ ಕಾನೂನುಗಳು ಇರುವಾಗ ಮೋದಿ ಭೇಟಿ ಹಿನ್ನೆಲೆಯಲ್ಲಿ 3 ಹೆಲಿಪ್ಯಾಡ್ ನಿರ್ಮಾಣ, ನರೇಂದ್ರ ಮೋದಿ ಅಂದ ಚೆಂದ ಸೆರೆ ಹಿಡಿಯಲು ಕ್ಯಾಮರಾಮ್ಯಾನ್, ಎಸ್‌ಪಿಜಿ ಸಿಬ್ಬಂದಿ, 9 ಜೀಪುಗಳು, 1 ಆಂಬುಲೆನ್ಸ್ ನಿಲ್ಲಿಸಿ ಏಕವ್ಯಕ್ತಿ ಮೆರವಣಿಗೆಗೆ ಅವಕಾಶ ಮಾಡಿಕೊಟ್ಟಿದ್ದು ಹೇಗೆ? ಇಂತಹದ್ದಕ್ಕೆಲ್ಲ ಪ್ರತಾಪ್ ಸಿಂಹ ಅವರಿಗೆ ಉತ್ತರಿಸುವ ಶಕ್ತಿ ಇದೆಯೇ ಎಂದು ಪ್ರಶ್ನಿಸಿದ್ದಾರೆ. ಗುಜರಾತಿನ ಅಮುಲ್ ಉತ್ಪನ್ನಗಳಿಗೆ ಕರ್ನಾಟಕದಲ್ಲಿ ದೊಡ್ಡ ಮಾರುಕಟ್ಟೆ ಸೃಷ್ಟಿಸುವುದು ನಾಡಿಗೆ ಮಾಡುವ ದೊಡ್ಡ ದ್ರೋಹ. ಇದಕ್ಕೆ ಮುಂದಾಗಿರುವ ಪ್ರತಾಪ್ ಸಿಂಹ ಮತ್ತು ಅವರ ಪಕ್ಷಕ್ಕೆ ಸದ್ಯದಲ್ಲಿ ಕೆಚ್ಚೆದೆಯ ಕನ್ನಡಿಗರು ತಕ್ಕ ಶಾಸ್ತಿ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ಅವರು ಟೀಕಿಸಿದ್ದಾರೆ.

'ನಂದಿನಿ' ಬ್ರ್ಯಾಂಡ್ ಮುಚ್ಚುವ ಷಡ್ಯಂತರ ಖಂಡಿಸಿ ಕಸಾಪ ಮೈಸೂರು ನಗರ ಘಟಕದಿಂದ ಪ್ರತಿಭಟನೆ

ಮೈಸೂರು, ಏ.10(ಎಸ್‌ಬಿಡಿ)– ಕನ್ನಡಿಗರ ಅಸ್ಮಿತೆಯಾದ 'ನಂದಿನಿ' ಬ್ರ್ಯಾಂಡ್ ಅನ್ನು ಮುಚ್ಚುವ ಷಡ್ಯಂತರ ನಡೆದಿದೆ ಎಂದು ಆರೋಪಿಸಿ ಕನ್ನಡ ಸಾಹಿತ್ಯ ಪರಿಷತ್‌ನ ಮೈಸೂರು ನಗರ ಘಟಕದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ವಿವಿ ಪುರಂನಲ್ಲಿರುವ ಅಮುಲ್ ಮಳಿಗೆ ಮುಂದೆ ಜಮಾಯಿಸಿದ ಪ್ರತಿಭಟನಾಕಾರರು, 'ನಂದಿನಿ ಉಳಿಸಿ' ಘೋಷಣೆ ಮೊಳಗಿಸಿದರು. ಘೋಷಣಾ ಫಲಕಗಳನ್ನು ಹಿಡಿದು, ಗುಜರಾತ್ ಮೂಲದ ಅಮುಲ್ ಉತ್ಪನ್ನಗಳ ಮಾರಾಟ ವಿಸ್ತರಣೆಗೆ ಅವಕಾಶ ನೀಡಬಾರದೆಂದು ಒತ್ತಾಯಿಸಿದರು.



ರಾಜ್ಯದ 15 ಹಾಲು ಜಿಲ್ಲಾ ಒಕ್ಕೂಟಗಳನ್ನೊಳಗೊಂಡ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) 'ನಂದಿನಿ' ಬ್ರ್ಯಾಂಡ್‌ನಡಿ ತಾಜಾ ಹಾಲು, ಮೊಸರು ಇನ್ನಿತರ ಉತ್ಪನ್ನಗಳ ಮಾರಾಟ ಮಾಡುತ್ತಿದೆ. 15 ಸಾವಿರಕ್ಕೂ ಹೆಚ್ಚು ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಲು ಸಂಗ್ರಹಿಸಿ, ಒಕ್ಕೂಟಕ್ಕೆ ಒದಗಿಸುತ್ತಿವೆ. ದಿನವಹಿ 70–80 ಲಕ್ಷ ಲೀಟರ್ ಹಾಲು ಹಾಗೂ 8–10 ಲಕ್ಷ ಲೀಟರ್ ಮೊಸರನ್ನು ಕೆಎಂಎಫ್ ತಯಾರಿಸಿ, ಮಾರಾಟ ಮಾಡುತ್ತಿದೆ. ಸುಮಾರು ರೈತರು ಸೇರಿ 26 ಲಕ್ಷ ಮಂದಿ 'ನಂದಿನಿ'ಯನ್ನು ನಂಬಿ ಬದುಕುತ್ತಿದ್ದಾರೆ. 'ನಂದಿನಿ' ಕನ್ನಡಿಗರ ಅಸ್ಮಿತೆಯಾಗಿದೆ. ಇದಕ್ಕೆ ಧಕ್ಕೆ ತರುವ ಹುನ್ನಾರವನ್ನು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಎಂಎಫ್‌ನಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ ಸುಮಾರು 5 ಸಾವಿರ ಕೋಟಿ ಆದಾಯ ಗಳಿಸಿದೆ. ಹಾಗಾಗಿ ಗುಣಮಟ್ಟದಲ್ಲೂ ಉತ್ಕೃಷ್ಟತೆ ಕಾಪಾಡಿಕೊಂಡು ಬಂದಿರುವ ಲಾಭದಾಯಕ ಕೆಎಂಎಫ್ ಅನ್ನು ವಿಲೀನಗೊಳಿಸುವ ಪ್ರಯತ್ನ ಒಂದೆಡೆ ಯಾದರೆ ಮತ್ತೊಂದೆಡೆ ಮಹಿವಾಟಿಗೆ ಹೊಡೆತ ನೀಡುವ ಷಡ್ಯಂತರ ನಡೆಸಲಾಗಿದೆ. ಕನ್ನಡದ ನೆಲದಲ್ಲಿ ಕನ್ನಡತನವನ್ನೇ ಹೊಸಕಿ ಹಾಕುವ ಪ್ರಕ್ರಿಯೆ ನಡೆದಿವೆ. ನಂದಿನಿ ಉತ್ಪನ್ನಗಳನ್ನು ಹಂತ ಹಂತವಾಗಿ ಮುಗಿಸಲು ಗುಜರಾತಿಗಳು ಹುನ್ನಾರ ನಡೆಸಿದ್ದಾರೆ. ಕೆಎಂಎಫ್ ಜೊತೆ ಅಮುಲ್ ವಿಲೀನಗೊಳಿಸುವ ನೆಪದಲ್ಲಿ ನಂದಿನಿ ಬ್ರ್ಯಾಂಡ್ ಅನ್ನು ರಿಲಯನ್ಸ್ ಗ್ರೂಪ್ ತೆಕ್ಕೆಗೆ ನೀಡುವ ಕೆಟ್ಟ ಆಲೋಚನೆ ಮಾಡಲಾಗಿದೆ ಆದರೆ ನಮ್ಮ ನಾಡಿನ 'ನಂದಿನಿ' ರಕ್ಷಣೆಗಾಗಿ ನಾವು ಹೋರಾಟ ತೀವ್ರಗೊಳಿಸಲಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಕಸಾಪ ಮೈಸೂರು ನಗರ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮು, ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚಿಂತಕ ಪ್ರೊ.ಕಾಳಚನ್ನೇಗೌಡ, ಹಿರಿಯ ಪತ್ರಕರ್ತ ಟಿ.ಗುರುರಾಜ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಕುಂಬಾರರ ಸಂಘದ ಹೆಚ್.ಎಸ್.ಪ್ರಕಾಶ್, ಜಿಲ್ಲಾ ಮಡಿವಾಳ ಸಂಘದ ರವಿನಂದನ್, ಜಿಲ್ಲಾ ಉಪ್ಪಾರ ಸಂಘದ ಯೋಗೇಶ್, ಜೆಜೆಆನಂದ್, ಕೆಆರ್.ಬ್ಯಾಂಕ್ ಬಸಪ್ಪ ಲೋಕೇಶ್ ಕುಮಾರ್ ಮಾದಾಪುರ, ಆರ್.ಕೆ.ರವಿ, ಮಹೇಂದ್ರ ಕಾಗಿನೆಲೆ, ಪ್ರಕಾಶ್ ಗೌಡ, ಹರೀಶ್ ಮೊಗಣ್ಣ, ರಾಜೇಶ್, ಗೋಪಾಲಕೃಷ್ಣ, ನಟರಾಜ್, ಶೋಭಾ, ಕಮಲ ಮತ್ತಿತರರು ಪಾಲ್ಗೊಂಡಿದ್ದರು.

ಸಿದ್ದರಾಮಯ್ಯನವರ ಬಗ್ಗೆ ಪ್ರತಾಪ್ ಸಿಂಹ ಹೇಳಿಕೆಗೆ ಕಾಂಗ್ರೆಸ್ ವಕ್ತಾರರ ಖಂಡನೆ

ಮೈಸೂರು, ಏ.10(ಎಸ್‌ಬಿಡಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಗ್ಗೆ ಲಘುವಾಗಿ ಮಾತನಾಡಿರುವ ಸಂಸದ ಪ್ರತಾಪ್ ಸಿಂಹ, ಇದರ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಎದುರಿಸಬೇಕಾಗುತ್ತದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಹೇಳಿದ್ದಾರೆ.



ಸಂಸದ ಪ್ರತಾಪ್ ಸಿಂಹ ಮಾಧ್ಯಮಗಳೊಂದಿಗೆ ಮಾತನಾಡಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೈಸೂರಿಗೆ ಬಂದಾಗ ಕುರಿ ಚರ್ಬಿ ತಿಂದು ಹೋಗುತ್ತಾರೆ ಎಂದು ಅತ್ಯಂತ ಲಘುವಾಗಿ ಹೇಳಿಕೆ ನೀಡುವ ಮೂಲಕ ಸರ್ವಾಧಿಕಾರಿಯಂತೆ ವರ್ತಿಸಿದ್ದಾರೆ. ಈ ರೀತಿ ಉಡಾಫೆಯಿಂದ ಮಾತನಾಡುವುದು ಅವರ ಸ್ಥಾನದ ಘನತೆಗೆ ತಕ್ಕುದ್ದಲ್ಲ ಎಂದು ಎಚ್ಚರಿಸಿದ್ದಾರೆ. ಮೋದಿಯವರನ್ನು ಮೆಚ್ಚಿಸಲು ಕನ್ನಡಿಗರನ್ನು ಹೀಯ್ಯಾಳಿಸುವ ಪ್ರವೃತ್ತಿಯನ್ನು ಪ್ರತಾಪ್ ಸಿಂಹ ಸೇರಿದಂತೆ ಇತರೆ ಬಿಜೆಪಿ ನಾಯಕರು ರೂಡಿಸಿಕೊಂಡಿದ್ದಾರೆ. ಅಲ್ಲದೆ ಕನ್ನಡ ನಾಡಿನಲ್ಲಿದ್ದು ಅಲ್ಲಿನ ಉದ್ಯಮಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ. ನಾಡಿನ ನಂದಿನಿ ಉತ್ಪನ್ನಕ್ಕೆ ಗುಜರಾತ್‌ನ ಅಮುಲ್ ಪೈಪೋಟಿಗಿಳಿಯಲು ಸಹಕರಿಸುತ್ತಿದ್ದಾರೆ. ಅಮುಲ್ ಉತ್ಪನ್ನಗಳಿಗೆ ಕರ್ನಾಟಕದಲ್ಲಿ ದೊಡ್ಡ ಮಾರುಕಟ್ಟೆ ಸೃಷ್ಟಿಸಿಕೊಡಲು ಪ್ರತಾಪ್ ಸಿಂಹ ಸೇರಿದಂತೆ ಬಿಜೆಪಿ ನಾಯಕರು ರಾಜ್ಯದ ಜನರಿಗೆ ದ್ರೋಹ ವೆಸಗುತ್ತಿದ್ದಾರೆ. ಸದ್ಯದಲ್ಲಿ ಕನ್ನಡಿಗರಿಂದ ಅವರಿಗೆ ತಕ್ಕ ಶಾಸ್ತಿ ಆಗಲಿದೆ ಎಂದಿದ್ದಾರೆ.

ಖಲಿಸ್ಥಾನಿ ನಾಯಕ ಅಮೃತಪಾಲ್ ಸಿಂಗ್ ಆಪ್ತ ಪಾಪಲ್‌ಪ್ರೀತ್ ಸಿಂಗ್ ಬಂಧನ

ಚಂಡೀಗಢ: ತೀವ್ರಗಾಮಿ ಅಮೃತಪಾಲ್ ಸಿಂಗ್ ಅವರ ಆಪ್ತ ಸಹಾಯಕ ಪಾಪಲ್‌ಪ್ರೀತ್ ಸಿಂಗ್ ಎಂಬಾತನನ್ನು ಪಂಜಾಬ್‌ನ ಹೋಶಿಯಾರ್‌ಪುರದಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪಂಜಾಬ್ ಪೊಲೀಸರು ಮತ್ತು ಕೌಂಟರ್ ಇಂಟೆಲಿಜೆನ್ಸ್ ವಿಭಾಗವೂ ಕಾರ್ಯಾಚರಣೆ ನಡೆಸಿ ಪಾಪಾಲ್‌ಪ್ರೀತ್‌ನನ್ನು ಬಂಧಿಸಿದ್ದಾರೆ. ಪಾಪಲ್‌ಪ್ರೀತ್ ಅಮೃತಪಾಲ್‌ನ ಮಾರ್ಗದರ್ಶಕ ಎಂದು ಪರಿಗಣಿಸಲಾಗಿದ್ದು ಇತ ಪಾಕಿಸ್ತಾನದ ಐಎಸ್‌ಐ ಜೊತೆ ಸಂಪರ್ಕದಲ್ಲಿ ಎಂದು ವರದಿಯಾಗಿದೆ. ಪಂಜಾಬ್ ಪೊಲೀಸರು ಖಲಿಸ್ತಾನ್ ಬೆಂಬಲಿಗರು ಮತ್ತು ಅವರ ಸಹಚರರ ವಿರುದ್ಧ ಕ್ರಮ ಕೈಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಅಮೃತಪಾಲ್ ಮತ್ತು ಪಾಪಲ್‌ಪ್ರೀತ್ ಮಾರ್ಚ್ 18ರಿಂದ ತಲೆಮರೆಸಿಕೊಂಡಿದ್ದರು.

ಅಮುಲ್ ಜೊತೆ ಕೆಎಂಎಫ್ ವಿಲೀನ ಪ್ರಸ್ತಾಪ ಕೈ ಬಿಡುವಂತೆ ಎಂಎಲ್ಸಿ ಮರಿತಿಬ್ಬೇಗೌಡ ಆಗ್ರಹ

ಮೈಸೂರು, ಏ.10(ಎಸ್‌ಬಿಡಿ)– ಕೆಎಂಎಫ್ ಜೊತೆ ಅಮುಲ್ ವಿಲೀನಗೊಳಿಸುವ ಪ್ರಯತ್ನವನ್ನು ಯಾವುದೇ ರೀತಿಯಲ್ಲೂ ಮುಂದುವರೆಸಬಾರದು ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.




ಕೆಎಂಎಫ್‌ನ ನಂದಿನಿ ಮೊಸರು ಪ್ಯಾಕೆಟ್‌ನಲ್ಲಿ ಹಿಂದಿ ಪದ ಬಳಸಿ, ವಿರೋಧ ವ್ಯಕ್ತವಾಗಿದ್ದರಿಂದ ಅದನ್ನು ತೆರವುಗೊಳಿಸಲಾಯಿತು. ಇದೀಗ ರಾಜ್ಯದಲ್ಲಿ ಅಮುಲ್ ಹಾಲು, ಮೊಸರು ಇನ್ನಿತರ ಉತ್ಪನ್ನಗಳ ಮಾರಾಟವನ್ನು ವಿಸ್ತರಿಸುವ ಪ್ರಯತ್ನ ನಡೆದಿದೆ. ಯಾವ ನಿರ್ಬಂಧವಿಲ್ಲದೆ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿರುವುದು ರಾಜ್ಯದ ಹಾಲು ಉತ್ಪಾದಕರಲ್ಲಿ ಆತಂಕ ಸೃಷ್ಟಿಸಿದೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ 15 ಹಾಲು ಒಕ್ಕೂಟಗಳು ಕಾರ್ಯ ನಿರ್ವಹಿಸುತ್ತಿವೆ. ಮಹಿಳೆಯರ ಸಹಕಾರ ಸಂಘಗಳು ಸೇರಿದಂತೆ ಸಾವಿರಾರು ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ವಹಿವಾಟು ನಡೆದಿದೆ. ಶೇ.50ಕ್ಕೂ ಹೆಚ್ಚು ಮಹಿಳೆಯರು ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಈ ಮೂಲಕ ಲಕ್ಷಾಂತರ ಕುಟುಂಬಗಳ ಆರ್ಥಿಕ ಸಬಲೀಕರಣ ಸಾಧ್ಯವಾಗಿದೆ. ಉತ್ತಮ ದರ ನೀಡುವ ಮೂಲಕ ಹಾಲು ಉತ್ಪಾದಕರಿಗೆ ನೆರವಾಗಿರುವ ಕೆಎಂಎಫ್, 'ನಂದಿ ಬ್ರ್ಯಾಂಡ್'ನಲ್ಲಿ ಹಾಲು, ಮೊಸರು ಇನ್ನಿತರ ಉತ್ಕೃಷ್ಟ ಗುಣಮಟ್ಟದ ಉತ್ಪನ್ನಗಳನ್ನು ಗ್ರಾಹಕರಿಗೆ ಕಲ್ಪಿಸುತ್ತಿದೆ. ಈ ಉತ್ಪನ್ನಗಳಿಗೆ ರಾಷ್ಟ್ರಮಟ್ಟದಲ್ಲಿ ಹೆಚ್ಚು ಬೇಡಿಕೆ ಇದೆ.

ಹೈನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ಸಿಗಬಹುದೆಂಬ ನಿರೀಕ್ಷೆಯನ್ನು ಹುಸಿಗೊಳಿಸಿರುವ ರಾಜ್ಯ ಸರ್ಕಾರ, ಬೇರೆ ರಾಜ್ಯದ ಉತ್ಪನ್ನಗಳ ಮಾರಾಟ ವಿಸ್ತರಣೆಗೆ ಅವಕಾಶ ಮಾಡಿಕೊಡುವ ಮೂಲಕ ಹೈನುಗಾರಿಕೆ ನಂಬಿರುವವರನ್ನು ಸಂಕಷ್ಟಕ್ಕೆ ದೂಡುತ್ತಿದೆ ಇಂತಹ ಪ್ರಯತ್ನಗಳು ಮುಂದುವರೆದರೆ ಕೆಎಂಎಫ್ ವಹಿವಾಟಿನ ಮೇಲೆ ಭಾರೀ ಹೊಡೆತ ಬೀಳುವ ಜೊತೆಗೆ ಹಾಲು ಉತ್ಪಾದಕರ ಸ್ಥಿತಿ ಶೋಚನೀಯವಾಗುತ್ತದೆ. ಇದನ್ನು ಲಘುವಾಗಿ ಪರಿಗಣಿಸದೆ ಹೈನುಗಾರಿಕೆ ನಂಬಿರುವವರ ರಕ್ಷಣೆಗೆ ಕ್ರಮ ವಹಿಸಬೇಕು. ಯಾವುದೇ ಕಾರಣಕ್ಕೂ ಅಮುಲ್–ನಂದಿನಿ ವಿಲೀನಗೊಳಿಸುವ ಪ್ರಯತ್ನಗಳಿಗೆ ಅವಕಾಶ ಮಾಡಿಕೊಡಬಾರದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಒತ್ತಾಯಿಸುವುದಾಗಿ ಮರಿತಿಬ್ಬೇಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಮೈಸೂರು, ಏ. 10– ಮೈಸೂರಿನ ಮೇಟಗಳ್ಳಿ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ಈ ಠಾಣೆ ವ್ಯಾಪ್ತಿಯ ನಿವಾಸಿ ಜೆ. ರವಿ(53) ಎಂಬುವರು ಏ. 2ರಂದು ಮಧ್ಯಾಹ್ನ 2 ಗಂಟೆಗೆ ಮನೆಯಿಂದ ಹೊರ ಹೋದವರು ಮತ್ತೆ ವಾಪಸ್ಸಾಗಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.



ಈತನ ಬಗ್ಗೆ ಮಾಹಿತಿ ಇರುವವರು ಮೇಟಗಳ್ಳಿ ಠಾಣೆ ದೂರವಾಣಿ ಸಂಖ್ಯೆ 0821–2418315 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಕೆಎಂಎಫ್ ಮುಚ್ಚಲು ಬಿಜೆಪಿ ಹುನ್ನಾರ ನಡೆಸಿತ್ತು

- ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಘರ್ಜಿಸುತ್ತಿದ್ದಂತೆ ಹಿಂದೆ ಸರಿದ ಸರ್ಕಾರ: ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಡಾ.ಬಿ.ಪುಷ್ಪಾ ಅಮರನಾಥ್
- ಕಾಂಗ್ರೆಸ್‌ಗೆ ಮತ ನೀಡಿ ಸ್ವಾಯತ್ತ ಸಂಸ್ಥೆಗಳನ್ನು ಉಳಿಸಿಕೊಳ್ಳಲು ಬೆಂಬಲ ನೀಡುವಂತೆ ಕೋರಿಕೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಕೆಎಂಎಫ್‌ನ ನಂದಿನಿ ಉತ್ಪನ್ನಗಳನ್ನೇ ಖರೀದಿಸುವ ಅಭಿಯಾನಕ್ಕೆ ಮಹಿಳಾ ಕಾಂಗ್ರೆಸ್ ವತಿಯಿಂದ ಚಾಲನೆ ನೀಡಲಾಯಿತು.

ಮೈಸೂರು,ಏ.10(ಪಿಎಂ)– ಗುಜರಾತ್‌ನ ಹಾಲು ಉತ್ಪಾದಕ ಸಂಸ್ಥೆ 'ಅಮುಲ್'ನೊಂದಿಗೆ ಕರ್ನಾಟಕದ ಹಾಲು ಒಕ್ಕೂಟ (ಕೆಎಂಎಫ್–ನಂದಿನಿ) ವಿಲೀನ ಪ್ರಸ್ತಾಪಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಡಾ.ಬಿ.ಪುಷ್ಪಾ ಅಮರನಾಥ್, ಕೆಎಂಎಫ್ ಮುಚ್ಚಲು ಬಿಜೆಪಿ ಹುನ್ನಾರ ನಡೆಸಿದೆ ಎಂದು ಆರೋಪಿಸಿದರಲ್ಲದೇ, ಮೇ 10ರಂದು ಕಾಂಗ್ರೆಸ್‌ಗೆ ಮತದಾನ ಮಾಡುವ ಮೂಲಕ ಕನ್ನಡಿಗರ ಸ್ವಾಯತ್ತ ಸಂಸ್ಥೆಗಳನ್ನು ಉಳಿಸಿಕೊಳ್ಳಲು ಬೆಂಬಲ ನೀಡುವಂತೆ ರಾಜ್ಯದ ಜನತೆಯಲ್ಲಿ ಕೋರಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾರೂ ಪ್ರಶ್ನಿಸದೇ ಹೋದರೆ ಕೆಎಂಎಫ್ ಮುಚ್ಚುವ ದಿನಗಳು ಬಹಳ ದೂರವಿಲ್ಲ. ಮಾರುಕಟ್ಟೆಯಲ್ಲಿ ಕೆಎಂಎಫ್‌ನ ನಂದಿನಿ ಉತ್ಪನ್ನಗಳು ಮೊದಲ ಸ್ಥಾನದಲ್ಲಿವೆ. ಕನ್ನಡಿಗರ ಹೆಮ್ಮೆ ಈ ನಂದಿನಿ. ವಿಶೇಷವಾಗಿ ಮಹಿಳೆಯರು ಈ ಹುನ್ನಾರದ ವಿರುದ್ಧ ದನಿ ಎತ್ತಬೇಕು. ನಮ್ಮ ನಂದಿನಿ ಕನ್ನಡಿಗರ ಅಸ್ಮಿತೆಯಾಗಿದ್ದು, ಇದನ್ನು ನಮ್ಮ ಮಹಿಳಾ ಸಮುದಾಯ ಗಂಭೀರವಾಗಿ ಆಲೋಚನೆ ಮಾಡಬೇಕು ಎಂದು ಮನವಿ ಮಾಡಿದರು.

ಅಭಿಯಾನ: ಬೇರೆ ಎಲ್ಲಾ ಬ್ರ್ಯಾಂಡ್ ತಿರಸ್ಕರಿಸಿ ಕೆಎಂಎಫ್‌ನ ನಂದಿನಿ ಉತ್ಪನ್ನಗಳನ್ನೇ ಖರೀದಿಸುವ ಸಂಕಲ್ಪವನ್ನು ಮಹಿಳೆಯರು ಮಾಡಬೇಕೆಂಬ ನಿಟ್ಟಿನಲ್ಲಿ ಮಹಿಳಾ ಕಾಂಗ್ರೆಸ್ ಅಭಿಯಾನವೊಂದಕ್ಕೆ ಇಂದಿನಿಂದಲೇ ಚಾಲನೆ ನೀಡುತ್ತಿದೆ. ನಮ್ಮ ಜಿಲ್ಲೆಯಲ್ಲಿ ಮಹಿಳಾ ಕಾಂಗ್ರೆಸ್‌ನ ರಾಜ್ಯ, ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳು 2 ಸಾವಿರದಷ್ಟು ಇದ್ದು, ನಾವೆಲ್ಲರೂ 'ನಂದಿನಿ ಉಳಿಸೋಣ–ಕರ್ನಾಟಕ ಉಳಿಸೋಣ' ಅಭಿಯಾನಡಿ ನಂದಿನಿ ಉತ್ಪನ್ನ ಮಾತ್ರ ಖರೀದಿಸಲಿದ್ದೇವೆ. ಎಲ್ಲಾ ಜಿಲ್ಲೆಯಲ್ಲಿರುವ ಪದಾಧಿಕಾರಿಗಳೂ ಈ ಅಭಿಯಾನ ನಡೆಸಲಿದ್ದಾರೆ ಎಂದು ತಿಳಿಸಿದರು.

ವಿಲೀನ ಮಾಡುವುದಿಲ್ಲ. ಕಾಂಗ್ರೆಸ್‌ನವರು ಗೊಂದಲ ಉಂಟು ಮಾಡುತ್ತಿದ್ದಾರೆ ಎಂದು ಬಿಜೆಪಿ ನಾಯಕರು ಹೇಳಿಕೆ ನೀಡುತ್ತಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ನಾವು ದನಿ ಎತ್ತಲಿಲ್ಲವೆಂದಿದ್ದರೆ ವಿಲೀನ ಪ್ರಕ್ರಿಯೆಯೇ ಮುಗಿದು ಹೋಗುತ್ತಿತ್ತು. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮಾತನಾಡಲು ಶುರು ಮಾಡಿದ ಮೇಲೆ ಬಿಜೆಪಿಯವರು ಈ ರೀತಿ ಹೇಳಿಕೆ ನೀಡುತ್ತಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯ ಮೂರನೇ ಪಟ್ಟಿಯಲ್ಲಿ ಸಾಕಷ್ಟು ಮಹಿಳಾ ಅಭ್ಯರ್ಥಿಗಳಿಗೆ ಟಿಕೆಟ್ ದೊರೆಯುವ ವಿಶ್ವಾಸವಿದೆ. ಕಳೆದ ಬಾರಿ ಎಲ್ಲಾ ಪಕ್ಷಗಳಿಂತ ಹೆಚ್ಚು ಮಹಿಳೆಯರಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. ಮೀಸಲಾತಿ ಜಾರಿಯಾದರೆ ಎಲ್ಲಾ ಪಕ್ಷಗಳೂ ಮಹಿಳೆಯರಿಗೆ ಟಿಕೆಟ್ ನೀಡುವುದು ಅನಿವಾರ್ಯವಾಗಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮಹಿಳಾ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷೆ ಪುಷ್ಪವಲ್ಲಿ, ಮುಖಂಡರಾದ ರಾಧಾಮಣಿ, ಕಮಲಾಮ್ಮ, ಪುಷ್ಪಲತಾ ಚಿಕ್ಕಣ್ಣ ಮತ್ತಿತರರು ಗೋಷ್ಠಿಯಲ್ಲಿದ್ದರು.

ಸಿದ್ದರಾಮಯ್ಯರ ಉಗುರಿಗೂ ಪ್ರತಾಪ್ ಸಿಂಹ ಸಮವಲ್ಲ

ಮೈಸೂರು,ಏ.10(ಪಿಎಂ)– ಸಿದ್ದರಾಮಯ್ಯನವರು ಕುರಿ ಚರ್ಬಿ ತಿಂದು ಕೊಬ್ಬಿನ ಮಾತುಗಳನ್ನಾಡುತ್ತಿದ್ದಾರೆ ಎಂಬ ಸಂಸದ ಪ್ರತಾಪ್ ಸಿಂಹ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿರುವ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಡಾ.ಬಿ.ಪುಷ್ಪಾ ಅಮರನಾಥ್, ಅವರಿಗೆ ನಾಲಿಗೆ ಮೇಲೆ ಹಿಡಿತ ಇರಬೇಕು. ಸಿದ್ದರಾಮಯ್ಯನವರ ಬಗ್ಗೆ ಮಾತನಾಡಲು ಪ್ರತಾಪ್ ಸಿಂಹರಿಗೆ ಯೋಗ್ಯತೆ–ಅರ್ಹತೆ ಇಲ್ಲ. ಸಿದ್ದರಾಮಯ್ಯರ ಉಗುರಿಗೂ ಪ್ರತಾಪ್ ಸಿಂಹ ಸಮವಲ್ಲ ಎಂದು ಹರಿಹಾಯ್ದರು.

ಗುಜರಾತ್ ಸಿಂಹ ಬಂದ ಮೇಲೆ ಭಯ ಶುರುವಾಗಿದೆ ಎಂಬ ಪ್ರತಾಪ್ ಸಿಂಹ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯನವರ ಬಗ್ಗೆ ಮಾತನಾಡುವ ಮುನ್ನ ಪುಷ್ಪಾ ಅಮರನಾಥ್ ಎದುರಿಸಲಿ. ಸಿಂಹಣಿ ನಾನು ಇಲ್ಲಿಯೇ ಇದ್ದೇನೆ. ಚುನಾವಣೆಯಲ್ಲಿ ಯಾರಿಗೆ ಚರ್ಬಿ ಇದೆಯೆಂದು ಜನ ತೀರ್ಮಾನಿಸಲಿದ್ದಾರೆ. ಮೇರು ವ್ಯಕ್ತಿತ್ವದ ಸಿದ್ದರಾಮಯ್ಯ ಅವರಿಗೆ ಅವರದೇ ಬಿಜೆಪಿ ಸರ್ಕಾರ ಅತ್ಯುತ್ತಮ ಮುಖ್ಯಮಂತ್ರಿ ಎಂದು ಪ್ರಶಸ್ತಿ ನೀಡಿದೆ ಎಂದು ಟಾಂಗ್ ನೀಡಿದರು.

ರಾಜ್ಯ ಅಭಿವೃದ್ಧಿ ಪಥದಲ್ಲಿ ಸಾಗಿಸಲು ಅನೇಕ ಜನಪರ ಯೋಜನೆ ಕೊಟ್ಟವರು ಸಿದ್ದರಾಮಯ್ಯ. ಅವರ ಬಗ್ಗೆ ಹೀಗೆ ಮಾತನಾಡುವುದು ಅವರ ನೈತಿಕ ದಿವಾಳಿತನ ತೋರಿಸುತ್ತದೆ. ಸಿದ್ದರಾಮಯ್ಯನವರ ಬಗ್ಗೆ ಮಾತನಾಡದಿದ್ದರೆ ಪ್ರತಾಪ್ ಸಿಂಹರಿಗೆ ಬಿಜೆಪಿಯಲ್ಲಿ ಗೌರವವೇ ಇರುವುದಿಲ್ಲ. ಇಡೀ ಬಿಜೆಪಿಗೇ ಸಿದ್ದರಾಮಯ್ಯರನ್ನು ಕಂಡರೆ ಭಯ. ಈ ಚುನಾವಣೆಯಲ್ಲಿ ಸಿಂಹ, ಹುಲಿ ಹಾಗೂ ನರಿ ಯಾರೆಂದು ಜನ ತೀರ್ಮಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಚುನಾವಣಾ ಪ್ರಚಾರಕ್ಕೆ ಮಹದೇವಪ್ಪ ವಿದ್ಯುಕ್ತ ಚಾಲನೆ

ಜನಪರ ಯೋಜನೆಗಳಿಗಾಗಿ ಕಾಂಗ್ರೆಸ್ ಬೆಂಬಲಿಸಲು ಮನವಿ



ರಾಜ್ಯ ಮತ್ತು ಕೇಂದ್ರ ರಾಜಕಾರಣಕ್ಕೆ ಘಟಾನುಘಟಿ ನಾಯಕರನ್ನು ನೀಡಿರುವ ಬನ್ನೂರು–ತಿ.ನರಸೀಪುರದ ಮತದಾರರು ಎಲ್ಲವನ್ನೂ ಬಲ್ಲರು. ಈ ಬಾರಿ ಯಾರನ್ನು ಶಾಸನಸಭೆಗೆ ಆಯ್ಕೆ ಮಾಡಬೇಕು ಎನ್ನುವ ಬಗ್ಗೆ ಮನಸ್ಸಿನಲ್ಲಿಯೇ ವಿಶ್ಲೇಷಿಸಿದ್ದಾರೆ. ಮುಂಬರುವ ಮೇ 10 ರಂದು ಅವರ ಗುಟ್ಟನ್ನು ಬಿಟ್ಟು ಕೊಡಲಿದ್ದಾರೆ. ಅವರ ಮೇಲೆ ನನಗುಂಟೂ ವಿಶ್ವಾಸವಿದೆ
–ಡಾ.ಹೆಚ್.ಸಿ.ಮಹದೇವಪ್ಪ, ಕಾಂಗ್ರೆಸ್ ಅಭ್ಯರ್ಥಿ.

ತಿ.ನರಸೀಪುರ ಏ.10– ಕ್ಷೇತ್ರವನ್ನು ಮರಳಿ ಪಡೆಯಲು ಪಣ ತೊಟ್ಟಿರುವ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಾಲೂಕಿನ ದೊಡ್ಡ ಮುಲಗೂಡು ಗ್ರಾಮದಲ್ಲಿ ಸೋಮವಾರ ಬಹಿರಂಗ ಚುನಾವಣಾ ಪ್ರಚಾರಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ತಾಲೂಕಿನ ದಾಸೇಗೌಡನಕೊಪ್ಪಲು–ಯಡಹಳ್ಳಿ ಗ್ರಾಮದ ಬಳಿಯ ಶ್ರೀಸಿದ್ದೇಶ್ವರ ದೇವಾಲಯದಲ್ಲಿ ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ಪೂಜೆ ಸಲ್ಲಿಸಿ, ಗಡಿ ಗ್ರಾಮ ದೊಡ್ಡಮುಲಗೂಡಿನಿಂದಲೇ ಮತಬೇಟೆ ಆರಂಭಿಸಿ ಮಾತನಾಡಿದ ಅವರು, 2013ರಲ್ಲಿ ಜನರು ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ನೀಡಿದ್ದರಿಂದ ನುಡಿದಂತೆ ನಡೆದು ಎಲ್ಲಾ ಭರವಸೆಗಳನ್ನು ಈಡೇರಿಸಿದ್ದೇನೆ. ಮತ್ತೆ ಜನಪರ ಯೋಜನೆಗಳನ್ನು ಆರಂಭಿಸಲು ಜನರು ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ಹಸಿವು ಮುಕ್ತ ಕರ್ನಾಟಕ ಪರಿಕಲ್ಪನೆಯೊಂದಿಗೆ ಜಾರಿಗೆ ತಂದ ಅನ್ನ ಭಾಗ್ಯ ಯೋಜನೆ ಕೋವಿಡ್ ಸಂಕಷ್ಟದ ಕಾಲದಲ್ಲಿ ಎಲ್ಲಾ ವರ್ಗ, ಧರ್ಮದ ಜನರ ನೆರವಿಗೆ ಬಂತು. ಅಭಿವೃದ್ಧಿ ದೃಷ್ಟಿಯಿಂದ ಕಾಂಗ್ರೆಸ್ ಯೋಜನೆಗಳನ್ನು ರೂಪಿಸಿದ್ದರೆ, ಈಗಿನ ಎಂಎಲ್ಎ, ಸಚಿವರು ಜನರು, ರೈತರ ಬಗ್ಗೆ ಮಾತನಾಡುತ್ತಿಲ್ಲ. ಹೀಗಾಗಿ ಜನಪರ, ಅಭಿವೃದ್ಧಿ ಪರ ಇರುವವರನ್ನು ಚುನಾವಣೆಗಳಲ್ಲಿ ಗೆಲ್ಲಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಹಿಡಿತವಿಲ್ಲದ್ದಕ್ಕೆ ಹೆಚ್‌ಡಿಕೆ ಸಿಎಂ ಹುದ್ದೆ ಕಳೆದುಕೊಂಡರು: ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟ ಕಾರಣ ಕಳೆದ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ಬರಲಿಲ್ಲ. ಬಿಜೆಪಿಯನ್ನು ಅಧಿಕಾರದಿಂದ ದೂರ ವಿಡಲು ಜೆಡಿಎಸ್ ಜೊತೆ ಒಂದೂವರೆ ವರ್ಷಗಳ ಕಾಲ ಮೈತ್ರಿ ಸರ್ಕಾರ ರಚಿಸಿದರಾದರೂ ಹೆಚ್.ಡಿ.ಕುಮಾರಸ್ವಾಮಿ ನಾಯಕತ್ವದಲ್ಲಿ ಹಿಡಿತವಿಲ್ಲದ ಕಾರಣಕ್ಕೆ ಸಿಎಂ ಹುದ್ದೆ ಕಳೆದುಕೊಂಡರು. ಬಿಜೆಪಿ ಪಕ್ಷ ಶಾಸಕರಿಗೆ ಅಧಿಕಾರ ಮತ್ತು ಹಣದ ಆಮಿಷವೊಡ್ಡಿ ಆಪರೇಷನ್ ಕಮಲದ ಮೂಲಕ ಸರ್ಕಾರ ರಚಿಸಿದ್ದರಿಂದ ಅಭಿವೃದ್ಧಿ ಬಯಸುವ ಜನರಿಗೆ ನಷ್ಟವಾದರೆ, ಸಾಮಾನ್ಯರಿಗೆ ಕಷ್ಟವಾಯಿತು. ಬೆಲೆ ಗಗನಕ್ಕೆ ಹೋಯಿತು. ಅಡುಗೆ ಅನಿಲ 1300 ರೂ.ಗಳಾಯ್ತು ಎಂದರು.

ಈ ವೇಳೆ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಮಾಜಿ ಸದಸ್ಯ ಪ್ರಭಾಕರ್, ಹಿಂದುಳಿದ ವರ್ಗಗಳ ಜಿಲ್ಲಾ ಉಪಾಧ್ಯಕ್ಷ ಎ.ಎನ್.ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಶಶಿ ನಾಗಭೂಷಣ್, ಲೋಕೇಶ್, ಪ್ರದೀಪ್, ಪುರಸಭಾ ಮಾಜಿ ಅಧ್ಯಕ್ಷ ಪದ್ಮನಾಭ, ರಾಮಲಿಂಗೇಗೌಡ, ಮುನಾವರ್ ಪಾಷಾ, ಸಿದ್ದೇಗೌಡ, ವೈ.ಎನ್. ಶಂಕರೇಗೌಡ, ಬ್ಲಾಕ್ ಅಧ್ಯಕ್ಷ ಚನ್ನಕೇಶವ, ರಾಮಲಿಂಗೇಗೌಡ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರೀಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ರಾವಣಸುರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಹೊಯ್ಸಳ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪ್ರದರ್ಶನ ಇರುವುದಿಲ್ಲ	
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾವಣಸುರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವೀರಂ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
1947 (ತ)	4 ಪ್ರದರ್ಶನಗಳು
ಸಂಗಂ	
ರಾವಣಸುರ (ತೆ)	4 ಪ್ರದರ್ಶನಗಳು
ಲಿಡೋ	
ಕಬ್ಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೀರಂ (ಕ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು

ಕಂಪಲಾಪುರ ಡೇರಿಗೆ ನಜೀಬ್ ಅಧ್ಯಕ್ಷ



ಕಂಪಲಾಪುರ, ಏ.10– ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಹಮ್ಮದ್ ನಜೀಬ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಕೃಷ್ಣೇಗೌಡರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಜೀಬ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಸಹಾಯಕ ಚುನಾವಣಾಧಿಕಾರಿ ಡಿ.ಶಿವಕುಮಾರ್ ಘೋಷಿಸಿದರು. ಈ ವೇಳೆ ಸಿಇಓ ಕಿಶೋರ್, ಉಪಾಧ್ಯಕ್ಷ ಶಿವಣ್ಣ ನಿರ್ದೇಶಕರಾದ ಕೃಷ್ಣೇಗೌಡ, ಕೆ.ಎನ್. ಜಯಣ್ಣ, ಕೆ.ಕೆ.ಸ್ವಾಮಿ, ಚೆಲುವೇಗೌಡ, ಕೃಷ್ಣ ಸ್ವಾಮಿ, ಜಯಮ್ಮ, ಸಾಕಮ್ಮ, ಗ್ರಾಪಂ ಮಾಜಿ ಅಧ್ಯಕ್ಷ ಗಿರೀಶ್, ಆಸೀಫ್, ಸಹಕಾರ ಸಂಘದ ನಿರ್ದೇಶಕ ರವಿ, ಲೋಕೇಶ್, ಮಸೀದಿ ಅಧ್ಯಕ್ಷ ಮುಜಾಮಿಲ್, ಸಿಬ್ಬಂದಿ ಮಂಜು, ರೇವಣ್ಣ ಮತ್ತಿತರರಿದ್ದರು.

ಪ್ರತಿಯೊಬ್ಬರೂ ಮತದಾನ ಮಾಡಿ: ತಾಪಂ ಇಓ



ಹುಣಸೂರು, ಏ.10– ಯುವಕರು ಸೇರಿದಂತೆ ಪ್ರತಿಯೊಬ್ಬರೂ ಮತದಾನ ಮಾಡುವಂತೆ ಸಹಾಯಕ ಚುನಾವಣಾಧಿಕಾರಿ ಹಾಗೂ ತಾಪಂ ಇಓ ಬಿ.ಕೆ.ಮನು ಮನವಿ ಮಾಡಿದರು.

ತಾಲೂಕಿನ ಕಟ್ಟೆ ಮಳಲವಾಡಿ ಗ್ರಾಪಂ ವ್ಯಾಪ್ತಿಯಲ್ಲಿ ನಡೆದ ಜಾತ್ರಾ ಮಹೋತ್ಸವದಲ್ಲಿ ಮತದಾನಕ್ಕೆ ಸಂಬಂಧಿಸಿದಂತೆ ಜಾಗೃತಿ ಜಾಥಾ ಮತ್ತು ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಬಾರಿ ಶೇ.100 ರಷ್ಟು ಮತದಾನದ ಗುರಿಯೊಂದಿಗೆ ತಾಲೂಕಿನ 273 ಮತಗಟ್ಟೆಗಳಲ್ಲಿ ಮತದಾರರನ್ನು ಸೆಳೆಯುವಲ್ಲಿ ವಿಶೇಷ ಮತಗಟ್ಟೆಗಳನ್ನು ತೆರೆಯಲಾಗುತ್ತಿದೆ. ಅಂತೆಯೇ ಪಿಂಕ್, ಸಖಿ, ಸಾಂಪ್ರದಾಯಿಕ, ಹೊಸದಾಗಿ ಮತ ಚಲಾವಣೆ ಮಾಡುತ್ತಿರುವವರಿಗೆ ಯಂಗ್ ಸ್ಟರ್ಸ್ ಹಾಗೂ ವಿಶೇಷ ಚೇತನರಿಗಾಗಿ ವಿಶೇಷ ಮತಗಟ್ಟೆ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಪ್ರಜಾಪ್ರಭುತ್ವದ ಹಬ್ಬವೆಂದೇ ಕರೆಯಲ್ಪಡುವ ಈ ದಿನದಂದು ನಿರ್ಲಕ್ಷ್ಯ ತೋರದೇ ನಿರ್ದಿಷ್ಟ ಸಮಯಕ್ಕೆ ಪ್ರತಿಯೊಬ್ಬರೂ ಮತದಾನ ಮಾಡುವ ಮೂಲಕ ತಮ್ಮ ಜವಾಬ್ದಾರಿ ನಿರ್ವಹಿಸಿ ಎಂದು ಸಲಹೆ ನೀಡಿದರು.

ಬಳಿಕ ಜಾಥಾ ಪ್ರಮುಖ ಬೀದಿಗಳಲ್ಲಿ ಸಾಗಿತು. ಅಲ್ಲದೇ ಮಾನವ ಸರಪಳಿ ನಿರ್ಮಾಣ, ಸಹಿ ಸಂಗ್ರಹ ಅಭಿಯಾನ ಹಾಗೂ ಮೇ.10ರಂದು ಕಡ್ಡಾಯವಾಗಿ ಮತದಾನ ಮಾಡಿರಿ ಎಂಬ ಶೀರ್ಷಿಕೆಯಲ್ಲಿ ಇರಿಸಲಾಗಿದ್ದ ಸೆಲ್ಫಿ ಪಾಯಿಂಟ್‌ನಲ್ಲಿ ನೆರೆದಿದ್ದ ಜನರನ್ನು ಆಕರ್ಷಿಸುವುದರ ಜೊತೆಗೆ ಮತದಾನದ ಅರಿವು ಮೂಡಿಸಲಾಯಿತು.

ಈ ವೇಳೆ ನರೇಗಾ ಸಹಾಯಕ ನಿರ್ದೇಶಕರಾದ ಹೆಚ್.ಡಿ.ಲೋಕೇಶ್, ಕಟ್ಟೆ ಮಳಲವಾಡಿ ಪಿಡಿಓ ವಿಜಯ ಕುಮಾರಿ, ಸಂಜೀವಿನಿ ಒಕ್ಕೂಟದ ಮಹಿಳೆಯರು, ಆಶಾ ಕಾರ್ಯಕರ್ತೆಯರು ಸೇರಿದಂತೆ ಪಂಚಾಯಿತಿ ಸಿಬ್ಬಂದಿ ವರ್ಗ ಪಾಲ್ಗೊಂಡಿದ್ದರು.

ಶಾಸಕ ಸಾರಾ ಗೆಲುವಿಗೆ ದಲಿತ ಸಮುದಾಯ ಶ್ರಮಿಸಿ

ಜಿಪಂ ಮಾಜಿ ಸದಸ್ಯ ಅಚ್ಯುತಾನಂದ ಮನವಿ



ಕೆ.ಆರ್.ನಗರ, ಏ.10– ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಾ.ರಾ.ಮಹೇಶ್ ಅವರನ್ನು 4ನೇ ಬಾರಿ ಗೆಲ್ಲಿಸಲು ದಲಿತ ಸಮುದಾಯ ಶ್ರಮಿಸಬೇಕು ಎಂದು ಜಿಪಂ ಮಾಜಿ ಸದಸ್ಯ ಹಾಗೂ ದಲಿತ ಮುಖಂಡ ಅಚ್ಯುತಾನಂದ ಮನವಿ ಮಾಡಿದರು.

ಪಟ್ಟಣದ ಭಾರತೀಯ ವೈದ್ಯಕೀಯ ಭವನದಲ್ಲಿ (ಐಎಂಎ) ನಡೆದ ದಲಿತ ಸಮುದಾಯದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಶಾಸಕರು ಪಟ್ಟಣದ ಹೃದಯ ಭಾಗದಲ್ಲಿ ಒಂದು ಎಕರೆ ಜಮೀನು ನೀಡಿ, 10 ಕೋಟಿ ವೆಚ್ಚದಲ್ಲಿ ಸಂಸತ್ ಭವನ ಮಾದರಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ ನೀಡಿದ್ದಾರೆ. ಇದು ತಾಲೂಕಿನ ದಲಿತ ಸಮಾಜದವರು ಸಂತಸ ಪಡುವ ವಿಚಾರ. ಈಗಾಗಲೇ ಭವನದ ನಿರ್ಮಾಣ ಕಾಮಗಾರಿ ಆರಂಭವಾಗಿದೆ ಎಂದರು.

ಶಾಸಕ ಸಾ.ರಾ.ಮಹೇಶ್, ಪ್ರತಿ ಹಳ್ಳಿಗಳಲ್ಲೂ ಅಂಬೇಡ್ಕರ್ ಸಮುದಾಯ ಭವನವನ್ನು ಕಟ್ಟಿಸಿದ್ದಾರೆ. ಅಲ್ಲದೇ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ತಾಲೂಕಿನ ಮಹಿಳೆಯರಿಗಾಗಿ ಸಾ.ರಾ.ನಿಧಿ ಗಾರ್ಮೆಂಟ್ಸ್ ಆರಂಭಿಸಿ ಸಾವಿರ ಮಹಿಳೆಯರಿಗೆ ಉದ್ಯೋಗ ನೀಡಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ದಲಿತ ಸಮುದಾಯದ ಮೇಲೆ ಶಾಸಕರಿಗೆ ಅಪಾರ ಕಾಳಜಿ ಇದೆ. ಕಳೆದ 15 ವರ್ಷಗಳಿಂದ ತಾಲೂಕಿನಲ್ಲಿ ಯಾವುದೇ ಕೋಮು ಗಲಭೆಗೆ ಅವಕಾಶ ನೀಡದೇ ಉತ್ತಮ ಆಡಳಿತ ನೀಡಿದ್ದಾರೆ. ಆದ್ದರಿಂದ ದಲಿತ ಸಮುದಾಯದ ಮುಖಂಡರು ಈ ಬಾರಿ ಶಾಸಕ ಸಾ.ರಾ.ಮಹೇಶ್ ಅವರನ್ನು ಅಧಿಕ ಮತಗಳಿಂದ ಜಯಶೀಲರನ್ನಾಗಿ ಮಾಡಲು ಶ್ರಮಿಸಬೇಕು ಎಂದರು. ಸಭೆಯಲ್ಲಿ ಜೆಡಿಎಸ್ ಜಿಲ್ಲಾ ಕಾರ್ಯ ದರ್ಶಿ ನಾಗರಾಜ್, ತಾಪಂ ಮಾಜಿ ಸದಸ್ಯ ರಾದ ತಮ್ಮಣ್ಣ, ಶ್ರೀನಿವಾಸ್ ಪ್ರಸಾದ್, ಸಂಪತ್, ಭೇರ್ಯ ಗ್ರಾಪಂ ಮಾಜಿ ಉಪಾ ಧ್ಯಕ್ಷ ಬಿ.ಕೆ.ಶಿವಕುಮಾರ್, ಸಾಲಿಗ್ರಾಮ ಎಸ್‌ಸಿ ಘಟಕದ ಅಧ್ಯಕ್ಷ ಶ್ರೀನಿವಾಸ್, ಕಿರಣ್ ಕುಮಾರ್ ಸೇರಿದಂತೆ ಅನೇಕರಿದ್ದರು.

ಅಮುಲ್ ಮೂಲಕ ನಂದಿನಿ ಬ್ರಾಂಡ್ ಮುಗಿಸುವ ಷಡ್ಯಂತ್ರ

ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಆರೋಪ



ತಿ.ನರಸೀಪುರ, ಏ.10– ರಾಜ್ಯ ಸರ್ಕಾರ ಅಮುಲ್ ಮೂಲಕ ಹೈನುಗಾರಿಕೆ ನಂಬಿರುವ ಜನರನ್ನು ವ್ಯವಸ್ಥಿತವಾಗಿ ಮುಗಿಸುವ ಷಡ್ಯಂತ್ರ ನಡೆಸಿದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮುಲ್‌ಗಿಂತ ನಂದಿನಿ ಶ್ರೇಷ್ಠವಾಗಿದ್ದು, ದರದಲ್ಲೂ ಅಮುಲ್‌ಗಿಂತ ಕಡಿಮೆ ಬೆಲೆ ಇದೆ. ಆದರೆ ಅಮುಲ್ ರಾಜ್ಯ ಪ್ರವೇಶಕ್ಕೆ ಸರ್ಕಾರವೇ ವೇದಿಕೆ ಸೃಷ್ಟಿಸಿದೆ. ಈ ಮೂಲಕ ರಾಜ್ಯ ಸರ್ಕಾರ ಹೈನುಗಾರಿಕೆ ನಂಬಿ ಬದುಕುತ್ತಿರುವ ರೈತರು, ನಿರುದ್ಯೋಗಿಗಳನ್ನು ಬಲಿಕೊಡುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು.

ಹಸುಗಳಿಗೆ ಕಾಯಿಲೆ ಬಂದಾಗ ಅವುಗಳ ಚಿಕಿತ್ಸೆಗೆ ಸರ್ಕಾರ ಸ್ಪಂದಿಸಲಿಲ್ಲ. ಹಸುಗಳು ಸತ್ತ ನಂತರ ಅದನ್ನು ನಂಬಿದ್ದ ರೈತರಿಗೆ ಪರಿಹಾರ ನೀಡುವ ಕೆಲಸ ಮಾಡಲಿಲ್ಲ. ಅಮುಲ್ ಹಾಲಿನ ಬೆಲೆ ಲೀಟರ್‌ಗೆ 54 ರೂ., ನಮ್ಮ ನಂದಿನಿ ಹಾಲು 39 ರೂ. ಗಳಿದ್ದು, 15 ರೂ. ವ್ಯತ್ಯಾಸವಿದೆ. ಗುಜರಾತ್‌ನಲ್ಲಿ ರೈತರಿಗೆ 48 ರಿಂದ 50 ರೂ. ಗಳನ್ನು ನೀಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ರೈತರಿಗೆ ಕಡಿಮೆ ಬೆಲೆ ನೀಡಲಾಗುತ್ತಿದೆ. ರೈತರನ್ನು ಉದ್ಧಾರ ಮಾಡಬೇಕಾದ ಸರ್ಕಾರ ಕಡಿಮೆ ಬೆಲೆ ಕೊಟ್ಟಾಗ ರೈತರು ಉದ್ಧಾರವಾಗುವುದು ಎಲ್ಲಿಂದ ಬಂತು ಎಂದು ಪ್ರಶ್ನಿಸಿದರು.

ಅಮುಲ್ ಬಗ್ಗೆ ಈಗಾಗಲೇ ರಾಜ್ಯದಲ್ಲಿ ಚರ್ಚೆ ನಡೆಯುತ್ತಿದ್ದು, ನಮ್ಮ ರಾಜ್ಯದ ಬ್ರಾಂಡ್ ನಂದಿನಿಯನ್ನು ವ್ಯವಸ್ಥಿತವಾಗಿ ಮುಗಿಸುವ ಸಂಚು ರೂಪಿಸಿದೆ. ಇದರ ವಿರುದ್ಧ ನಾವು ಜಾಗೃತರಾಗಬೇಕಾಗಿದೆ. ನಮ್ಮ ರೈತರು ಹಾಗೂ ಹೈನುಗಾರಿಕೆಯನ್ನು ಉಳಿಸುವ ನಿಟ್ಟಿನಲ್ಲಿ ನಂದಿನಿ ಕಾಪಾಡಿಕೊಳ್ಳಬೇಕಿದೆ. ಜನರು ಅಮುಲ್ ವಿರುದ್ಧ ಧ್ವನಿ ಎತ್ತಬೇಕಿದೆ ಎಂದರು.

ಮಾಜಿ ಸದಸ್ಯ ಪ್ರಭಾಕರ್, ಹಿಂದುಳಿದ ವರ್ಗಗಳ ಜಿಲ್ಲಾ ಉಪಾಧ್ಯಕ್ಷ ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಶಶಿ ನಾಗ ಭೂಷಣ್, ಮಾಜಿ ಪುರಸಭಾ ಸದಸ್ಯ ರಾಮಲಿಂಗೇಗೌಡ, ಲೋಕೇಶ್, ಪ್ರದೀಪ್ ಇತರಿದ್ದರು.

ಹತ್ತಿ ಗೋಡೌನ್‌ಗೆ ಆಕಸ್ಮಿಕ ಬೆಂಕಿ: ಲಕ್ಷಾಂತರ ರೂ. ನಷ್ಟ

ಹೆಚ್.ಡಿ.ಕೋಟೆ, ಏ.10– ಹತ್ತಿ ಗೋಡೌನ್‌ಗೆ ಆಕಸ್ಮಿಕ ಬೆಂಕಿ ಬಿದ್ದು ಲಕ್ಷಾಂತರ ರೂ. ನಷ್ಟ ಸಂಭವಿಸಿರುವ ಘಟನೆ ಸೋಮವಾರ ಮಧ್ಯಾಹ್ನ ಪಟ್ಟಣದ ಮುಸ್ಲಿಂ ಬ್ಲಾಕ್‌ನಲ್ಲಿ ನಡೆದಿದೆ.



ಮುಸ್ಲಿಂ ಬ್ಲಾಕ್ ನಿವಾಸಿ ಜಾವೇದ್ ಎಂಬುವರಿಗೆ ಸೇರಿದ ಹತ್ತಿ ಗೋಡೌನ್ ಬೆಂಕಿಗೆ ಆಹುತಿಯಾಗಿದೆ. ಘಟನೆಯಲ್ಲಿ ಸುಮಾರು 4 ಲಕ್ಷ ರೂ. ಬೆಲೆ ಬಾಳುವ ಹತ್ತಿ ಭಸ್ಮವಾಗಿದೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಈ ವೇಳೆ ಅಗ್ನಿಶಾಮಕ ದಳದ ಹೇಮಂತ್, ರಮೇಶ್, ಉದಯ ಕುಮಾರ್, ಶಿವಪ್ಪ, ಸಂಗಮೇಶ್, ಸಿದ್ದು ಸೇರಿದಂತೆ ಇನ್ನಿತರರಿದ್ದರು.

ತಪ್ಪದೇ ಮತದಾನ ಮಾಡಿ; ವಿದ್ಯಾರ್ಥಿಗಳಿಂದ ಪೋಷಕರಿಗೆ ಪತ್ರ



ನಂಜನಗೂಡು, ಏ.10– ತಾಲೂಕಿನ ಕಳಲೆ ಗ್ರಾಮದ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ಹಾಸ್ಟೆಲ್ ವಿದ್ಯಾರ್ಥಿಗಳು ಇತ್ತೀಚೆಗೆ ತಪ್ಪದೇ ಮತದಾನ ಮಾಡುವಂತೆ ಪೋಷಕರಿಗೆ ಪತ್ರ ಬರೆದು ವಿನೂತನ ರೀತಿ ಮತದಾನ ಜಾಗೃತಿ ಮೂಡಿಸಿದರು.

ಈ ಬಾರಿಯ ಚುನಾವಣೆಯಲ್ಲಿ ತಾಲೂಕಿನಲ್ಲಿ ಅತೀ ಹೆಚ್ಚು ಮತದಾನವಾಗುವ ನಿಟ್ಟಿನಲ್ಲಿ ತಾಪಂ ಸ್ವೀಪ್ ಸಮಿತಿ ವಿದ್ಯಾರ್ಥಿಗಳಿಂದ ಪೋಷಕರು ಹಾಗೂ ನೆರೆಹೊರೆಯರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಆಯೋಜಿಸಿದ್ದ ಪತ್ರ ಅಭಿಯಾನ ಜಾಗೃತಿ ಅಂಗವಾಗಿ ವಿದ್ಯಾರ್ಥಿಗಳು ಪೋಷಕರಿಗೆ ಪತ್ರ ಬರೆದು, ಯಾವುದೇ ಆಸೆ, ಅಮಿಷಗಳಿಗೆ ಒಳಗಾಗದೇ ಮತದಾನ ಪ್ರಕ್ರಿಯೆಯಲ್ಲಿ ತಪ್ಪದೇ ಪಾಲ್ಗೊಳ್ಳುವ ಮೂಲಕ ನಮ್ಮ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವಂತೆ ಕೋರಿದರು.

ಕಾರ್ಯಕ್ರಮದಲ್ಲಿ ತಾಲೂಕು ಸ್ವೀಪ್ ಸಮಿತಿಯ ದಿನೇಶ್, ಕಾವ್ಯ, ಸುನೀತಾ, ನವೀನ್ ಉಪಸ್ಥಿತರಿದ್ದರು.



ಹುಣಸೂರು ತಾಲೂಕಿನ ಕರಿಮುದ್ದನಹಳ್ಳಿ ಗ್ರಾಪಂ ವ್ಯಾಪ್ತಿಯ ಶ್ರೀಕೆಂಡಗಣ್ಣಸ್ವಾಮಿ ಗದ್ದಿಗೆ ಗ್ರಾಮದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ಚುನಾವಣಾ ಪ್ರಚಾರ ನಡೆಸಿದರು. ಈ ವೇಳೆ ಕರಿಮುದ್ದನಹಳ್ಳಿ ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಹಿರಿಯ ಮುಖಂಡರು, ಗ್ರಾಮಸ್ಥರು ಇನ್ನಿತರರಿದ್ದರು.

ದಾಖಲೆ ಇಲ್ಲದ 2 ಲಕ್ಷ ರೂ. ವಶ

ಕೆ.ಆರ್.ನಗರ, ಏ.10– ಬೈಕ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 2 ಲಕ್ಷ ರೂ.ಗಳನ್ನು ತಾಲೂಕಿನ ದೊಡ್ಡೇಕೊಪ್ಪಲು ಚೆಕ್‌ಪೋಸ್ಟ್‌ನಲ್ಲಿ ಚುನಾವಣಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ದೊಡ್ಡೇಕೊಪ್ಪಲು ಚೆಕ್‌ಪೋಸ್ಟ್‌ನಲ್ಲಿ ವಾಹನಗಳನ್ನು ತಪಾಸಣೆ ಮಾಡುವ ವೇಳೆ ಬೈಕ್‌ನಲ್ಲಿ ಮೈಸೂರಿನಿಂದ ಕೆ.ಆರ್.ನಗರಕ್ಕೆ ಬರುತ್ತಿದ್ದ ಎಸ್.ಡಿ.ಪ್ರಜ್ವಲ್ ಅವರನ್ನು ತಪಾಸಣೆ ಮಾಡಲಾಗಿ ಅವರ ಬಳಿ ಇದ್ದ 2 ಲಕ್ಷ ರೂ.ಗಳನ್ನು ವಶಪಡಿಸಿಕೊಂಡಿದ್ದು, ದಾಖಲೆ ಹಾಜರು ಪಡಿಸುವವರೆಗೂ ಪಟ್ಟಣದ ಉಪ ಖಜಾನೆಯಲ್ಲಿ ಹಣ ಸಂರಕ್ಷಿಸಿಡಲಾಗುವುದು ಎಂದು ಸಹಾಯಕ ಚುನಾವಣಾಧಿಕಾರಿ ತಹಸೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್ 'ಮೈಸೂರು ಮಿತ್ರ' ನಿಗೆ ತಿಳಿಸಿದ್ದಾರೆ.

ನನ್ನ ಅಭಿವೃದ್ಧಿ ಕಾರ್ಯ ನೋಡಿ ಮರು ಆಯ್ಕೆಗೊಳಿಸಿ

ಚುನಾವಣಾ ಪ್ರಚಾರದಲ್ಲಿ ಶಾಸಕ ಹರ್ಷವರ್ಧನ್ ಮನವಿ



ನಂಜನಗೂಡು, ಏ.10– ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನನ್ನ ಗುರಿ. ಹೀಗಾಗಿ ಮತದಾರರು ಆಮಿಷಗಳಿಗೆ ಬಲಿಯಾಗದೆ ಕಳೆದ 5 ವರ್ಷಗಳಲ್ಲಿ ನಾನು ಮಾಡಿರುವ ಅಭಿವೃದ್ಧಿ ಕಾರ್ಯ ನೋಡಿ ನನಗೆ ಮತ ನೀಡುವ ಮೂಲಕ ಮರು ಆಯ್ಕೆಗೊಳಿಸಿ ಎಂದು ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ತಾಲೂಕಿನ ಹೊರಳವಾಡಿಯಲ್ಲಿ ಸೋಮವಾರ ಚುನಾವಣಾ ಪ್ರಚಾರ ನಡೆಸಿ ಮಾತನಾಡಿದ ಅವರು, ನಾನು ಶಾಸಕನಾದ ಬಳಿಕ ಕ್ಷೇತ್ರದಲ್ಲಿ ಇರುವುದಿಲ್ಲ. ಬೆಂಗಳೂರಿನಲ್ಲಿ ಕಾಲ ಕಳೆಯುತ್ತಾನೆ ಎಂದು ವಿರೋಧ ಪಕ್ಷದವರು ಭಾವಿಸಿದ್ದರು. ಆದರೆ ವಾರದ 4 ದಿನ ಕ್ಷೇತ್ರದ ಜನರ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಕೊರೊನಾ, ಪ್ರವಾಹದ ನಡುವೆಯೂ ಕ್ಷೇತ್ರಕ್ಕೆ 823 ಕೋಟಿ ಅನುದಾನ ತಂದಿದ್ದೇನೆ. ಕಳೆದ 5 ವರ್ಷಗಳಲ್ಲಿ ಸಾಕಷ್ಟು ಕೆಲಸ ಮಾಡಿರುವುದರಿಂದ ಅನುಭವ ಹೆಚ್ಚಾಗಿದೆ. ಹೇಗೆ ಅನುದಾನ ತರಬೇಕೆಂದು ಗೊತ್ತಾಗಿದೆ. ಅಲ್ಲದೆ ಕ್ಷೇತ್ರದಲ್ಲಿ ಏನೆಲ್ಲಾ ಅಭಿವೃದ್ಧಿ ಕೆಲಸ ಮಾಡಬೇಕು ಎಂಬುದರ ಸಂಪೂರ್ಣ ಅರಿವಿದೆ. ಹೀಗಾಗಿ ಕ್ಷೇತ್ರದಲ್ಲಿ 38 ವರ್ಷಗಳಿಂದ ನೆನೆಗುದಿಗೆ ಬಿದ್ದದ್ದ ನುಗು ಏತ ನೀರಾವರಿ ಯೋಜನೆಯನ್ನು ಸಾಕಾರಗೊಳಿಸಿದ್ದೇನೆ. ಅಲ್ಲದೆ ಶ್ರೀಕಂಠೇಶ್ವರ ಅತಿಥಿ ಗೃಹ, ಬೆಳ್ಳಿರಥ ನಿರ್ಮಾಣದಂತಹ ಶಾಶ್ವತ ಕೆಲಸ ಮಾಡಿದ್ದೇನೆ. ದೇವಾಲಯದ ಅನುದಾನದಲ್ಲಿ 13 ಸಣ್ಣ ಪುಟ್ಟ ಸಮಾಜಗಳಿಗೆ ಅನುದಾನ ನೀಡಿ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾಗಿದ್ದೇನೆ. 300 ಕೋಟಿ ರೂ. ವೆಚ್ಚದಲ್ಲಿ ಜಲಜೀವನ್ ಮಿಷನ್ ಅಡಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಹೀಗಾಗಿ ಮುಂಬರುವ ದಿನಗಳಲ್ಲಿ ನಿಮ್ಮ ಸೇವೆ ಮಾಡಲು ಮತ್ತೊಂದು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಭರವಸೆ ಸುಳ್ಳು: ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ 2 ಸಾವಿರ, 200 ಯೂನಿಟ್ ವಿದ್ಯುತ್, ನಿರುದ್ಯೋಗಿ ಯುವಕರಿಗೆ 1500 ರೂ., ಪದವೀಧರರಿಗೆ 3 ಸಾವಿರ ನೀಡುವುದಾಗಿ ಘೋಷಿಸಿದೆ. ಇದು ಹುಸಿ ಸುಳ್ಳು. ಕಾಂಗ್ರೆಸ್ ನಾಯಕರು ದೂರದೃಷ್ಟಿ ಇಲ್ಲದೆ ರಾಜ್ಯವನ್ನು ಸಾಲದ ಸುಳಿಗೆ ನೂಕಲು ಹೊರಟಿದ್ದಾರೆ. ಅವರು ಸರ್ಕಾರ ನಡೆಸಲು ಹೊರಟಿದ್ದಾರೋ, ಇಲ್ಲ ಸಂತೆ ನಡೆಸಲು ಹೊರಟಿದ್ದಾರೋ ತಿಳಿಯದು ಎಂದು ವ್ಯಂಗ್ಯವಾಡಿದ ಅವರು ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ. ಅವರ ಘೋಷಣೆಗಳನ್ನೂ ಈಡೇರಿಸುವುದಿಲ್ಲ ಅವರ ಘೋಷಣೆಗಳೆಲ್ಲಾ ಸುಳ್ಳು ಭರವಸೆ ಎಂದರು.

ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಬಿ ಮಹೇಶ್, ತಾಪಂ ಮಾಜಿ ಸದಸ್ಯರಾದ ಬಿ.ಎಸ್. ರಾಮು, ಶಿವಣ್ಣ ಮುಖಂಡರಾದ ಸುರೇಶ್, ಸೋಮಣ್ಣ, ಗೋವರ್ಧನ್, ಜಿ.ಬಸವರಾಜು, ಸೌಭಾಗ್ಯ, ಗ್ರಾಪಂ ಸದಸ್ಯರಾದ ಮಹೇಶ್, ಹೊರಳವಾಡಿ ಗ್ರಾಪಂ ಅಧ್ಯಕ್ಷ ರಮೇಶ್, ಮಹದೇವು, ನವೀನ್‌ರಾಜ್, ನಾಗಣ್ಣ, ಗಂಗಾಧರ್ ಸೇರಿದಂತೆ ಇತರರಿದ್ದರು.



ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಾಸಕ ಅನಿಲ್ ಚಿಕ್ಕಮಾದು ಅವರ ಚುನಾವಣಾ ಖರ್ಚಿಗಾಗಿ ಚಕ್ಕೋಡನಹಳ್ಳಿ ಗ್ರಾಮದ ರಾಮೇಗೌಡ 10 ಸಾವಿರ, ಕಾಳಿಂಗೇಗೌಡ 5 ಸಾವಿರ, ಪಟ್ಟಣದ ಮುಸ್ಲಿಂ ಬ್ಲಾಕ್ ಕಾಂಗ್ರೆಸ್ ಮುಖಂಡ ಫಯಾಸ್ ಪಾಷ 50 ಸಾವಿರ ದೇಣಿಗೆ ನೀಡಿದರು. ಈ ವೇಳೆ ಮೈಮುಲ್ ನಿರ್ದೇಶಕ ಹಿರೇಗೌಡ, ಬೈಪಾಸ್ ಮಂಜು, ಹೋಂಡಾ ನಯಾಜ್, ನಟರಾಜ್, ಗ್ರಾಪಂ ಅಧ್ಯಕ್ಷ ಸಂತೋಷ್, ಮಾಜಿ ಅಧ್ಯಕ್ಷ ಕಾಳಿಂಗೇಗೌಡ, ಸುಬ್ರಹ್ಮಣಿ, ಪರಶಿವಮೂರ್ತಿ, ದಾದಾಫೀರ್, ಜಾಫರ್ ಷರೀಫ್, ಇಲಿಯಾಜ್ ಪಾಷಾ, ರಾಜು, ಮಂಜು, ಕಾಂಗ್ರೆಸ್ ಮುಖಂಡರು ಸೇರಿದಂತೆ ಇನ್ನಿತರರಿದ್ದರು.

UPSC ಮೂಲಕ ನೇಮಕಗೊಂಡ ಅಧಿಕಾರಿಗಳು ಡಕಾಯಿತರು



ಬಾಲಸೋರ್: ಕೇಂದ್ರ ಲೋಕಸೇವಾ ಆಯೋಗದ ಮೂಲಕ ನೇಮಕಗೊಂಡ ಅನೇಕ ಅಧಿಕಾರಿಗಳು ಡಕಾಯಿತರು ಎಂದು ಕೇಂದ್ರ ಸಚಿವ ಬಿಶ್ವೇಶ್ವರ ತುಡು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಬಾಲಸೋರ್ ಜಿಲ್ಲೆಯ ಬಲಿಪಾಲ್ನಲ್ಲಿರುವ ಸರ್ಕಾರಿ ಶಾಲೆಯ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಸಚಿವರು, ನಾನು ದೆಹಲಿಯಲ್ಲಿ ವಾಸಿಸುವ ಮನೆ ಹಿಂದೆ ಯುಪಿಎಸ್ಸಿ ಕಟ್ಟಡವಿದೆ ಎಂದು ತುಡು ಹೇಳಿದರು. ಅಲ್ಲಿ ಜಾಗತಿಕ ಮಟ್ಟದ ಅಧಿಕಾರಿಗಳನ್ನು ನೇಮಿಸಲಾಗುತ್ತದೆ. ಆ ಕಟ್ಟಡದ ಚಟುವಟಿಕೆಗಳನ್ನು ಗಮನಿಸಿದಾಗ ವಿಶ್ವ ದರ್ಜೆಯ ಅಧಿಕಾರಿಗಳು ದೊಡ್ಡ ಡಕಾಯಿತರು ಎಂದು ತಿಳಿದು ಬಂದಿದೆ. ಈ ಹಿಂದೆ ಅಧಿಕಾರಿಗಳ ಬಗ್ಗೆ ನನಗೆ ಭಿನ್ನ ಅಭಿಪ್ರಾಯವಿತ್ತು. ಅವರು ಬುದ್ಧಿವಂತರು ಎಂದು ನಾನು ಭಾವಿಸಿದೆ. ಆದರೆ, ಈಗ ಅವರು ದೊಡ್ಡ ಡಕಾಯಿತರು ಎಂದು ನನಗೆ ಅನಿಸಿತು ಎಂದು ಹೇಳಿದ್ದು ಈ ವಿಡಿಯೋ ಇದೀಗ ವೈರಲ್ ಆಗಿದೆ.

UPSC ಮೂಲಕ ನೇಮಕಗೊಂಡವರ ಬಗ್ಗೆ ನನಗೊಂದು ಕಲ್ಪನೆ ಇತ್ತು. ಅವರು ಅತ್ಯಂತ ಜ್ಞಾನದ ವ್ಯಕ್ತಿ ಮತ್ತು ಯಾವಾಗಲೂ ಉನ್ನತ ಸ್ಥಾನಗಳನ್ನು ಅಲಂಕರಿಸುತ್ತಾರೆ. ಆದರೆ ಅಲ್ಲಿಂದ ಅರ್ಹತೆ ಪಡೆದವರಲ್ಲಿ ಹೆಚ್ಚಿನವರು ಡಕಾಯಿತರು ಎಂದು ಈಗ ನನಗೆ ಅನಿಸುತ್ತಿದೆ. ನಾನು ಶೇಕಡಾ 100 ಎಂದು ಹೇಳುವುದಿಲ್ಲ, ಆದರೆ ಅವರಲ್ಲಿ ಹಲವರು ಡಕಾಯಿತರಿದ್ದಾರೆ ಎಂದಿದ್ದಾರೆ.

UPSC ದೇಶದ ಪ್ರಧಾನ ಕೇಂದ್ರ ನೇಮಕಾತಿ ಆಯೋಗವಾಗಿದೆ. ಇದು ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಉನ್ನತ ಸರ್ಕಾರಿ ಅಧಿಕಾರಿಗಳನ್ನು ನೇಮಿಸುತ್ತದೆ.

ತುಡು ಅವರು ತಮ್ಮ ಭಾಷಣದಲ್ಲಿ, ಅಂತಹ ವಿದ್ಯಾವಂತರಿದ್ದರೆ ನಮ್ಮ ಸಮಾಜ ಏಕೆ ಭ್ರಷ್ಟಾಚಾರ ಮತ್ತು ಅನ್ಯಾಯದ ಸುಳಿಯಲ್ಲಿ ಮುಳುಗಿದೆ? ಎಂದು ಪ್ರಶ್ನಿಸಿದರು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ನೈತಿಕತೆಯ ಕೊರತೆಯೇ ಇದಕ್ಕೆ ಕಾರಣ. ನಮ್ಮಲ್ಲಿ ಆಧ್ಯಾತ್ಮಿಕ ಶಿಕ್ಷಣ ಮತ್ತು ವಿಚಾರಗಳ ಕೊರತೆ ಇದೆ ಎಂದರು.

ಅಹಿಂಸಾ ಮಾರ್ಗ ತೋರಿದ ಮಹಾವೀರ

ಕೇಂದ್ರ ಪ್ರಾಣಿಗಳ ಕಲ್ಯಾಣ ಮಂಡಳಿಯ ರಾಜ್ಯ ಅಧ್ಯಕ್ಷ ಮಿತ್ತಲ್



ಮೈಸೂರು, ಏ.10– ಜೈನ ಧರ್ಮದ ಕೊನೆಯ ತೀರ್ಥಂಕರರಾಗಿದ್ದ ಭಗವಾನ್ ಮಹಾವೀರರು ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನು ತೋರಿಸಿದರು ಎಂದು ಕೇಂದ್ರ ಪ್ರಾಣಿಗಳ ಕಲ್ಯಾಣ ಮಂಡಳಿಯ ರಾಜ್ಯ ಅಧ್ಯಕ್ಷ ಮಿತ್ತಲ್ ಹೇಳಿದರು.

ಮೈಸೂರಿನ ಚಾಮುಂಡಿ ಬೆಟ್ಟದ ಪಾದದಲ್ಲಿ ಪಕ್ಷಿ ಪ್ರಾಣಿಗಳಿಗೆ ನೀರಿನ ತೊಟ್ಟಿ ಅಳವಡಿಸುವ ಮೂಲಕ ಮಹಾವೀರ ಜಯಂತಿಯನ್ನು ಅರ್ಥಪೂರ್ಣವಾಗಿ ಕೆಎಂಪಿಕೆ ಟ್ರಸ್ಟ್ ವತಿಯಿಂದ ಆಚರಿಸಲಾಯಿತು. ಆನಂತರ ಮಂಗಗಳಿಗೆ ಬಾಳೆಹಣ್ಣು ವಿತರಿಸಲಾಯಿತು. ಈ ವೇಳೆ ಮಾತನಾಡಿದ ಅವರು, ಮನುಷ್ಯ ಹುಟ್ಟಿನಿಂದಲೇ ಶ್ರೇಷ್ಠನಾಗುವುದಿಲ್ಲ. ಸತ್ಯದ ಹಾದಿಯಲ್ಲಿ, ದಾರ್ಶನಿಕರ ತತ್ವ–ಸಿದ್ಧಾಂತಗಳನ್ನು ನಂಬಿ ನಡೆದಾಗ ಮನುಷ್ಯನ ಜೀವನ ಶ್ರೇಷ್ಠವಾಗುವುದು ಎಂದು ಅಭಿಪ್ರಾಯಪಟ್ಟರು.

ಬಿಸಿಲಿನ ಬೇಗೆಯಿಂದ ಎಲ್ಲ ಜೀವಿಗಳು ತತ್ತರಿಸುತ್ತಿವೆ. ಮನುಷ್ಯರಷ್ಟೇ ಅಲ್ಲ, ಪ್ರಾಣಿ ಪಕ್ಷಿಗಳು ನೀರು, ಆಹಾರಕ್ಕಾಗಿ ಕಷ್ಟ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಾಣಿ, ಪಕ್ಷಿಗಳ ಸಂಕಷ್ಟ ಅರಿತು ಮಹಾವೀರ ಜಯಂತಿ ಅಂಗವಾಗಿ ನೀರಿನ ತೊಟ್ಟಿ ಅಳವಡಿಸಲು ಮುಂದಾಗಿದ್ದಾರೆ. ಮನುಷ್ಯನ ಜೀವ ಎಷ್ಟು ಮುಖ್ಯವೋ ಪ್ರಾಣಿ, ಪಕ್ಷಿಗಳ ಜೀವ ಕೂಡ ಅಷ್ಟೇ ಮುಖ್ಯ. ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಜಲಮೂಲಗಳು ಬತ್ತುತ್ತಿವೆ. ಕುಡಿಯುವ ನೀರಿಗೂ ತತ್ವಾರ ಶುರುವಾಗಿದೆ. ನೀರಿಗಾಗಿ ಮೈಲುಗಟ್ಟಲೆ ಅಲೆಯಬೇಕಾಗಿದೆ. ಇದು ಸಣ್ಣ ಪಕ್ಷಿ, ಪ್ರಾಣಿಗಳ ಬದುಕಿಗೆ ಮಾರಕವಾಗಿದೆ. ನೀರು ಮತ್ತು ಆಹಾರ ಇಲ್ಲದೆ ಪಕ್ಷಿಗಳು ಜೀವ ಕಳೆದುಕೊಳ್ಳುವ ಭೀತಿ ಕಾಡುತ್ತಿದೆ ಎಂದು ಹೇಳಿದರು. ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪೃಥ್ವಿ ಸಿಂಗ್ ಚಂದಾವತ, ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು, ರಾಕೇಶ್, ಸಚಿಂದ್ರ, ಹಾಗೂ ಇನ್ನಿತರರು ಭಾಗವಹಿಸಿದ್ದರು.

ಸಮುದ್ರ ಕಾರ್ಯಾಚರಣೆ ವೇಳೆ ದುರಂತ: ಐಎನ್‌ಎಸ್ ಬ್ರಹ್ಮಪುತ್ರದ ಭಾರತೀಯ ನೌಕಾಪಡೆ ಅಧಿಕಾರಿ ಸಾವು

ನವದೆಹಲಿ: ಸಮುದ್ರದಲ್ಲಿ ಕಾರ್ಯಾಚರಣೆ ವೇಳೆ ದುರಂತವೊಂದು ಸಂಭವಿಸಿದ್ದು, ಐಎನ್‌ಎಸ್ ಬ್ರಹ್ಮಪುತ್ರದಲ್ಲಿ ನಿಯೋಜನೆಗೊಂಡಿದ್ದ ಭಾರತೀಯ ನೌಕಾಪಡೆ ಅಧಿಕಾರಿಯೊಬ್ಬರು ಸಾವನ್ನಪ್ಪಿದ್ದಾರೆ.

ಐಎನ್‌ಎಸ್ ಬ್ರಹ್ಮಪುತ್ರದಲ್ಲಿ ನಿಯೋಜನೆಗೊಂಡ 23 ವರ್ಷದ ಜವಾನ ಕೂಡ ಸಮುದ್ರದಲ್ಲಿ ಕಾರ್ಯಾಚರಣೆಯ ಸಮಯದಲ್ಲಿ ಸಾವನ್ನಪ್ಪಿದ್ದು, ಈ ಕುರಿತು ತನಿಖೆಗೆ ಆದೇಶ ನೀಡಲಾಗಿದೆ. ಸಮುದ್ರದಲ್ಲಿ ಕಾರ್ಯಾಚರಣೆಯ ವೇಳೆ ಕ್ಷಿಪಣಿ ಹೊಂದಿದ ಹಡಗಿನಲ್ಲಿ ಗಂಭೀರವಾಗಿ ಗಾಯಗೊಂಡು ಸಾವನ್ನಪ್ಪಿದ್ದಾರೆ. ಅಧಿಕಾರಿಗಳು ಭಾನುವಾರ ಈ ಮಾಹಿತಿ ನೀಡಿದ್ದಾರೆ. ಮೃತರನ್ನು 23 ವರ್ಷದ ನೌಕಾಪಡೆ ಅಧಿಕಾರಿ ಮೋಹಿತ್ ಎಂದು ಗುರುತಿಸಲಾಗಿದ್ದು, ಅವರನ್ನು ಕ್ಷಿಪಣಿ ಯುದ್ಧನೌಕೆ ಐಎನ್‌ಎಸ್ ಬ್ರಹ್ಮಪುತ್ರದಲ್ಲಿ ಪೋಸ್ಟ್ ಮಾಡಲಾಗಿತ್ತು. ಮೋಹಿತ್ 'ಪ್ಲೋವ್ ಆರ್ಟಿಫೈಸರ್ 4' ಶ್ರೇಣಿಯ ಅಧಿಕಾರಿ ಎಂದು ತಿಳಿದುಬಂದಿದ್ದು, ಈ ಶ್ರೇಣಿಯು ಸಣ್ಣ ಅಧಿಕಾರಿಗೆ ಸಮಾನವಾಗಿರುತ್ತದೆ.

ಏಪ್ರಿಲ್ 8 ರಂದು ಸಮುದ್ರದಲ್ಲಿ ನಡೆದ ಘಟನೆಯಲ್ಲಿ, 23 ವರ್ಷದ ಮೋಹಿತ್, INS ಬ್ರಹ್ಮಪುತ್ರ, ಸಮುದ್ರದಲ್ಲಿ ಕಾರ್ಯಾಚರಣೆ ಮಾಡುವಾಗ ಉಂಟಾದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಬಳಿಕ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ ಎಂದು ನೌಕಾಪಡೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಪಘಾತದ ಕಾರಣ ತಿಳಿಯಲು ತನಿಖೆಗೆ ಆದೇಶಿಸಲಾಗಿದೆ ಎಂದು ಅವರು ಹೇಳಿದರು.

ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಮತ್ತು ಎಲ್ಲಾ ನೌಕಾಪಡೆಯ ಸಿಬ್ಬಂದಿ ಮೋಹಿತ್ ಅವರಿಗೆ ಗೌರವ ಸಲ್ಲಿಸಿದ್ದಾರೆ ಎಂದು ನೌಕಾಪಡೆ ಟ್ವೀಟ್‌ನಲ್ಲಿ ತಿಳಿಸಲಾಗಿದೆ.

ಮತ್ತೊಂದು ನೌಕಾಪಡೆ ದುರಂತ: ಈ ಹಿಂದೆಯೂ ಕೂಡ ಇಂತಹುದೇ ದುರಂತ ಸಂಭವಿಸಿತ್ತು. ಪಶ್ಚಿಮ ಬಂಗಾಳದ ಪನಗಢ್‌ನಲ್ಲಿ ತರಬೇತಿಯ ವೇಳೆ ನೌಕಾಪಡೆಯ ಮೆರೈನ್ ಕಮಾಂಡೋ ಗೋವಿಂದ್ ಸಾವನ್ನಪ್ಪಿದ್ದಾರೆ.

ಹಸಿರು ನಮ್ಮ ಉಸಿರು

ಮುತ್ತಿಟ್ಟು, ತನ್ನ ನಾಲಿಗೆ ಚೀಪುವಂತೆ ಹೇಳಿದ್ದ ವಿಡಿಯೋ ವೈರಲ್

ಬಾಲಕನ ಬಳಿ ಕ್ಷಮೆ ಯಾಚಿಸಿದ ದಲೈಲಾಮಾ



ನವದೆಹಲಿ: ಬಾಲಕನೊಬ್ಬನಿಗೆ ಮುತ್ತಿಟ್ಟು ತಮ್ಮ ನಾಲಿಗೆ ಚೀಪುವಂತೆ ಕೇಳಿದ್ದ ವಿಡಿಯೋವೊಂದು ವೈರಲ್ ಆದ ಬೆನ್ನಲ್ಲೇ ದಲೈಲಾಮಾ ಅವರು, ಬಾಲಕನ ಬಳಿ ಕ್ಷಮೆಯಾಚಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ವೇದಿಕೆ ಮೇಲೆ ಬಂದಿದ್ದ ಭಾರತೀಯ ಮಗುವಿಗೆ ಮುತ್ತಿಟ್ಟು ನಂತರ, ನೀನು ನನ್ನ ನಾಲಿಗೆ ಚೀಪುವೆಯಾ ಎಂದು ದಲೈಲಾಮಾ ಕೇಳಿದ್ದರು. ಇದರ ವಿಡಿಯೋ ವೈರಲ್ ಆಗಿದ್ದು. ತೀವ್ರ ಆಕ್ರೋಶ ವ್ಯಕ್ತವಾಗುತ್ತಿವೆ.

ಈ ಸಂಬಂಧ ಬಾಲಕನಿಗೆ ದಲೈಲಾಮಾ ಅವರು ಕ್ಷಮೆ ಯಾಚಿಸಿದ್ದಾರೆ. ಅಧಿಕೃತ ಹೇಳಿಕೆಯಲ್ಲಿ ತನ್ನ ಮಾತುಗಳಿಂದ ಅಪ್ರಾಪ್ತ ವಯಸ್ಕ ಬಾಲಕ ಮತ್ತು ಅವನ ಕುಟುಂಬಕ್ಕೆ ಉಂಟಾದ ನೋವಿಗೆ ವಿಷಾದಿಸುತ್ತೇನೆ ಎಂದು ಹೇಳಿದ್ದಾರೆ. ದಲೈಲಾಮಾ ಅವರು ಮುಗ್ಧ ಮತ್ತು ತಮಾಷೆಯ ರೀತಿಯಲ್ಲಿ ಭೇಟಿಯಾಗುವ ಜನರನ್ನು ಆಗಾಗ್ಗೆ ಕೀಟಲೆ ಮಾಡುತ್ತಾರೆ ಎಂದು ದಲೈಲಾಮಾ ಅವರು ಕಚೇರಿಯು ಹೇಳಿಕೆಯಲ್ಲಿ ತಿಳಿಸಿದೆ.

ಏ.16ರಂದು ಹೇಮಗಂಗಾ ಸಾಹಿತ್ಯ, ಸಾಂಸ್ಕೃತಿಕ ಪ್ರತಿಷ್ಠಾನ ಉದ್ಘಾಟನೆ



ಸಂತೋಷ್ | ರಮೇಶ್‌ಗುಬ್ಬಿ | ಶೋಭಾ | ಸೌಗಂಧಿಕ | ವಾಣಿ



ರೂಪಶ್ರೀ | ಅತಿಶಯ್ ಜೈನ್ | ಪತಂಗಿ ಎಸ್.ಮುರಳಿ | ವರಲಕ್ಷ್ಮಿ

ಮೈಸೂರು, ಏ. 10– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಶಾಲೆ ಆವರಣದಲ್ಲಿ ಏ. 16 ರಂದು ಬೆಳಗ್ಗೆ 10ಕ್ಕೆ ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಉದ್ಘಾಟನೆ, ಎ. ಹೇಮಗಂಗಾ ಅವರ ಬರಬಾರದೇ ನೀನು... ಗಜಲ್ ಸಂಕಲನ ಮತ್ತು ಮಾತಾಪು ಹಾಯ್ಕುಗಳ ಸಂಕಲನ ಕೃತಿಗಳ ಲೋಕಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ ಮತ್ತು ಕವಿಗೋಷ್ಠಿ ಸಮಾರಂಭವನ್ನು ಏರ್ಪಡಿಸಲಾಗಿದೆ.

ಕರುನಾಡ ಸಾಹಿತ್ಯ ನಿಧಿ ಪ್ರಶಸ್ತಿಗೆ ಎಂ.ಬಿ. ಸಂತೋಷ ಹಾಗೂ ಎ.ಎನ್. ರಮೇಶ್ ಗುಬ್ಬಿ, ಸಾಹಿತ್ಯ ಗಂಗಾ ಪ್ರಶಸ್ತಿಗೆ ಬಿ. ಶೋಭಾ, ಸೌಗಂಧಿಕ ವಿ. ಜೋಯಿಸ್, ಸಿ. ವಾಣಿ ರಾಘವೇಂದ್ರ ಹಾಗೂ ಎನ್.ಆರ್. ರೂಪಶ್ರೀ, ಗಾಯನ ಗಂಗಾ ಪ್ರಶಸ್ತಿಗೆ ಎಂ.ಕೆ. ಅತಿಶಯ್ ಜೈನ್, ಚುಟುಕು ಗಂಗಾ ಪ್ರಶಸ್ತಿಗೆ ಪತಂಗಿ ಎಸ್. ಮುರಳಿ, ಸಾಹಿತ್ಯ ಚಿಲುಮೆ ಪ್ರಶಸ್ತಿಗೆ ವರಲಕ್ಷ್ಮಿ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಬಿ. ಶೋಭ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 98863 41957, 9916287124 ಸಂಪರ್ಕಿಸಬಹುದು.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು